ಸಂಪುಟ: 13 Volume | ಸಂಚಿಕೆ: 322 Issue | ಪುಟಗಳು 08 Pages | ಗುರುವಾರ 12 ಫೆಬ್ರವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

**ಬೆಳಗು**

ಶಾಲೆಯಲ್ಲಿ ಕಲಿತದ್ದು ಮರೆತ ಬಳಿಕವೂನೆನಪಲ್ಲಿಉಳಿಯುವುದೇ ಶಿಕ್ಷಣ.

–ಆಲ್ಬರ್ಟ್ ಐನ್ ಸ್ಟೀನ್

# ಮಲ್ಲಮ್ಮ ನುಡಿ

ಕನ್ನಡ ಕಿರಣ

MN ಸತ್ಯಮೇವ ಜಯತೆ

ಸಂಪಾದಕರು: ರಮೇಶ ರೆಡ್ಡಿ

Mallammanudi Regional News Paper

ಪ್ರಾದೇಶಿಕ ಕನ್ನಡ ದೈನಿಕ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ನೆನ್ನೆ ನಿಧನರಾದ ಹಿರಿಯ ಪತ್ರಕರ್ತ ರಾಮಯ್ಯ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು, ಕುಟುಂಬದವರಿಗೆ ಸಾಂತ್ವನ ಹೇಳಿದ್ದಾರೆ. ಶಾಸಕರಾದ ರಿಜ್ವಾನ್ ಅರ್ಷದ್, ಮಾಜಿ ಸಚಿವರಾದ ಶಾಸಕ ಅಶ್ವಥ್ ನಾರಾಯಣ್, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಉಪಸ್ಥಿತರಿದ್ದರು.

ಸುಂದರ ನಗರಕ್ಕ ಸಾರ್ವಜನಿಕರ ಸಹಕಾರ ಅಗತ್ಯ 6

ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸವೇ ಸಂಸ್ಥೆಯ ಗುರಿ 7

ಕೈಗಾರಿಕಾ ನಿವೇಶನ ದರ ಕಡಿಮೆ: ಮನವಿ 8

## ಅರ್ಜುನ್ ಮದುವೆ ಆಮಂತ್ರಣ..!



• ಮಲ್ಲಮ್ಮ ನುಡಿ ವಾರ್ತೆ ಮುಂಬೈ

ಸಚಿನ್ ತೆಂಡೂಲ್ಕರ್ ಅವರು ತಮ್ಮ ಮಗ ಅರ್ಜುನ್ ಹಾಗೂ ಸಾನಿಯಾ ಜೋಡಿಯ ವಿವಾಹ ಸಮಾರಂಭದ ಸಿದ್ಧತೆ ಜೋರಾಗಿದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿ, ಪ್ರಧಾನಿಗಳಿಂದ ಹಿಡಿದು ಪ್ರಮುಖ ಗಣ್ಯರನ್ನು ಸಚಿನ್ ದಂಪತಿ ಆಹ್ವಾನಿಸಿದ್ದಾರೆ. ಅದೇ ರೀತಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ, ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೂ ವಿವಾಹ ಆಮಂತ್ರಣ ಪತ್ರವನ್ನು ನೀಡಿದ್ದಾರೆ. ಅರ್ಜುನ್ ತೆಂಡೂಲ್ಕರ್ ಸಾನಿಯಾ ಚಾಂದೋಕ್ ಅವರನ್ನು ಮಾರ್ಚ್ 3 ರಂದು ವಿವಾಹವಾಗಲಿದ್ದಾರೆ.

## ಅಕ್ರಮ ಅದಿರು: ತನಿಖೆಗೆ ಆದೇಶ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೇಂದ್ರ ಸರ್ಕಾರಿ ಸ್ವಾಮ್ಯದ ಎನ್.ಎಂ.ಡಿ.ಸಿ.ಯಿಂದ ಅಕ್ರಮ ಅದಿರು ಸಾಗಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸಿ ವರದಿ ನೀಡುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ ಖಂಡ್ರೆ ಆದೇಶ ನೀಡಿದ್ದಾರೆ.



ಈ ಸಂಬಂಧ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅರಣ್ಯ ಪಡೆ ಮುಖ್ಯಸ್ಥರಿಗೆ ಸೂಚನೆ ನೀಡಿರುವ ಅವರು, ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದ ತ್ರಿಸದಸ್ಯ ತಂಡ ರಚಿಸಿ ತನಿಖೆ ನಡೆಸಿ 7 ದಿನಗಳ ಒಳಗಾಗಿ ವರದಿ ಸಲ್ಲಿಸುವಂತೆ ತಿಳಿಸಿದ್ದಾರೆ. ಸದರಿ ಪ್ರಕರಣದಲ್ಲಿ ಅರಣ್ಯ ಪ್ರದೇಶದಿಂದ ಕಬ್ಬಿಣದ ಅದಿರು ಅಕ್ರಮವಾಗಿ ಸಾಗಾಟವಾಗಿದೆಯೇ, ನಿಯಮಗಳ ಉಲ್ಲಂಘನೆ ಆಗಿದೆಯೇ ಎಂಬ ತನಿಖೆ ನಡೆಸುವಂತೆ ಸ್ಪಷ್ಟಪಡಿಸಿರುವ ಅರಣ್ಯ ಸಚಿವರು, ಆರೋಪಿ ಲಾರಿ ಚಾಲಕ ನೀಡಿದ ಮಾಹಿತಿ ಆಧರಿಸಿ ಎರಡೂವರೆ ಸಾವಿರ ಟನ್ ಕಬ್ಬಿಣದ ಅದಿರನ್ನು ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಿಳಿಸಿರುವುದಾಗಿ ಮಾಧ್ಯಮಗಳಲ್ಲಿ ವರದಿಯಾಗಿರುವುದನ್ನೂ ಪ್ರಸ್ತಾಪಿಸಿದ್ದಾರೆ.

# ಡಿಸಿಎಂ ಡಿಕೆಶಿ ಹೈ ಭೇಟಿ?

### ಹೈಕಮಾಂಡ್ ಧುರೀಣರ ಪೈಕಿ ಕೆಲವರನ್ನು ಡಿಸಿಎಂ ಭೇಟಿ | ಕುರ್ಚಿ ಬಗ್ಗೆ ಕೇಳಿದ ಪ್ರಶ್ನೆಗೆ ಸಿಎಂ ಗರಂ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ರಾಜ್ಯ ಕಾಂಗ್ರೆಸ್‌ನಲ್ಲಿ ಗದ್ದುಗೆ ಗುದ್ದಾಟ ಜೋರಾಗಿದೆ. ಅದು ದಿನದಿಂದ ದಿನಕ್ಕೆ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದೆ. ಡಿಸಿಎಂ ಡಿಕೆ ಶಿವಕುಮಾರ್ ಅಸ್ಸಾಂ ಚುನಾವಣಾ ಉಸ್ತುವಾರಿ ನೆಪದಲ್ಲಿ ದೆಹಲಿಗೆ ತೆರಳಿದ್ದು, ಹೈಕಮಾಂಡ್ ನಾಯಕರ ಪೈಕಿ ಕೆಲವರನ್ನು ಭೇಟಿಯಾಗಿದ್ದಾರೆ ಎಂದು ಮೂಲಗಳು ಖಚಿತ ಪಡಿಸಿವೆ. ಏತನ್ಮಧ್ಯೆ ಕುರ್ಚಿ ಬಗ್ಗೆ ಕೇಳಿದ ಪ್ರಶ್ನೆಗೆ ಸಿಎಂ ಸಿದ್ದರಾಮಯ್ಯ ಗರಂ ಆದ ಪ್ರಸಂಗವೂ ನಡೆದಿದೆ.

**ಡಿಕೆಶಿ ಗೇಮ್ ಪ್ಲಾನ್:** ದೆಹಲಿಗೆ ತಲುಪುತ್ತಿದ್ದಂತೆಯೇ ಅವರು 136 ಎಂಬ ಸಂಖ್ಯೆಯನ್ನು ಉಲ್ಲೇಖಿಸಿ ನಂಬರ್ ಗೇಮ್ ಆರಂಭಿಸಿದ್ದಾರೆ. ಈ ಹಿಂದೆ ವಿಧಾನಸಭೆ ಅಧಿವೇಶನದಲ್ಲಿ ಸಿಎಂ ಸಿದ್ದರಾಮಯ್ಯ ಸೇರಿದಂತೆ ಎಲ್ಲಾ 136 ಕಾಂಗ್ರೆಸ್ ಶಾಸಕರು ತಮ್ಮೊಂದಿಗಿದ್ದಾರೆ ಎಂದು ಘೋಷಿಸಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಕಾಂಗ್ರೆಸ್ ಹೈಕಮಾಂಡ್ ತಮ್ಮ ಪರವಾಗಿದ್ದು ಮುಖ್ಯಮಂತ್ರಿ ಕುರ್ಚಿಯನ್ನು ತಮಗೆ ನೀಡುತ್ತದೆ ಎಂದು ಕಾಯುತ್ತಿದ್ದಾರೆ.



### 136 ಶಾಸಕರಿದ್ದಾರೆ: ಡಿಕೆಶಿ

ರಾಮನಗರ ಶಾಸಕ ಮತ್ತು ಅವರ ಬೆಂಬಲಿಗ ಇಕ್ಬಾಲ್ ಹುಸೇನ್ ಡಿಕೆ ಶಿವಕುಮಾರ್ ಅವರನ್ನು ಸಿಎಂ ಮಾಡಲು 80–90 ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಡಿಕೆ ಶಿವಕುಮಾರ್ ಸಿಎಂ ಸೇರಿ 136 ಶಾಸಕರು ನನ್ನ ಜೊತೆಯಲ್ಲಿದ್ದಾರೆ ಎಂದಿದ್ದಾರೆ. ಈ ಬಗ್ಗೆ ಯಾವುದೇ ಗೊಂದಲ ಪಡುವ ಅಗತ್ಯವಿಲ್ಲ ಎಂದಿದ್ದಾರೆ.

### ಸಂಸದೆ ಪ್ರಿಯಾಂಕಾ ಗಾಂಧಿ ಜೊತೆ ಚರ್ಚೆ

ಅಸ್ಸಾಂ ವಿಧಾನಸಭಾ ಚುನಾವಣೆಗೆ ಎಐಸಿಸಿ ವೀಕ್ಷಕರೂ ಆಗಿರುವ ಶಿವಕುಮಾರ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಮತ್ತು ವಯನಾಡ್ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಕರೆದಿದ್ದ ಸಭೆಯಲ್ಲಿ ಚುನಾವಣಾ ಸಿದ್ಧತೆಗಳ ಕುರಿತು ಚರ್ಚಿಸಲು ದೆಹಲಿಯಲ್ಲಿದ್ದರು. ಪ್ರಿಯಾಂಕಾ ಗಾಂಧಿಗೆ ಶಿವಕುಮಾರ್ ಅವರ ಬಗ್ಗೆ ಉತ್ತಮ ಅಭಿಪ್ರಾಯವಿದ್ದು, ನಾಯಕತ್ವದ ವಿಷಯದ ಬಗ್ಗೆ ಚರ್ಚಿಸುವ ಸಾಧ್ಯತೆ ಇದೆ.

### ಪದೇ ಪದೆ ಪ್ರಶ್ನೆ ಕೇಳಬೇಡಿ..!: ಮುಖ್ಯಮಂತ್ರಿ

ನಾನು ಹೈಕಮಾಂಡ್ ಹೇಳಿದಂತೆ ಕೇಳುತ್ತೇನೆ, ಪದೇ ಪದೆ ಪ್ರಶ್ನೆ ಕೇಳಬೇಡಿ. ನಿಮಗೆ ಅದು ಬಿಟ್ಟು ಬೇರೆ ವಿಷಯ ಇಲ್ಲವೇ, 3 ತಿಂಗಳಿಂದ ಇದೇ ವಿಷಯ ಆಯ್ತು ಆ ಬಗ್ಗೆ ಬೇರೆಯವರು ಮಾತನಾಡಿದರೆ ಅವರನ್ನೇ ಕೇಳಿ. ಹೈಕಮಾಂಡ್ ಹೇಳಿದಂತೆ ನಾನು, ಡಿಕೆಶಿವಕುಮಾರ್ ನಡೆದುಕೊಳ್ಳಬೇಕು. ಈ ಬಗ್ಗೆ ಪದೇ ಪದೇ ಕೇಳಬೇಡಿ ಎಂದು ಸಿಎಂ ಸಿಡಿಮಿಡಿಗೊಂಡಿದ್ದಾರೆ.

## ಸಂಪುಟ ಪುನಾರ್ರಚನೆ ಶೀಘ್ರ

ಏತನ್ಮಧ್ಯೆ ಕ್ಯಾಬಿನೆಟ್ ಹುದ್ದೆಯ ಆಕಾಂಕ್ಷಿಯಾಗಿರುವ ಕೌನ್ಸಿಲ್ ಕಾಂಗ್ರೆಸ್ ಮುಖ್ಯ ಸಚೇತಕ ಸಲೀಮ್ ಅಹ್ಮದ್, ದೆಹಲಿಯಲ್ಲಿ ಕೆಲವು ಹೈಕಮಾಂಡ್ ನಾಯಕರನ್ನು ಭೇಟಿಯಾಗಿ ರಾಜ್ಯದ ರಾಜಕೀಯ ಸನ್ನಿವೇಶದ ಬಗ್ಗೆ ತಿಳಿಸಿದ್ದಾರೆ. ಬಜೆಟ್ ಅಧಿವೇಶನದ ಬಳಿಕ ಸಂಪುಟ ಪುನರ್ರಚನೆ ನಡೆಯಲಿದೆ. ಬಜೆಟ್ ಅಧಿವೇಶನ ಮಾರ್ಚ್ 6 ರಂದು ಪ್ರಾರಂಭವಾಗುವ ಸಾಧ್ಯತೆಯಿದೆ.

## ದಿಲ್ಲಿಯಲ್ಲಿ ಗಣ್ಯರ ದಂಡು

ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್. ಮುನಿಯಪ್ಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಶಿವಕುಮಾರ್ ಸಹೋದರ ಡಿಕೆ ಸುರೇಶ್ ಸೇರಿದಂತೆ ಅನೇಕ ಬೆಂಬಲಿಗರು ದೆಹಲಿಯಲ್ಲಿ ಬೀಡುಬಿಟ್ಟಿದ್ದಾರೆ. ಬಜೆಟ್ ಮಂಡನೆಯಾದ ಬಳಿಕ ಮುಗಿದ ಯಾವುದೇ ಕ್ಷಣ ಯಾವುದೇ ಬದಲಾವಣೆ ಆಗಬಹುದು ಎಂದು ಮೂಲಗಳು ತಿಳಿಸಿವೆ.

ನಾನು ಹುದ್ದೆ ಬದಲಾವಣೆ ಬಗ್ಗೆ ಮಾತನಾಡುವುದಿಲ್ಲ. ಇದನ್ನೆಲ್ಲಾ ನೋಡುವವರು ದಿಲ್ಲಿಯಲ್ಲಿದ್ದಾರೆ. ಹೈಕಮಾಂಡ್ ನಿರ್ಧಾರವೇ ಅಂತಿಮ. ನಾನು ಅದಕ್ಕೆ ಬದ್ಧನಾಗಿರುತ್ತೇನೆ. ಕರೆಯದಿದ್ದರೆ ನಾನು (ದೆಹಲಿಗೆ) ಏಕೆ ಹೋಗಬೇಕು. ನನಗೆ ಬಜೆಟ್ ಸಿದ್ಧತೆ ಇದೆ.

–ಸಿದ್ದರಾಮಯ್ಯ, ಮುಖ್ಯಮಂತ್ರಿ






## ಸಿಎಂ ಕ್ಷಮೆ ಕೇಳಬೇಕು

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮುಖ್ಯಮಂತ್ರಿಗಳು ದೇಶದ ಪ್ರಧಾನಮಂತ್ರಿಗಳ ವಿರುದ್ಧ ಹೇಡಿ ಎಂಬ ಪದ ಬಳಸಿದ್ದು ಭಾರತೀಯರಿಗೆ ಮಾಡಿದ ಅಪಮಾನ ಎಂದು ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರು ತಿಳಿಸಿದ್ದಾರೆ.



ಬಿಜೆಪಿ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ, ಸಿದ್ದರಾಮಯ್ಯನವರು ಈ ಸಂಬಂಧ 146 ಕೋಟಿ ಜನರ ಕ್ಷಮೆ ಕೇಳಬೇಕೆಂದು ಆಗ್ರಹಿಸಿದ್ದಾರೆ. 2014ರಲ್ಲಿ ಮೋದಿಜೀ ಅವರನ್ನು ನರಹಂತಕ ಎಂದಿದ್ದರು. ನಿಮಗೆ ಚುನಾವಣೆಯಲ್ಲಿ ಜನರು ಛೀಮಾರಿ ಹಾಕಿದ್ದರು ಎಂದು ತಿಳಿಸಿದ್ದಾರೆ.

ಕೇವಲ ಕುರ್ಚಿಗಾಗಿ, ಸೋನಿಯಾ ಗಾಂಧಿ, ಅಪ್ರಬುದ್ಧ ರಾಜಕಾರಣಿ ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರಿಗೆ ಶಿರಬಾಗಿ ನಮಸ್ಕರಿಸುತ್ತೀರಲ್ಲವೇ? ಇದು ಅನುಭವಿ ರಾಜಕಾರಣಿಯಾದ ನಿಮಗೆ ಶೋಭೆ ತರುತ್ತದೆಯೇ ಎಂದು ಕೇಳಿದರು.

ನರೇಂದ್ರ ಮೋದಿಜೀ ಅವರು ನಿಮಗೆ ಹೆದರಿ ಓಡಿ ಹೋಗಿಲ್ಲ. ಕಾಂಗ್ರೆಸ್ ಪಕ್ಷವು ಮಹಿಳಾ ಸದಸ್ಯರ ಮೂಲಕ ಪ್ರತಿಭಟನೆಗೆ ಮುಂದಾಗಿತ್ತು. ಲೋಕಸಭಾ ಸ್ಪೀಕರ್ ಅವರ ಸಲಹೆ ಮೇರೆಗೆ ಆ ಸಂದರ್ಭದಲ್ಲಿ ಪಾಲ್ಗೊಂಡಿಲ್ಲ. ಎಲುಬಿಲ್ಲದ ನಾಲಿಗೆ ಎಂಬ ಕಾರಣಕ್ಕೆ ಹೀಗೆ ಮಾತನಾಡುತ್ತೀರಾ ಎಂದು ಪ್ರಶ್ನಿಸಿದ್ದಾರೆ.

ಕುರ್ಚಿಯ ವಿಷಯ ಬಂದಾಗ ನೀವು ಈ ರೀತಿ ಮಾತನಾಡುತ್ತೀರಿ. ಸಿದ್ದರಾಮಯ್ಯನವರು ಅಧಿಕಾರಕ್ಕೆ ಬಂದು 3 ವರ್ಷಗಳಾಗಿವೆ. ನಿಮ್ಮ ಸಾಧನೆ ಏನು ಎಂದು ಕೇಳಿದರು. ಹೀಗೆ ಮಾತನಾಡಿ ದೇಶದಲ್ಲಿ ಕಾಂಗ್ರೆಸ್ ಪಕ್ಷದ ಅಡ್ರೆಸ್ ಇಲ್ಲದಂತಾಗಿದೆ ಎಂದಿದ್ದಾರೆ.







# ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಂದ ಉಂಟಾಗುವ ಪ್ರಕರಣಗಳು

- **ಎಫ್‌ಐಆರ್‌ಗಳನ್ನು ನೋಂದಾಯಿಸಲು ಮಾರ್ಗಸೂಚಿಗಳನ್ನು ನೀಡಿದ ಕರ್ನಾಟಕ ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರಾದ**

**ಡಾ. ಎಂ.ಎ. ಸಲೀಮ್**



ವಿಶೇಷ ವರದಿ: ರಮೇಶ್ ರಡ್ಡಿ

- **ಮಲ್ಲಮ್ಮ ನುಡಿ ವಾರ್ತೆ ಹುಮನಬಾದ್ :**

ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಂದ ಉಂಟಾಗುವ ಪ್ರಕರಣಗಳಲ್ಲಿ ಎಫ್‌ಐಆರ್‌ಗಳನ್ನು ನೋಂದಾಯಿಸಲು 2026 ರ ಫೆಬ್ರವರಿ 7 ರ ಸುತ್ತೋಲೆ ಮೂಲಕ ಮಾರ್ಗಸೂಚಿಗಳನ್ನುಕರ್ನಾಟಕ ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರಾದ ಡಾ. ಎಂ.ಎ. ಸಲೀಮ್ ಅವರು ನೀಡಿದ್ದಾರೆ. ಈ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ರಾಜ್ಯದ ಎಲ್ಲಾ ಪೊಲೀಸ್ ಆಯುಕ್ತರು, ವಲಯಗಳ ಎಲ್ಲಾ ಐಜಿಪಿಗಳು/ಡಿಐಜಿಪಿಗಳು ಮತ್ತು ಎಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಸುತ್ತೋಲೆಯಲ್ಲಿ ತಿಳಿಸಲಾದ ಎಲ್ಲಾ ಮಾರ್ಗಸೂಚಿಗಳನ್ನು ಅಕ್ಷರಶಃ ಪಾಲಿಸಲು ಮತ್ತು ಅದನ್ನು ತಮ್ಮ ಘಟಕಗಳ ಎಲ್ಲಾ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ತಲುಪಿಸುವುದನ್ನು ಖಚಿತಪಡಿಸಿಕೊಳ್ಳಲು ಎಲ್ಲಾ ಅಧಿಕಾರಿಗಳಿಗೆ ಕರ್ನಾಟಕ ರಾಜ್ಯದ ಪೊಲೀಸ್ ಮಹಾನಿರ್ದೇಶಕರು ಮತ್ತು ಪೊಲೀಸ್ ಮಹಾನಿರೀಕ್ಷಕರು ಸೂಚನೆ ನೀಡಿದ್ದಾರೆ.

**ಸುತ್ತೋಲೆಯ ಪ್ರಮುಖ ಅಂಶಗಳಾದರು ಏನು...?**

ದಿನಾಂಕ: 28.03.2025 ರಂದು ಇಮ್ರಾನ್ ಪ್ರತಾಪ್‌ಗಾಧಿ ಗುಜರಾತ್ ರಾಜ್ಯ ಪ್ರಕರಣದಲ್ಲಿ ಭಾರತದ ಸುಪ್ರೀಂ ಕೋರ್ಟ್ ನಿಗದಿಪಡಿಸಿದಂತೆ ಪ್ರಾಥಮಿಕ ವಿಚಾರಣೆಗಳನ್ನು ಕೈಗೊಳ್ಳದೆ ಪೊಲೀಸ್ ಅಧಿಕಾರಿಗಳು ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಗೆ ಸಂಬಂಧಿಸಿದ ಪ್ರಕರಣವನ್ನು ಯಾಂತ್ರಿಕವಾಗಿ ದಾಖಲಿಸುತ್ತಿರುವುದು ಕಂಡುಬಂದಿದೆ. ಕ್ರಿಮಿನಲ್ ಮೇಲ್ಮನವಿ ಸಂಖ್ಯೆ: 1545/2025 ಕ್ಕೆ ಸಂಬಂಧಿಸಿದಂತೆ ಈ ಕಚೇ–ರಿಯು ಈಗಾಗಲೇ ಈ ಸಂಬಂಧ ಅಖಿಒ–3/41/2024 ರ ಸಂಖ್ಯೆ ಹೊಂದಿರುವ ಸುತ್ತೋಲೆಯನ್ನು ಹೊರಡಿಸಿದೆ. ಇದಲ್ಲದೆ, ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಂದ ಉಂಟಾಗುವ ಪ್ರಕರಣಗಳಲ್ಲಿ ಎಫ್ ಐ ಆರ್ ಗಳ ನೋಂದಣಿಗೆ ಸಂಬಂಧಿಸಿದಂತೆ ತೆಲಂಗಾಣ ಹೈಕೋರ್ಟ್ ರೂಪಿಸಿದ ಮಾರ್ಗಸೂಚಿಗಳನ್ನು ಭಾರತದ ಗೌರವಾನ್ವಿತ ಸುಪ್ರೀಂ ಕೋರ್ಟ್ ಎತ್ತಿಹಿಡಿದಿದೆ. ಆದ್ದರಿಂದ, ಇಲ್ಲಿಯೂ (ರಾಜ್ಯದಲ್ಲಿಯೂ) ಅದೇ ಮಾರ್ಗಸೂಚಿಗಳನ್ನು ಅಳವಡಿಸಿಕೊಳ್ಳಲಾಗಿದೆ ಮತ್ತು ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಎಫ್‌ಐಆರ್‌ಗಳ ಯಾಂತ್ರಿಕ ನೋಂದಣಿ ಮತ್ತು ಬಂಧನವನ್ನು ತಪ್ಪಿಸಲು ರಾಜ್ಯದ ಪೊಲೀಸ್ ಅಧಿಕಾರಿಗಳಿಗೆ ಮಾರ್ಗಸೂಚಿಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

**ಹಾಗಾದರೆ ಸುತ್ತೋಲೆಯಲ್ಲಿನ ಮಾರ್ಗಸೂಚಿಗಳಾದರೂ ಯಾವುವು**

ಆದ್ದರಿಂದ, ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಎಫ್‌ಐಆರ್ ನೋಂದಾಯಿಸಲು ಯಾವುದೇ ದೂರು ಅಥವಾ ಮಾಹಿತಿಯನ್ನು ಸ್ವೀಕರಿಸಿದಾಗ, ಪೊಲೀಸ್ ಅಧಿಕಾರಿಗಳು ಈ ಕೆಳಗಿನ ಮಾರ್ಗಸೂಚಿಗಳನ್ನು ಅನುಸರಿಸಬೇಕು:

**1) ಸ್ಥಳದ ದೃಢೀಕರಣ:** ಯಾವುದೇ ಆರೋಪದ ಮೇಲೆ ಎಫ್‌ಐಆರ್ ದಾಖಲಿಸುವ ಮೊದಲು ಮಾನನಷ್ಟ ಅಥವಾ ಅಂತಹುದೇ ಅಪರಾಧಗಳನ್ನು ಎಸಗಿದರೆ, ದೂರುದಾರರು ಕಾನೂನಿನ ದೃಷ್ಟಿಯಿಂದ "ನೊಂದಣಿಗೊಳಗಾದ ವ್ಯಕ್ತಿ" ಎಂದು ಅರ್ಹತೆ ಹೊಂದಿದ್ದಾರೆಯೇ ಎಂದು ಪೊಲೀಸರು ಪರಿಶೀಲಿಸಬೇಕು. ವರದಿಯು ಗುರುತಿಸಬಹುದಾದ ಅಪರಾಧಕ್ಕೆ ಸಂಬಂಧಿಸಿದೆ ಎಂಬುದನ್ನು ಹೊರತುಪಡಿಸಿ, ಸಂಬಂಧವಿಲ್ಲದ ಮೂರನೇ ವ್ಯಕ್ತಿಗಳ ದೂರುಗಳನ್ನು ನಿರ್ವಹಿಸಲಾಗುವುದಿಲ್ಲ.

**2) ಗುರುತಿಸಬಹುದಾದ ಅಪರಾಧಗಳಲ್ಲಿ ಪ್ರಾಥಮಿಕ ವಿಚಾರಣೆ:**

ಎಲ್ಲಿ ಪ್ರಾತಿನಿಧ್ಯ/ದೂರು ಗುರುತಿಸಬಹುದಾದ ಅಪರಾಧವನ್ನು ಬಹಿರಂಗಪಡಿಸಿದಾಗ, ಪೊಲೀಸರು ಅಪರಾಧವನ್ನು ದಾಖಲಿಸುವ ಮೊದಲು, ಆಪಾದಿತ ಅಪರಾಧದ ಶಾಸನಬದ್ಧ ಅಂಶಗಳು ಪ್ರಾಥಮಿಕವಾಗಿ ಸಾಬೀತಾಗಿದೆಯೇ ಎಂದು ಖಚಿತಪಡಿಸಿಕೊಳ್ಳಲು ಪ್ರಾಥಮಿಕ ವಿಚಾರಣೆಯನ್ನು ನಡೆಸಬೇಕು.

**3) ಮಾಧ್ಯಮ ಪೋಸ್ಟ್/ಭಾಷಣ ಸಂಬಂಧಿತ ಅಪರಾಧಗಳಿಗೆ ಹೆಚ್ಚಿನ ಮಿತಿ:**

ಹಿಂಸೆ, ದ್ವೇಷ ಅಥವಾ ಸಾರ್ವಜನಿಕ ಅವ್ಯವಸ್ಥೆಗೆ ಪ್ರಚೋದನೆಯನ್ನು ಬಹಿರಂಗಪಡಿಸುವ ಪ್ರಾಥಮಿಕ ಮಾಹಿತಿಯ ಪುರಾವೆಗಳು ಇಲ್ಲದಿದ್ದರೆ, ದ್ವೇಷದ ಪ್ರಚಾರ, ಉದ್ದೇಶಪೂರ್ವಕ ಅವಮಾನ, ಸಾರ್ವಜನಿಕ ಕಿಡಿಗೇಡಿತನ, ಸಾರ್ವಜನಿಕ ಸುವ್ಯವಸ್ಥೆಗೆ ಬೆದರಿಕೆ ಅಥವಾ ದೇಶದ್ರೋಹದ ಆರೋಪದ ಯಾವುದೇ ಪ್ರಕರಣವನ್ನು ದಾಖಲಿಸಲಾಗುವುದಿಲ್ಲ. ಕೇದಾರ್ ನಾಥ್ ಸಿಂಗ್ ವಿರುದ್ಧ ಬಿಹಾರ ರಾಜ್ಯ, 1962 Supp (2) SCR 769, ಮತ್ತು ಶ್ರೇಯಾ ಸಿಂಘಾಲ್ ವಿರುದ್ಧ ಭಾರತ ಒಕ್ಕೂಟ, (2015) 5 SCC 1 ರಲ್ಲಿ ನಿಗದಿಪಡಿಸಿದ ತತ್ವಗಳಿಗೆ ಅನುಗುಣವಾಗಿ ಈ ಮಿತಿಯನ್ನು ಅನ್ವಯಿಸಬೇಕು.

**4) ರಾಜಕೀಯ ಭಾಷಣ/ಪೋಸ್ಟ್ ರಕ್ಷಣೆ:**

ಕಠಿಣ, ಆಕ್ರಮಣಕಾರಿ ಅಥವಾ ವಿಮರ್ಶಾತ್ಮಕ ರಾಜಕೀಯ ಭಾಷಣಕ್ಕೆ ಸಂಬಂಧಿಸಿದಂತೆ ಪೊಲೀಸರು ಯಾಂತ್ರಿಕವಾಗಿ ಪ್ರಕರಣಗಳನ್ನು ದಾಖಲಿಸಬಾರದು. ಭಾಷಣವು ಹಿಂಸಾಚಾರಕ್ಕೆ ಪ್ರಚೋದನೆ ನೀಡಿದಾಗ ಅಥವಾ ಸಾರ್ವಜನಿಕ ಸುವ್ಯವಸ್ಥೆಗೆ ಸನ್ನಿಹಿತ ಬೆದರಿಕೆಯನ್ನು ಉಂಟು ಮಾಡಿದಾಗ ಮಾತ್ರ ಕ್ರಿಮಿನಲ್ ಕಾನೂನನ್ನು ಅನ್ವಯಿಸಬಹುದು. ಸಂವಿಧಾನದ 19(1)(a) ವಿಧಿಯ ಅಡಿಯಲ್ಲಿ ಮುಕ್ತ ರಾಜಕೀಯ ಟೀಕೆಗೆ ಸಾಂವಿಧಾನಿಕ ರಕ್ಷಣೆಗಳನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಬೇಕು.

**5) ಮಾನನಷ್ಟವನ್ನು ಅರಿಯಲಾಗದ ಅಪರಾಧ ಎಂದು ವರ್ಗೀಕರಣ:**

ಮಾನನಷ್ಟವನ್ನುಅರಿಯಲಾಗದಅಪರಾಧಎಂದುವರ್ಗೀಕರಿಸಲಾಗಿರುವುದರಿಂದ, ಪೊಲೀಸರು ಅಂತಹ ವಿಷಯಗಳಲ್ಲಿ ನೇರವಾಗಿ ಎಫ್‌ಐಆರ್ ಅಥವಾ ಅಪರಾಧವನ್ನು ದಾಖಲಿಸಲು ಸಾಧ್ಯವಿಲ್ಲ. ದೂರುದಾರರು ನ್ಯಾಯ ವ್ಯಾಪ್ತಿಯ ಮ್ಯಾಜಿಸ್ಟ್ರೇಟ್ ಅವರನ್ನು ಸಂಪರ್ಕಿಸಲು ನಿರ್ದೇಶಿಸಬೇಕು. ಬಿಎನ್‌ಎಸ್‌ಎಸ್‌ನ ಸೆಕ್ಷನ್ 174(2) ಅಡಿಯಲ್ಲಿ ಮ್ಯಾಜಿಸ್ಟ್ರೇಟ್‌ನ ನಿರ್ದಿಷ್ಟ ಆದೇಶದ ಮೇರೆಗೆ ಮಾತ್ರ ಪೊಲೀಸ್ ಕ್ರಮ ಕೈಗೊಳ್ಳಬಹುದು.

**6) ಬಂಧನ ಮಾರ್ಗಸೂಚಿಗಳ ಅನುಸರಣೆ:**

ಎಲ್ಲಾ ಸಂದರ್ಭಗಳಲ್ಲಿ, ಪೊಲೀಸರು ಅರ್ನೇಶ್ ಕುಮಾರ್ ವರ್ಸಸ್ ಸ್ಟೇಟ್ ಆಫ್ ಬಿಹಾರ, (2014) 8 ಖಅಅ 273 ರಲ್ಲಿ ನಿಗದಿಪಡಿಸಿದ ತತ್ವಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸ್ವಯಂಚಾಲಿತ ಅಥವಾ ಯಾಂತ್ರಿಕ ಬಂಧನಗಳು ಸ್ವೀಕಾರಾರ್ಹವಲ್ಲ ಮತ್ತು ಕ್ರಿಮಿನಲ್ ಪ್ರಕ್ರಿಯೆಯ ಅನುಷ್ಠಾನದಲ್ಲಿ ಪ್ರಮಾಣಾನುಗುಣತೆಯ ತತ್ವವನ್ನು ಪಾಲಿಸಬೇಕು.

**7) ಸೂಕ್ಷ್ಮ ಪ್ರಕರಣಗಳಲ್ಲಿ ಪೂರ್ವ ಕಾನೂನು ಪರಿಶೀಲನೆ:**

ರಾಜಕೀಯ ಭಾಷಣ/ಪೋಸ್ಟ್ ಅಥವಾ ಇತರ ಸೂಕ್ಷ್ಮ ಅಭಿವ್ಯಕ್ತಿ ರೂಪಗಳನ್ನು ಒಳಗೊಂಡ ವಿಷಯಗಳಲ್ಲಿ, ಪ್ರಸ್ತಾವಿತ ಕ್ರಮವು ಕಾನೂನುಬದ್ಧವಾಗಿ ಸುಸ್ಥಿರವಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಪೊಲೀಸರು ಎಫ್‌ಐಆರ್ ದಾಖಲಿಸುವ ಮೊದಲು ಪಬ್ಲಿಕ್ ಪ್ರಾಸಿಕ್ಯೂಟರ್‌ನಿಂದ ಪೂರ್ವ ಕಾನೂನು ಅಭಿಪ್ರಾಯವನ್ನು ಪಡೆಯಬೇಕು.

**8) ಕ್ಷುಲ್ಲಕ ಅಥವಾ ಪ್ರೇರಿತದೂರುಗಳು:**

ದೂರು ಕ್ಷುಲ್ಲಕ, ಕಿರಿಕಿರಿ ಅಥವಾ ರಾಜಕೀಯ ಪ್ರೇರಿತವೆಂದು ಕಂಡುಬಂದಲ್ಲಿ, ಪೊಲೀಸರು ಬಿಎನ್‌ಎಸ್‌ಎಸ್‌ನ ಸೆಕ್ಷನ್ 176(1) ರ ಅಡಿಯಲ್ಲಿ ತನಿಖೆಗೆ ಸಾಕಷ್ಟು ಆಧಾರಗಳಿಲ್ಲ ಎಂದು ಉಲ್ಲೇಖಿಸಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕು.

# ಮನಸ್ಸು, ಮಾತು, ಕೃತಿಗಳಲ್ಲೊಂದಾತನೇ ಮಹಾತ್ಮ :ಹಾರಕೂಡ ಶ್ರೀ



ಮಲ್ಲಮ್ಮ ನುಡಿ ವಾರ್ತೆ.ಬಸವಕಲ್ಯಾಣ

ಪ್ರಾಂಜಲವಾದ ಮನಸ್ಸು, ಮುತ್ತಿನಂತಹ ಮಾತು ಹಾಗೂ ಮಾತಿಗೆ ಬದ್ಧವಾದ ಕೃತಿ ಇಂತಹ ಮೌಲ್ಯಗಳನ್ನು ಬದುಕಿನುದ್ದಕ್ಕೂ ಧಾರಣ ಮಾಡಿಕೊಂಡವನೇ ಮಹಾತ್ಮ ಎನಿಸಿಕೊಳ್ಳಬಲ್ಲನು ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು. ತಾಲೂಕಿನ ಹತ್ಯಾಳ ಗ್ರಾಮದಲ್ಲಿ ಶ್ರೀ ಛತ್ರಪತಿ ಶಿವಾಜಿ ಮಹಾರಾಜರ ಪ್ರತಿಮೆ ಅನಾವರಣ ಸಮಾರಂಭದ ಪಾವನ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀಗಳು, ಈ ದೇಶ ಕಂಡ ಶ್ರೇಷ್ಠ ವ್ಯಕ್ತಿತ್ವ ಶಿವಾಜಿ ಮಹಾರಾಜರು ಆಗಿದ್ದು ಅವರ ಛಾತ್ರ ತೇಜಸ್ಸು ಇಂದಿಗೂ ಭಾರತೀಯರ ಧಮನಿ ಧಮನಿಗಳಲ್ಲಿ ದಿವ್ಯ ಚೈತನ್ಯವಾಗಿ ಹರಿಯುತ್ತಿದೆ.

ಸ್ವಧರ್ಮದಲ್ಲಿ ನಿಷ್ಠೆ ಪರಧರ್ಮದಲ್ಲಿ ಸೌಹಾರ್ದಾತೆ ಭಾವ ಹೊಂದಿರುವ ಹಿಂದೂಧರ್ಮ ದೇಶದ ವಿವಿಧತೆಯಲ್ಲಿ ಏಕತೆಯನ್ನು ಕಾಪಾಡಿಕೊಂಡು ಬರುತ್ತಿರುವುದು ಜಗತ್ತಿಗೆ ನೀಡಿದ ದೊಡ್ಡ ಆದರ್ಶವೆಂದು ನುಡಿದರು.

ಹತ್ಯಾಳ ಗ್ರಾಮದಲ್ಲಿ ಪ್ರತಿಷ್ಠಾಪಿಸಲ್ಪಟ್ಟ ಶಿವಾಜಿ ಮಹಾರಾಜರ ಪ್ರತಿಮೆ ಎಲ್ಲರಲ್ಲಿ ನಿರಂತರವಾಗಿ ನವಚೈತನ್ಯ ಹೊಮ್ಮಿಸುತ್ತಿರಲಿ ಸರ್ವರಿಗೂ ಮಂಗಳವಾಗಲಿ ಎಂದು ಶುಭ ಹಾರೈಸಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಶಾಸಕ ಶರಣು ಸಲಗರ ಅವರು ಮಾತನಾಡಿ, ಶಿವಾಜಿ ಮಹಾರಾಜರು ಈ ದೇಶದ ಅಂತಶಕ್ತಿ ಜಾಗೃತಿಯ ನಿಧಿಯಾಗಿದ್ದಾರೆ. ಧೈರ್ಯ, ಸಾಹಸ, ಪ್ರಜಾಸ್ನೆಹಿ ಆಡಳಿತ ಕ್ರಮ ಹೈ೦ದವಿ ಸ್ವರಾಜ್ಯ ಇವು ಶಿವಾಜಿ ಮಹಾರಾಜರು ನಮಗೆ ನೀಡಿದ ಮಹತ್ತರ ಕೊಡುಗೆಗಳಾಗಿವೆ.

ನಮ್ಮ ಅಭಿಮಾನ ಅವರ ಪುತ್ತಳಿ ಅನಾವರಣಕ್ಕೆ ಸೀಮಿತವಾಗದೆ ಅವರ ಆದರ್ಶ ನಮ್ಮ ದೈನಂದಿನ ಬದುಕಿನಲ್ಲಿ ಪ್ರಕಟಗೊಳ್ಳುತ್ತಿರಬೇಕು ಎಂದು ನುಡಿದರು. ಶಿವಾಜಿ ಮಹಾರಾಜರ, ಸಂಭಾಜಿ ಮಹಾರಾಜರ ಧರ್ಮಪ್ರಜ್ಞೆ, ರಾಷ್ಟ್ರ ಪ್ರೇಮ ನವ ಭಾರತದ ನಿರ್ಮಾಣಕ್ಕೆ ಭದ್ರಬುನಾದಿ ಎಂಬುದನ್ನು ಅರಿತು ನಾವೆಲ್ಲರೂ ಆ ನಿಟ್ಟಿನಲ್ಲಿ ಹೆಜ್ಜೆ ಇಡಬೇಕು ಎಂದು ಕರೆ ನೀಡಿದರು.

ಖಂಡುಜಿಡಾಯಪುಡೆ ಮಾತನಾಡಿದರು. ಕಾಡಾ ಅಧ್ಯಕ್ಷರಾದ ಬಾಬು ಹೊನ್ನಾನಾಯಕ, ರಾಜಕುಮಾರ ಬಿರಾದಾರ ಸಿರಗಾಪೂರ, ಅನಿಲ ಭೂಸಾರೆ, ಸದಾನಂದ ಪಾಟೀಲ ಮುಂತಾದವರು ಉಪಸ್ಥಿತರಿದ್ದರು.

# ಸಮಯ ವ್ಯರ್ಥ ಮಾಡದೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ




- ಮಲ್ಲಮ್ಮ ನುಡಿ ವಾರ್ತೆ ,ಮುದಗಲ್ :

ಶಿಕ್ಷಣ ಕಲಿಯು ವಿದ್ಯಾರ್ಥಿಗಳು ಸಮಯ ವ್ಯರ್ಥ ಮಾಡದೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಿ ಎಂದು ಲಿಂಗಸುಗೂರು ಶಾಸಕ ಮಾನಪ್ಪ ಡಿ. ಹೇಳಿದರು. ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ, ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಬಿಳ್ಕೊಡುಗೆ ಕಾರ್ಯಕ್ರಮದ ಉದ್ಘಾಟಕರಾಗಿ ಮಾತನಾಡಿದ ಅವರು ಶಿಕ್ಷಣ ಎಂಬುದು ಭವಿಷ್ಯದ ಹಾದಿ ಹಾಗೂ ಸಂಸ್ಕಾರ ನೀಡುವುದಾಗಿದೆ. ಕಠಿಣ ಪರಿಶ್ರಮದ ಮೂಲಕ ಭವಿಷ್ಯ ರೂಪಿಸಿಕೊಳ್ಳಬೇಕು. ಉನ್ನತ ಹುದ್ದೆ ಹೊಂದಿ ಹಿರಿಯರನ್ನು ಗೌರವಿಸಬೇಕು. ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣ ಪಡೆಯಲು ಸರ್ಕಾರವು ಅನೇಕ ಯೋಜನೆಗಳ ಮೂಲಕ ಶಿಕ್ಷಣ ಪಡೆದು ದೇಶಕ್ಕೆ ನಾವು ಕೊಡುಗೆ ಕೊಡುವಂತಾಗಬೇಕು ಎಂದು ತಿಳಿಸಿದರು. ಕಾಲೇಜಿನ ಪ್ರಾಚಾರ್ಯ ಸುರೋಜಾ ಪಠಾಣ ಮಾತನಾಡಿ ಸ್ನೇಹ ಸಮ್ಮೇಳನ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶಾಸಕರಿಗೆ ಸನ್ಮಾನಿಸಿ ಅಭಿನಂದನೆ ಸಲ್ಲಿಸಿದರು.

ವಿದ್ಯಾರ್ಥಿ ಜೀವನದಲ್ಲಿ ಉತ್ತಮ ಕನಸುಗಳನ್ನು ಕಟ್ಟಿಕೊಂಡು ಆತ್ಮ ವಿಶ್ವಾಸದಿಂದ ಗುರಿ ಮುಟ್ಟಿ ಎಂದು ಭವಿಷ್ಯದ ಹಾದಿ ಮಾತು ತಿಳಿಸಿದರು. ಕಾರ್ಯಕ್ರಮದಲ್ಲಿ ಉಪನ್ಯಾಸಕರು ದೇವಪ್ಪ ನಿಂಗಪ್ಪ, ಉಪನ್ಯಾಸಕಿಯರು ಸಂತೋಷಿ ಕುಮಾರಿ, ಶಾಂತ ಮಾತನಾಡಿದರು. ಪಿಯುಸಿಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಬಿಜೆಪಿ ಮಂಡಲ ಅಧ್ಯಕ್ಷ ನಾಗಭೂಷಣ್, ಗಿರಿ ಮಲ್ಲನಗೌಡ ಕರಡಕಲ್, ಚಾಂದ್ ಪಾಷಾ, ನಬಿಸಾಬ್, ನಾಗೇಶ್ ಯಾದವ್, ಮಂಜುನಾಥ್ ನಂದವಾಡಗಿ, ಸಣ್ಣ ಸಿದ್ದಯ್ಯ ಸ್ವಾಮಿ, ಪರಶುರಾಮ್ ಭೋವಿ, ಸರ್ಕಾರಿ ಪ್ರೌಢಶಾಲೆ ಮುಖ್ಯ ಗುರುಗಳು ನೀಲಣ್ಣ ಅಚನೂರ ಸೇರಿದಂತೆ ಕಾಲೇಜಿನ ಉಪನ್ಯಾಸಕರು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಸಸ್ಯ ಸಂಪತ್ತಿನಿಂದ ಬದುಕಿಗೆ ನೆಮ್ಮದಿ : ವೈಜಯಂತಾ



- ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ:

ಸಸ್ಯ ಸಂಪತ್ತಿನಿಂದಲೆ ಮನುಷ್ಯನ ಬದುಕು ನೆಮ್ಮದಿಯಿಂದ ಇರಲು ಸಾಧ್ಯ. ಗಿಡ ಮರಗಳ ನೆಲೆಯಲ್ಲಿ ದೊಡ್ಡ ಜೀವಜಾಲ ಅಡಗಿದೆ ಎಂದು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ವೈಜಯಂತಾ ತ್ರಿಮುಖೆ ಹೇಳಿದರು.

ಶ್ರೀ ಬಸವೇಶ್ವರ ಪದವಿ ಕಾಲೇಜಿನಿಂದ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ ಸಹಯೋಗದಲ್ಲಿ ಬುಧವಾರ ತಾಲೂಕಿನ ಹಳ್ಳಿ ಗ್ರಾಮದಲ್ಲಿರುವ ತೋಟಗಾರಿಕೆ ಕೇಂದ್ರದಲ್ಲಿ ಶ್ರೀ ಬಸವೇಶ್ವರ ಪದವಿ ಕಾಲೇಜಿನ ಜೀವವಿಜ್ಞಾನ ವಿಭಾಗದಿಂದ ಹಮ್ಮಿಕೊಂಡಿದ್ದ ಜೀವ ಜಾಲ ಅಧ್ಯಯನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಲ್ಲಿ ನೆಲ, ನೀರು, ಸಸ್ಯ ಸಂಸ್ಕೃತಿಯ ಗಂಭೀರ ಅಧ್ಯಯನ ಅಗತ್ಯ ಎಂದರು.

ಸಸ್ಯ ಕಸೀಕರಣ, ತೋಟಗಾರಿಕೆ ತರಬೇತಿ ಮೂಲಕ ಆಸಕ್ತ ರೈತರಿಗೆ ಅನುಕೂಲವಾಗುವ ಹಾಗೂ ಲಾಭದಾಯಕ ಬೆಳೆ ಬೆಳೆಯಲು ಇಲಾಖೆಯಿಂದ ಹಲವು ಯೋಜನೆಗಳು ಅನುಷ್ಠಾನಕ್ಕೆ ತರಲಾಗಿದೆ ಎಂದರು.

ಹಳ್ಳಿ ತೋಟಗಾರಿಕೆ ಕೇಂದ್ರದ ಅಧಿಕಾರಿ ಶ್ರೀಧರ್ ಪೂಜಾರಿ ಮಾತನಾಡಿ, ಸಸ್ಯ ಸಂಸ್ಕೃತಿಯ ಸಂಶೋಧನಾತ್ಮಕ ಅಧ್ಯಯನಗಳು ಕಾಲೇಜು ಮತ್ತು ವಿಶ್ವವಿದ್ಯಾಲಯ ಮಟ್ಟದಲ್ಲಿ ನಡೆಯುತ್ತವೆ. ತೆ–ೂೕಟಗಾರಿಕೆ ಇಲಾಖೆ ರೈತರ ಮತ್ತು ಸರ್ಕಾರದ ಯೋಜನೆಗಳ ನಡುವಿನ ಸೋಪಾನವಾಗಿದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಚಾರ್ಯರಾದ ಡಾ. ಭೀಮಾಶಂಕರ ಬಿರಾದಾರ ಮಾತನಾಡಿ, ಗುಡ್ಡ, ಬೆಟ್ಟ, ನೀರು, ನೆಲ ನಿಸರ್ಗದ ಬಹುದೊಡ್ಡ ಜೀವಜಗತ್ತು ಕಾಪಿಟ್ಟುಕೊಂಡು ಬಂದಿದೆ. ಮನುಷ್ಯನ ಹಪಾಹಪಿತನದಿಂದ ಪ್ರಕೃತಿ ಹಲ್ಲೆಗೊಳಗಾಗುತ್ತಿದೆ. ನಗರ ಕೇಂದ್ರಿತ ಜೀವನದ ಹಂಬಲದಿಂದ ನಿಸರ್ಗಕ್ಕೆ ನಿರ್ಲಕ್ಷಿಸಲಾಗುತ್ತಿದೆ ಎಂದರು.

ಆಧುನಿಕತೆ, ಅಭಿವೃದ್ಧಿ ಎಂಬುದು ಜೀವ ಸಂಕುಲಕ್ಕೆ ಅನುಕೂಲವೋ ಅಪಾಯವೋ ಯೋಚಿಸಬೇಕಿದೆ. ಗಣಿಗಾರಿಕೆಯಿಂದ ಕಾಡಿನ ಸಂಪತ್ತು, ರಿಯಲ್ ಎಸ್ಟೇಟ್ ಗಳಿಂದ ಅನ್ನ ಕೊಡುವ ಫಲವತ್ತಾದ ನೆಲ ಸಂಪತ್ತು ಬಂಡವಾಳಶಾಹಿಗಳ ವಶವಾಗುತ್ತಿದೆ. ಮನುಷ್ಯನ ಅನಿಯಂತ್ರಿತ ಆಮಿಷಗಳಿಂದ ಪ್ರಾಕೃತಿಕ ಸಂಪತ್ತಿಗೆ ಅಪಾಯ ಒದಗಿದೆ ಎಂದರು.

ಕುಶಾಲತಾ ಕಂಬಾರ, ರೇಷ್ಮೆ ಇಲಾಖೆಯ ಬಸವರಾಜ ಗದಲೇಗಾಂವ ಸೇರಿದಂತೆ ಹಲವರಿದ್ದರು. ತಾಲೂಕು ತೋಟಗಾರಿಕೆ ಇಲಾಖೆ ಸಹಾಯಕ ನಿರ್ದೇಶಕಿ ವೈಜಯಂತಾ ತ್ರಿಮುಖೆ ಅವರು ವಿದ್ಯಾರ್ಥಿಗಳಿಗೆ ಸಸಿ ವಿತರಿಸುವ ಮೂಲಕ ಸಮಾರಂಭ ಉದ್ಘಾಟಿಸಿದರು. ಬಿ.ಎಸ್ಸಿ ಜೀವವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಸಸಿಕಸಿ, ಜೇನು ಸಾಕಾಣಿಕೆ, ರೇಷ್ಮೆ ಕೃಷಿ, ಎರೆಹುಳು ಬಗೆಗೆ ಕ್ಷೇತ್ರಾಧ್ಯಯನ ನಡೆಸಿದರು. ವಿವೇಕಾನಂದ ಶಿಂಧೆ ಸ್ವಾಗತಿಸಿದರು. ಜೀವ ವಿಜ್ಞಾನ ವಿಭಾಗ ಮುಖ್ಯಸ್ಥ ಅಶೋಕ ರೆಡ್ಡಿ ಗದಲೇಗಾವ ಪ್ರಾಸ್ತಾವಿಕ ಮಾತನಾಡಿದರು. ಸಂಗೀತಾ ಮಹಾಗಾವೆ ನಿರೂಪಿಸಿದರು. ಪ್ರಿಯಾ ಚೌಹಾಣ್ ವಂದಿಸಿದರು.

# ನೂತನ ಅನುಭವ ಮಂಟಪದಿಂದ

## ಬಸವಕಲ್ಯಾಣಕ್ಕೆ ವಿಶ್ವವಿಖ್ಯಾತಿ: ಈಶ್ವರಖಂಡ್ರೆ




- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಬಸವಕಲ್ಯಾಣದಲ್ಲಿ ನಿರ್ಮಾಣಗೊಳ್ಳುತ್ತಿರುವ ನೂತನ ಅನುಭವ ಮಂಟಪದಿಂದ ಬಸವಕಲ್ಯಾಣ ವಿಶ್ವ ವಿಖ್ಯಾತಿ ಪಡೆಯುವುದರಲ್ಲಿ ಸಂಶಯವೇ ಇಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಹೇಳಿದರು. ತಾಲೂಕಿನ ಮೊರಂಬಿ ಗ್ರಾಮದಲ್ಲಿ ನಂದೀಬಸವೇಶ್ವರ ಜಾತ್ರಾ ಮಹೋತ್ಸವ ನಿಮಿತ್ಯ ಆಯೋಜಿಸಿದ್ದ ಬಸವ ಉತ್ಸವ ಸಮಾರಂಭದಲ್ಲಿ ಸತ್ಕಾರ ಸ್ವೀಕರಿಸಿ ಅವರು ಮಾತನಾಡಿದರು. 12ನೇ ಶತಮಾನ ಹಾಗು 21ನೇ ಶತಮಾನಗಳಿಗೆ ಸಾಮ್ಯತೆ ಕಂಡು ಬರುತ್ತಿದೆ. ಅಂದು ಬಸವಾದಿ ಶರಣರ 770 ಅಮರ ಗಣಂಗಳು ಸೇರಿ–ಕೊಂಡು ರಚಿಸಿದ ಅನುಭವ ಮಂಟಪ ಇಂದು ನೂತನವಾಗಿ ನಿರ್ಮಾಣಗೊಂಡು ಜಗತ್ತಿನಲ್ಲಿಯೇ ಖ್ಯಾತಿ ಪಡೆಯುವ ಕಾಲಘಟ್ಟದಲ್ಲಿದೆ. ಮೊರಂಬಿ ಗ್ರಾಮದ ಯುವಕರು ಪ್ರತಿ ವರ್ಷ ಬಸವ ಉತ್ಸವ ಆಚರಿಸುವ ಮೂಲಕ ಗ್ರಾಮದಲ್ಲಿ ಶಾಂತಿ ಸಾಮರಸ್ಯ ಕಾಪಾಡಿಕೊಂಡು ಬರುತ್ತಿರುವುದು ಉತ್ತಮ ಸಂಗತಿಯಾಗಿದೆ ಎಂದು ಹೇಳಿದರು.

ಸಾನಿಧ್ಯ ವಹಿಸಿ ಮಾತನಾಡಿದ ಮುಚಳಂಬದ ನಾಗಭೂಷಣ ಶಿವಯೋಗಿ ಮಠದ ಶ್ರೀ ಪ್ರಣವಾನಂದ ಮಹಾಸ್ವಾಮಿಗಳು, ಬಸವಾದಿ ಶರಣರ ಹಾದಿಯಲ್ಲಿ ನಡೆದರೆ ನೆಮ್ಮದಿ ಜೀವನ ಸಾಗಿಸಬಹುದು ಎಂದು ಹೇಳಿದರು. ಅವಿನಾಶ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿದರು. ದಶರಥರಾವ ಅನವಾಲೆ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ನಾಗೇಂದ್ರಪ್ಪ ದಸಪಳ್ಳೆ, ಮುಖ್ತಾರ ಪಟೇಲ, ವಿಜಯಕುಮಾರ ವಾರದ ವಿಶ್ವನಾಥಯ್ಯಾ ಮಠಪತಿ, ಅಶೋಕರಾವ ಜಾಧವ, ರಾಮಣ್ಣಾ ನಾವುದಗೆ,

ಬಸವರಾಜ ಶೆಟೆಪ್ಪ, ಶಶಿಕಾಂತ ದಶರಥರಾವ ಪಾಟೀಲ, ಬಾಬುರಾವ ಮೇತ್ರೆ, ಅಜಮ ಷಾ, ಭಿಮಣ್ಣಾ ಜಮಾದಾರ, ಶರಣಪ್ಪ ಕರಂಜೆ, ರಂಜೀತಾ ಜೀತೇಂದ್ರ ಉಚ್ಚೇಕರ, ಪರಮೇಶ್ವರ ದೇವಣೆ, ವಿರಪಣ್ಣ ಆಳ್ಳೆ, ಷನ್ಮುಖಪ್ಪ ಉಚ್ಚೇಕರ, ಕಂಟೆಪ್ಪ ಮೆಳಕುಂದೆ, ಶಿವಪ್ಪ ಹೂಗಾರ,

ನಾಗೇಂದ್ರ ಕಾಂಬಳೆ, ವರ್ಷ ಉಚ್ಚೇಕರ, ಕಲ್ಯಾಣಿ ಬಸವರಾಜ ಆಳ್ಳೆ, ಪದ್ಮಾವತಿ ಆಳ್ಳೆ, ಶೋಭಾಬಾಯಿ ಹಲ್ಲಾಳೆ, ನಾಗಶೆಟ್ಟೆಪ್ಪ ಹುಸಲೂರೆ, ಶಿವರಾಜ ತುಕಾರಾಮ ಮೇತ್ರೆ, ಸುಮಿತ ಆಳ್ಳೆ ಉಪಸ್ಥಿತರಿದ್ದರು. ಬೇಬಾವತಿ ಡಿಗ್ಗಿ, ದಿನೇಶ, ಸಿದ್ದಲಿಂಗ ನೇತೆ, ಗುರಲಿಂಗಯ್ಯಾ ಸ್ವಾಮಿಯವರಿಂದ ಶಾಸ್ತ್ರೀಯ ಸಂಗೀತ ನಡೆಯಿತು. ರಂಜೀತಾ ಜೀತೇಂದ್ರ ಸ್ವಾಗತಿಸಿದರು. ಶರಣಪ್ಪ ಕಾರಂಜೆ ನಿರೂಪಿಸಿದರು. ಸುಮಿತ ವಂದಿಸಿದರು.

# ಸಂಪಾದಕೀಯ

ಮಾಣಿಕರೆಡ್ಡಿ ಕೌಡಾಳೆ
ಪ್ರಧಾನ ಸಂಪಾದಕರು
ಮೋ: 9845028349



## ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಸರ್ಕಾರದ ಗುರುತಿಸುವಂತಾಗಲಿ

ಭಾರತದ ಕ್ರೀಡಾ ಚಿಗಿಇತಿಹಾಸವನ್ನು ನೋಡಿದರೆ, ಅನೇಕ ಶ್ರೇಷ್ಠ ಕ್ರೀಡಾಪಟುಗಳು ಹುಟ್ಟಿಕೊಂಡಿರುವುದು ಗ್ರಾಮೀಣ ಮಣ್ಣಿನಿಂದಲೇ. ಹೊಲಗಳಲ್ಲಿ ದುಡಿಯುತ್ತಾ ಬೆಳೆದ ಕೈಗಳು ಮೈದಾನದಲ್ಲಿ ಸಾಧನೆಯ ಇತಿಹಾಸ ಬರೆಯುತ್ತವೆ. ಆದರೆ ದುರಾದೃಷ್ಟವಶಾತ್, ಗ್ರಾಮೀಣ ಭಾಗದ ಅನೇಕ ಪ್ರತಿಭೆಗಳು ಸೂಕ್ತ ಅವಕಾಶಗಳಿಲ್ಲದೆ, ಮಾರ್ಗದರ್ಶನವಿಲ್ಲದೆ ಮಸುಕಾಗುತ್ತಿವೆ. ಈ ಹಿನ್ನಲೆಯಲ್ಲಿ ಸರ್ಕಾರ ಗ್ರಾಮೀಣ ಕ್ರೀಡಾ ಪಟ್ಟುಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯಕ್ಕೆ ಗಂಭೀರವಾಗಿ ಮುಂದಾಗಬೇಕಾದ ಅವಶ್ಯಕತೆ ತೀವ್ರವಾಗಿದೆ.

ನಗರ ಪ್ರದೇಶಗಳಲ್ಲಿ ಕ್ರೀಡಾ ಸೌಲಭ್ಯಗಳು, ತರಬೇತಿ ಕೇಂದ್ರಗಳು, ಕೋಚ್‌ಗಳ ಲಭ್ಯತೆ ಸುಲಭವಾಗಿರುವಾಗ, ಗ್ರಾಮೀಣ ಯುವಕರು ಇನ್ನೂ ಮಣ್ಣಿನ ಮೈದಾನದಲ್ಲೇ ತಮ್ಮ ಪ್ರತಿಭೆಯನ್ನು ಮೆರೆದಾಡುತ್ತಿದ್ದಾರೆ. ಪ್ರತಿಭೆ ಇದ್ದರೂ ಸಾಧನಗಳ ಕೊರತೆ, ಆರ್ಥಿಕ ಅಡಚಣೆ, ಸೂಕ್ತ ಮಾರ್ಗದರ್ಶನದ ಅಭಾವ ಅವರ ಬೆಳವಣಿಗೆಗೆ ಅಡ್ಡಿಯಾಗುತ್ತಿದೆ. ಇದನ್ನು ಸರಿಪಡಿಸುವ ಹೊಣೆ ಸರ್ಕಾರದ ಮೇಲಿದೆ.

ಪ್ರತಿ ತಾಲೂಕು ಮಟ್ಟದಲ್ಲೂ ಕ್ರೀಡಾ ಪ್ರತಿಭೆ ಗುರುತಿಸುವ ಶಿಬಿರಗಳನ್ನು ನಡೆಸಬೇಕು. ಶಾಲಾ-ಕಾಲೇಜು ಹಂತದಲ್ಲೇ ಮಕ್ಕಳ ಕೌಶಲ್ಯವನ್ನು ಪತ್ತೆಹಚ್ಚಿ, ಅವರಿಗೆ ಉಚಿತ ತರಬೇತಿ, ಆಹಾರ, ವಸತಿ ಮತ್ತು ಕ್ರೀಡಾ ಸಾಮಗ್ರಿಗಳನ್ನು ಒದಗಿಸಬೇಕು. ಗ್ರಾಮೀಣ ಕ್ರೀಡಾಂಗಣಗಳ ಅಭಿವೃದ್ಧಿಗೆ ವಿಶೇಷ ಅನುದಾನ ನೀಡುವುದು ಕೂಡ ಅತ್ಯಂತ ಅಗತ್ಯ.

ಕೇವಲ ಕ್ರಿಕೆಟ್ ಮಾತ್ರವಲ್ಲದೆ ಕುಸ್ತಿ, ಕಬಡ್ಡಿ, ಅಥ್ಲೆಟಿಕ್ಸ್, ಹಾಕಿ, ವಾಲಿಬಾಲ್ ಮೊದಲಾದ ಗ್ರಾಮೀಣ ಪ್ರದೇಶಗಳಲ್ಲಿ ಜನಪ್ರಿಯವಾಗಿರುವ ಕ್ರೀಡೆಗಳಿಗೆ ವಿಶೇಷ ಒತ್ತು ನೀಡಬೇಕು. ಇವುಗಳಲ್ಲಿ ಅಪಾರ ಪ್ರತಿಭೆಗಳು ಅಡಗಿವೆ. ಸರಿಯಾದ ಬೆಂಬಲ ಸಿಕ್ಕರೆ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳು ಗ್ರಾಮಗಳಿಂದಲೇ ಹೊರಹೊಮ್ಮಬಹುದು.

ಇದೇ ವೇಳೆ ಖಾಸಗಿ ಸಂಸ್ಥೆಗಳು ಮತ್ತು ಕ್ರೀಡಾ ಅಕಾಡೆಮಿಗಳ ಸಹಭಾಗಿತ್ವದಲ್ಲಿ ಸರ್ಕಾರ ಯೋಜನೆ ರೂಪಿಸಬಹುದು. ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿವೇತನ, ಉದ್ಯೋಗಾವಕಾಶಗಳ ಭರವಸೆ ನೀಡಿದರೆ ಪೋಷಕರೂ ಮಕ್ಕಳನ್ನು ಕ್ರೀಡೆಗೆ ಪ್ರೋತ್ಸಾಹಿಸುವ ಮನೋಭಾವ ಬೆಳೆಸುತ್ತಾರೆ.

ಗ್ರಾಮೀಣ ಕ್ರೀಡಾ ಪ್ರತಿಭೆಗಳಿಗೆ ಗುರುತು ನೀಡುವುದು ಕೇವಲ ಕ್ರೀಡಾ ಕ್ಷೇತ್ರದ ಅಭಿವೃದ್ಧಿಯಲ್ಲ, ಅದು ದೇಶದ ಆರೋಗ್ಯಕರ ಯುವಶಕ್ತಿಗೆ ಹೂಡಿಕೆಯಾಗಿದೆ. ಶಿಸ್ತು, ಶ್ರಮ, ಸಮರ್ಪಣೆ ಎಂಬ ಮೌಲ್ಯಗಳು ಕ್ರೀಡೆಯ ಮೂಲಕ ಸಮಾಜಕ್ಕೆ ಪಸರಿಸುತ್ತವೆ. ಆದ್ದರಿಂದ ಸರ್ಕಾರ ಗ್ರಾಮೀಣ ಕ್ರೀಡಾ ಪಟ್ಟುಗಳನ್ನು ಹುಡುಕಿ ಬೆಳೆಸುವ ಕಾರ್ಯವನ್ನು ಆದ್ಯತೆಯಾಗಿ ಕೈಗೊಳ್ಳಬೇಕು. ಅದೇ ನಾಳೆಯ ಭಾರತವನ್ನು ವಿಶ್ವ ಕ್ರೀಡಾಂಗಣದಲ್ಲಿ ಗರ್ವದಿಂದ ನಿಲ್ಲಿಸುವ ಶಕ್ತಿಯಾಗಲಿದೆ.

# ಕೇಂದ್ರದ ಮಾಜಿ ಸಚಿವ ಖೂಬಾ ಹೇಳಿಕೆಗೆ ಕಾಂಗ್ರೆಸ್ ಖಂಡನೆ

- ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:

ಬೀದರ್ ಪಾಪನಾಶ ದೇಗುಲದ ಅಭಿವೃದ್ಧಿ ಕಾಮಗಾರಿ ಕುರಿತು ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ ಅವರು ಸರ್ವಜನಿಕವಾಗಿ ನೀಡಿರುವ ಅಸಂಯಮಿತ ಹೇಳಿಕೆ ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಬಗ್ಗೆ ಬಳಸಿರುವ ಅವಹೇಳನಕಾರಿ ಪದ ಬಳಸಿರುವುದನ್ನು ತಾಲೂಕು ಕಾಂಗ್ರೆಸ್ ಪಕ್ಷದ ಪದಾಧಿಕಾರಿಗಳು ಖಂಡಿಸಿದ್ದಾರೆ.

ಪಾಪನಾಶವು ಸಾವಿರಾರು ಭಕ್ತರ ಭಕ್ತಿ, ನಂಬಿಕೆ ಹಾಗೂ ಸಂಸ್ಕೃತಿಯ ಪ್ರತೀಕವಾಗಿದೆ. ಇಂತಹ ಪವಿತ್ರ ವಿಷಯವನ್ನು ರಾಜಕೀಯ ಲಾಭಕ್ಕಾಗಿ ತಗ್ಗಿಸಿ ಮಾತನಾಡುವುದು ಜಿಲ್ಲೆಯ ಜನರ ಧರ್ಮಿಕ ಭಾವನೆಗಳಿಗೆ ಧಕ್ಕೆ ತರುವಂತಾಗಿದೆ. ಜನಪ್ರತಿನಿಧಿಯಾಗಿ ಹಾಗೂ ಕೇಂದ್ರ ಸಚಿವ ಸಂಪುಟದಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿಯಿಂದ ಇಂತಹ ಅಸಭ್ಯ ಭಾಷೆ ನಿರೀಕ್ಷಿಸಲ್ಪಡುವುದಿಲ್ಲ.

ರಾಜಕೀಯದಲ್ಲಿ ಭಿನ್ನಾಭಿಪ್ರಾಯಗಳು ಸಹಜವಾದರೂ, ವ್ಯಕ್ತಿಗತ ನಿಂದನೆ ಮತ್ತು ಅಸಭ್ಯ ಪದಗಳ ಬಳಕೆ ಪ್ರಜಾಸತ್ತಾತ್ಮಕ ಮೌಲ್ಯಗಳಿಗೆ ವಿರುದ್ಧವಾಗಿದೆ. ಇಂತಹ ಹೇಳಿಕೆಗಳು ವೈಯಕ್ತಿಕ ಮಟ್ಟದವೆಯೋ ಅಥವಾ ಆ ಪಕ್ಷದ ರಾಜಕೀಯ ಸಂಸ್ಕೃತಿಯ ಪ್ರತಿಫಲನವೋ ಎಂಬುದನ್ನು ಭಾರತೀಯ ಜನತಾ ಪಕ್ಷ ಸ್ಪಷ್ಟಪಡಿಸಬೇಕು.

ತಾಲೂಕು ಕಾಂಗ್ರೆಸ್ ಪಕ್ಷದ ಮುಖಂಡರಾದ ಗಜಾನಂದ ಮೂಳಕಿರೆ ಮೇಹಕರ, ಪ್ರವೀಣ್ ಸ್ವಾಮಿ ಸಾಯಿಗಾವ, ಶಿವಕುಮಾರ ರಾಜಭವನ ಭಾಲ್ಕಿ, ದೀಲಿಪ್ ಪಾಟೀಲ್ ಮೇಹಕರ ಆಗ್ರಹಿಸಿದ್ದಾರೆ.

# ಫೆ. 12ರಂದು ಕೇಂದ್ರ ಸರಕಾರದ ನೀತಿಗಳ ವಿರುದ್ಧ ಪ್ರತಿಭಟನೆ

ಮಲ್ಲಮ್ಮ ನುಡಿ ವಾರ್ತೆ ,ಅಂಕೋಲಾ :

ಕೇಂದ್ರ ಸರಕಾರದ ನಾಲ್ಕು ಕಾರ್ಮಿಕ ಸಂಹಿತೆಗಳು, ವಿಬಿ ಗ್ರಾಮ ಜಿ ಕಾಯ್ದೆ–2025, ವಿದ್ಯುತ್‌ಶಕ್ತಿ ತಿದ್ದುಪಡಿ ಮಸೂದೆ–2025, ಶಾಂತಿ ಕಾಯ್ದೆ–2025, ಬೀಜ ಮಸೂದೆ–2025, ವಿಮಾ ಮಸೂದೆ–2025, ಅಮೆರಿಕ–ಭಾರತ ವಾಣಿಜ್ಯ ಒಪ್ಪಂದ ರದ್ದತಿಗಾಗಿ, ಸ್ಕೀಂ ನೌಕರರಿಗೆ ಕನಿಷ್ಠ ವೇತನ ಕಾಯ್ದೆ ಜಾರಿಗಾಗಿ, ಅರಣ್ಯ ಭೂಮಿ ಹಕ್ಕಿಗಾಗಿ ಫೆ. 12ರಂದು ಅಂಕೋಲಾ ಪಟ್ಟಣದಲ್ಲಿ ಪ್ರತಿಭಟನೆ ನಡೆಯಲಿದೆ. ಬೆಳಿಗ್ಗೆ 10.30ಕ್ಕೆ ಸತ್ಯಾಗ್ರಹ ಸ್ಮಾರಕ ಭವನದ ಎದುರಿನಿಂದ ರೈತರು, ಕಾರ್ಮಿಕರು, ನೌಕರರು, ಕೃಷಿ ಕೂಲಿಕಾರರು ಮುಂತಾದವರಿಂದ ಜಂಟಿ ಮೆರವಣಿಗೆ ಮತ್ತು ಪ್ರತಿಭಟನಾ ಪ್ರದರ್ಶನ ಜೈಹಿಂದ್ ವೃತ್ತದಲ್ಲಿ ನಡೆಯಲಿದೆ. ನೂರಾರು ಸಂಖ್ಯೆಯಲ್ಲಿ ಪಾಲ್ಗೊಳ್ಳಲು ತಾಲೂಕು ಮುಖಂಡರಾದ ಗೌರೀಶ ನಾಯಕ, ಸಂತೋಷ ನಾಯ್ಕ, ಗೀತಾ ಗೌಡ, ಪೂರ್ಣಿಮಾ ನಾಯ್ಕ, ವರದಾ ಅಂಕೋಲೆಕರ, ಶ್ಯಾಮಲಾ ನಾಯ್ಕ, ಉದಯ ನಾಯ್ಕ ಹೊಸಗದ್ದೆ ಜಂಟಿಯಾಗಿ ತಿಳಿಸಿದ್ದಾರೆ.

# ಒಂದು ದಿನದ ಜೇನು ಸಾಕಾಣೆ ತರಬೇತಿ: ಹೆಸರು ನೋಂದಣಿಗೆ ಸೂಚನೆ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:

–2025–26ನೇ ಸಾಲಿನಲ್ಲಿ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಯೋಜನೆಯಡಿ ಕೇಂದ್ರ ಪುರಸ್ಕೃತ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ತುಂತುರು ಮತ್ತು ಹನಿ ನೀರಾವರಿ ಪದ್ಧತಿ ಅಳವಡಿಕೆಯಿಂದ ಆಗುವ ಉಪಯೋಗಗಳು ಹಾಗೂ ಜೇನು ಸಾಕಾಣಿಕೆ ಕುರಿತು ಒಂದು ದಿನದ ತರಬೇತಿಯನ್ನು ಇದೇ ಫೆಬ್ರವರಿ 13ರಂದು ಕೋಟನೂರ(ಡಿ) ಜಿಲ್ಲಾ ಕೃಷಿ ತರಬೇತಿ ಕೇಂದ್ರಯಲ್ಲಿ ತರಬೇತಿಗಳನ್ನು ಆಯೋಜಿಸಲಾಗಿದೆ ಎಂದು ಕೋಟನೂರ(ಡಿ) ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

ಆಸಕ್ತಿಯುಳ್ಳ ಎಫ್.ಐ.ಡಿ. ಹೊಂದಿರುವ ರೈತರು ಹಾಗೂ ರೈತ ಸಂಪರ್ಕ ಕೇಂದ್ರಗಳಿಂದ ತುಂತುರು ಮತ್ತು ಹನಿ ನೀರಾವರಿ ಘಟಕಗಳನ್ನು ಪಡೆದ ರೈತರು ಕೃಷಿ ಅಧಿಕಾರಿಗಳಾದ ಯಾಸ್ಮಿನ್–9901604822 ಹಾಗೂ ಪ್ರಿಯಾಂಕ ಕುಲಕರ್ಣಿ 9164145939 ಇವರಿಗೆ ಸಂಪರ್ಕಿಸಿ ಹೆಸರನ್ನು ನೊಂದಾಯಿಸಿಕೊಳ್ಳಬೇಕು. ಎಫ್.ಐ.ಡಿ. ಹೊಂದಿರುವ ಆಸಕ್ತ ರೈತರು ನೊಂದಾಯಿಸಿಕೊಳ್ಳಬೇಕು. ಈ ಹಿಂದೆ ಸೂಕ್ಷ್ಮ ನೀರಾವರಿ ಕಾರ್ಯಕ್ರಮದ ಯೋಜನೆಯಡಿ ತರಬೇತಿ ಪಡೆದ ರೈತರನ್ನು ಪರಿಗಣಿಸಲಾಗುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

# ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆಕಲಬುರಗಿ:

ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ–1ರ ವತಿಯಿಂದ 110/33/11 ಕೆ.ವಿ. ಕರಜಗಿ ವಿದ್ಯುತ್ ವಿತರಣಾ ಕೇಂದ್ರ–ಕ್ಕೆ ಒಳಬರುವ 110 ಕೆವಿ ಮಾರ್ಗದ ಕಾಮಗಾರಿ ಕೈಗೊಂಡಿರುವ ಪ್ರಯುಕ್ತ ಇದೇ ಫೆಬ್ರವರಿ 12 ರಂದು ಬೆಳಿಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಸದರಿ ವಿತರಣಾ ಕೇಂದ್ರದಿಂದ ಹೊರಹೊಗುವ 11ಕೆವಿ ಫೀಡರ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದ್ದು, ಎಲ್ಲಾ ಗ್ರಾಹಕರು ಇದಕ್ಕೆ ಸಹಕರಿಸಬೇಕೆಂದು ಕಲಬುರಗಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ವಿಭಾಗ–1ರ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

110/11 ಕೆ.ವಿ ಕರಜಗಿ ವಿದ್ಯುತ್ ವಿತರಣಾ ಕೇಂದ್ರ: ಎಫ್–10 ಗೌರ(ಬಿ) ಐಪಿ, ಎಫ್–11 ಜೇವರ್ಗಿ ಎನ್.ಜೆ.ವೈ. ಫೀಡರಿನ ಅಶೋಕ ನಗರ, ಬಂಕಲಗಾ, ಉದಚಣ ಹಟ್ಟಿ, ಗೌರ(ಕೆ), ಗೌರ(ಬಿ), ನಂದರಗಾ, ದಿಕ್ಕಸಂಗಾ(ಕೆ), ಜೇವರ್ಗಿ(ಕೆ), ಜೇವರ್ಗಿ(ಬಿ) ಹಾಗೂ ತೆಲ್ಲೂಣಗಿ.

33ಕೆವಿ ಮಣ್ಣೂರ ಮತ್ತು 33ಕೆವಿ ಉದಚಣ: ಎಫ್–1 ಮಣ್ಣೂರ ಎನ್‌ಜೆವೈ, ಎಫ್–2 ಮಣ್ಣೂರ ಐಪಿ, ಎಫ್–3 ಹೊಸೂರ ಐಪಿ, ಎಫ್–4 ರಾಮನಗರ ಎನ್‌ಜೆವೈ, ಎಫ್–5 ರಾಮನಗರ ಐಪಿ, ಎಫ್–1 ಬಸವನಗರ ಐಪಿ, ಎಫ್–2 ಹಿರೀಯಾಳ ಐಪಿ, ಎಫ–3 ಉಡಚಣ ಐಪಿ, ಎಫ್–4 ಉಡಚಣ ಎನ್.ಜೆ.ವೈ, ಎಫ್–5 ಹಟ್ಟಿ ಐಪಿ, ಎಫ್–6 ಭೋಸಗಾ ಐಪಿ ಫೀಡರಿನ ಉದಚಣ, ಹಿರಿಯಾಳ, ದುದ್ದಣಗಿ, ಭಾಸಗಿ, ಮಂಗಳೂರ, ಮಣ್ಣೂರ, ಹೊಸೂರ, ರಾಮನಗರ, ಕೊದಿಗನೂರ, ಶಿವೂರ, ಬಾಬನಗರ, ಉಪ್ಪರವಾಡಿ ಹಾಗೂ ದೇವಪ್ಪಾ ನಗರ.

# ಕೇಂದ್ರ ಕಾರಾಗೃಹದಲ್ಲಿ ಕ್ರೀಯೇಟಿವ್ ಸಾಫ್ಟ್ ಟಾಯ್ಸ್ ಮೇಕರ್ ತರಬೇತಿಗೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ

ಕಲಬುರಗಿ ಕೇಂದ್ರ ಕಾರಾಗೃಹ ಹಾಗೂ ಗುಲಬರ್ಗಾ ಜನ ಶಿಕ್ಷಣ ಸಂಸ್ಥಾನ್ ಇವುಗಳ ಸಂಯುಕ್ತಾಶ್ರಯದಲ್ಲಿ ಕೇಂದ್ರ ಕಾರಾಗೃಹದ ಬಂದಿಗಳಿಗೆ (ಪ್ರತಿ ತಂಡದಲ್ಲಿ 20 ಜನ ಶಿಬಿರಾರ್ಥಿಗಳನ್ನು ಆಯ್ಕೆ ಮಾಡಿ) 45 ದಿನಗಳ ಹಮ್ಮಿಕೊಳ್ಳಲಾಗಿರುವ "ಕ್ರೀಯೇಟಿವ್ ಸಾಫ್ಟ್ ಟಾಯ್ಸ್ ಮೇಕರ್ (ಅಡವಾನ್ಸ್) ತರಬೇತಿ" ಕಾರ್ಯಕ್ರಮಕ್ಕೆ ಕಾರಾಗೃಹದ ಮುಖ್ಯ ಅಧೀಕ್ಷಕರಾದ ಕೆ. ಸುರೇಶ್ ಅವರು ಕಲಬುರಗಿ ಕೇಂದ್ರ ಕಾರಾಗೃಹದಲ್ಲಿ ಮಂಗಳವಾರ ಚಾಲನೆ ನೀಡಿದರು.

ನಂತರ ಅವರು ಮಾತನಾಡಿ, ಕೇಂದ್ರ ಕಾರಾಗೃಹದ ಬಂದಿಗಳು ಕಾರಾಗೃಹದಲ್ಲಿ ನೀಡುತ್ತಿರುವ ವೃತ್ತಿಪರ ತರಬೇತಿಯ ಲಾಭ ಪಡೆದುಕೊಳ್ಳಬೇಕು ಎಂದರು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಗುಲಬರ್ಗಾ ಜನ ಶಿಕ್ಷಣ ಸಂಸ್ಥಾನ್ ನಿರ್ದೇಶಕ ಸುರೇಂದ್ರ ಪಾಟೀಲ್ ಅವರು ಮಾತನಾಡಿ, ಕಲಬುರಗಿ ಕೇಂದ್ರ ಕಾರಾಗೃಹದ ಬಂದಿ ನಿವಾಸಿಗಳಿಗೆ

ತರಬೇತಿ ನೀಡಲು ತಮ್ಮ ಸಂಸ್ಥೆಯು ಮುಂದಾಗಿದ್ದು, ಪ್ರಾರಂಭದಲ್ಲಿ ಪ್ರತಿ ತಂಡಕ್ಕೆ 20 ಶಿಬಿರಾರ್ಥಿಗಳಂತೆ ವಿವಿಧ ವೃತ್ತಿಪರ ಕೌಶಲ್ಯ ತರಬೇತಿಗಳನ್ನು ನೀಡಲಾಗುತ್ತಿದ್ದು, ಕಾರಾಗೃಹದ ಬಂದಿಗಳು ಈ ತರಬೇತಿಯ ಲಾಭ ಪಡೆಯಬೇಕು ಎಂದರು.

ಕಾರ್ಯಕ್ರಮದಲ್ಲಿ ಕಲಬುರಗಿ ಕೇಂದ್ರ ಕಾರಾಗೃಹದ ಅಧೀಕ್ಷಕ ರಾಕೇಶ್ ಕಾಂಬಳೆ ಅವರು ಸಹ ಮಾತನಾಡಿದರು. ಈ ಕಾರ್ಯಕ್ರಮದಲ್ಲಿ ಗುಲಬರ್ಗಾ ಜನ ಶಿಕ್ಷಣ ಸಂಸ್ಥಾನ್‌ನ ರಾಜಶೇಖರ್ ಪಾಟೀಲ್, ಸಹಾಯಕ ಅಧೀಕ್ಷಕ ಬಿ. ಸುರೇಶ್ ಹಾಗೂ ಜೈಲರ್ ವೃಂದದವರು ಭಾಗವಹಿಸಿದರು.

ಪ್ರಾರಂಭದಲ್ಲಿ ಕೇಂದ್ರ ಕಾರಾಗೃಹದ ಸಹಾಯಕ ಆಡಳಿತಾಧಿಕಾರಿ ಭೀಮಾಶಂಕರ್ ಡಾಂಗೆ ಸ್ವಾಗತಿಸಿದರು. ಸಂಸ್ಥೆಯ ಶಿಕ್ಷಕರಾದ ನಾಗರಾಜ ಮುಲಗೆ ಕಾರ್ಯಕ್ರಮ ನಿರೂಪಿಸಿದರು. ಕೊನೆಯಲ್ಲಿ ಸಹಾಯಕ ಅಧೀಕ್ಷಕ ಚನ್ನಪ್ಪ ಯಟಗಲ್ ವಂದಿಸಿದರು.

# ಜನಮನಗೆದ್ದ ಮದನೂರ ಭಜನಾ ಮಂಡಳಿ

• ಮಲ್ಲಮ್ಮ ನುಡಿ ವಾರ್ತೆ,ಕಮಲನಗರ:

ತಾಲೂಕಿನ ಘಮಸುಬಾಯಿ ತಾಂಡಾದ ಶಾಸಕರ ನಿವಾಸದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದ್ದ ಇಚ್ಛಾಪೂರ್ತಿ ಶ್ರೀ ಮಾತಾ ಜಗದಂಬಾ ಜಾತ್ರಾ ಮಹೋತ್ಸವ ಹಾಗೂ ಜಾನಪದ ಸಂಭ್ರಮವು ಸಾಂಸ್ಕೃತಿಕ ಸೊಬಗಿನೊಂದಿಗೆ ಅದ್ಧೂರಿಯಾಗಿ ಜರುಗಿತು. ಈ ಭಕ್ತಿಪೂರ್ವಕ ಕಾರ್ಯಕ್ರಮದಲ್ಲಿ ಮದನೂರ ಗ್ರಾಮದ ನಂದಿ ಮಹಾದೇವ ಭಜನಾ ಮಂಡಳಿ ನಡೆಸಿಕೊಟ್ಟ ಭಜನಾ ಕೀರ್ತನೆ ಭಕ್ತಾದಿಗಳ ವಿಶೇಷ ಗಮನ ಸೆಳೆಯಿತು.ತಬಲಾ ವಾದನಕ್ಕೆ ಮಾರುಹೋದ ಭಕ್ತಸಮೂಹಭಜನಾ ಮೇಳದ ಪ್ರಮುಖ ಆಕರ್ಷಣೆಯಾಗಿ ಮದನೂರ ಗ್ರಾಮದ ಖ್ಯಾತ ವಾದಕ ಬಾಲಾಜಿ ಬಳತೆ ಅವರ ತಬಲಾ ವಾದನ ಮೂಡಿಬಂದಿತು.

ಅವರ ಲಯಬದ್ಧ ಕೈಚಳಕಕ್ಕೆ ಜಗದಂಬಾ ಭಕ್ತರು ಮನಸೋತರು. ಜಾನಪದ ಕಲಾವಿದೆ ಬಾಯಮ್ಮ ರೋಟ್ಟೆ ಅವರು ತಮ್ಮ ವಚನ ಸಂಗೀತದ ಮೂಲಕ ಶೋತೃಗಳಿಗೆ ಜ್ಞಾನದ ಔತಣ ಬಡಿಸಿದರು.ಕಲಾವಿದರಿಗೆ ಶಾಸಕರಿಂದ ಸನ್ಮಾನ ಕಲಾವಿದರ ಭಕ್ತಿ ಸೇವೆಗೆ ಮೆಚ್ಚುಗೆ



ವ್ಯಕ್ತಪಡಿಸಿದ ಔರಾದ್ ಶಾಸಕ ಪ್ರಭು ಬಿ. ಚವ್ಹಾಣ್ ಅವರು, ಇಚ್ಛಾಪೂರ್ತಿ ಮಾತಾ ಜಗದಂಬಾ ಮಂದಿರ ಟ್ರಸ್ಟ್ ವತಿಯಿಂದ ಭಜನಾ ಮಂಡಳಿಯ ಸದಸ್ಯರನ್ನು ಆತ್ಮೀಯವಾಗಿ ಸತ್ಕರಿಸಿದರು. ಭಜನಾ ತಂಡದ ಕಲಾ ಸೇವೆಯನ್ನು ಗುರುತಿಸಿ ಅವರಿಗೆ ಸನ್ಮಾನ ಪತ್ರ ಹಾಗೂ ಪ್ರಮಾಣ ಪತ್ರಗಳನ್ನು ವಿತರಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರು ನಂದಿ ಮಹಾದೇವ ಭಜನಾ ತಂಡದ ಪ್ರಮುಖರಾದ ಹಾರ್ಮೋನಿಯಂ ವಾದಕ ಸಂಗಮೇಶ ಚವರೆ, ವೀಣಾ ವಾದಕ ದೊಂಡಿಬಾ ಮೆತ್ರೆ, ದಮಡಿ ವಾದಕ ಸಂತೋಷ ಮುಂದಾನೆ ಸೇರಿದಂತೆ ಗಾಯಕರಾದ ರೇವಮ್ಮಾ ಬೀರಾದರ ಮತ್ತು ಪುಷ್ಪಾ ಕಲ್ಯಾಣೆ ಅವರು ಭಜನೆಯ ನೇತೃತ್ವ ವಹಿಸಿದ್ದರು.ತಂಡದ ಸದಸ್ಯರಾದ ಗುಂಡಮ್ಮಾ ಬೇಲ್ಲೆ, ಚಂದ್ರಕಲಾ ಮೇತ್ರೆ, ಕಸ್ತೂರಬಾಯಿ ಮುದಾನೆ, ಶಾಂತಮ್ಮ ಬರ್ಗೆ, ಲಲಿತಾಬಾಯಿ ಕೊರಾಳೆ, ಶಕುಂತಲಾ ರೊಟ್ಟೆ, ನಿಲಮ್ಮಾ ಬಳತೆ, ಚಂದ್ರಮಾ ಮೆತ್ರೆ, ಗುರಮ್ಮಾ ಬರ್ಗೆ, ಶಾಲಾಬಾಯಿ ಬಳತೆ, ಕಲಾವತಿ ಕೊರಾಳೆ, ರಂಗಮ್ಮಾ ಬರ್ಗೆ, ಕವಿತಾ ಬರದಾಪುರೆ, ಶಿಲಾಬಾಯಿ ಮೆತ್ರೆ ಮತ್ತು ಮಹಾನಂದ ಸಾಗವೆ ಸೇರಿದಂತೆ ಗ್ರಾಮದ ಅನೇಕ ಭಕ್ತರು ಹಾಗೂ ಕಲಾವಿದರು ಈ ಸಂಭ್ರಮದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ಫೆ.17ರಂದು ಮಂಡಲಗಿರಿ ಶ್ರೀ ವೀರಭದ್ರೇಶ್ವರ ಮಹಾ ರಥೋತ್ಸವ

ಮಲ್ಲಮ್ಮ ನುಡಿ ವಾರ್ತೆ ಕುಕನೂರ :

ತಾಲೂಕಿನ ಮಂಡಲಗಿರಿ ಗ್ರಾಮದ ಆರಾಧ್ಯ ದೈವ ಶ್ರೀ ವೀರಭದ್ರೇಶ್ವರ ಜಾತ್ರಾ ಮಹೋತ್ಸವದ ನಿಮಿತ್ಯ ಫೆಬ್ರುವರಿ 17ರ ಮಂಗಳವಾರದಂದು ಪಂಚ ಕೆಲಸ ಮಹಾ ರಥೋತ್ಸವ ಜರುಗುವುದಾಗಿ ಶ್ರೀ ವೀರಭದ್ರೇಶ್ವರ ದೇವಸ್ಥಾನ ಸೇವಾ ಸಮಿತಿ ವತಿಯಿಂದ ಪತ್ರಿಕಾ ಪ್ರಕಟಣೆಗೆ ತಿಳಿಸಿರುತ್ತಾರೆ.

ಪ್ರತಿ ವರ್ಷದಂದು ಈ ವರ್ಷವೂ ಸಹಿತ ಶಿವರಾತ್ರಿ ಅಮಾವಾಸ್ಯೆ ದಿನದಂದು ಶ್ರೀ ವೀರಭದ್ರೇಶ್ವರ ಮಹಾ ರಥೋತ್ಸವ ಆಯೋಜಿಸಿದ್ದು ತನಿಮಿತ್ಯ ಫೆಬ್ರವರಿ 15ರ ರವಿವಾರ ಬೆಳಗ್ಗೆ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ವೀರಭದ್ರೇಶ್ವರ ಮಹಾಸ್ವಾಮಿ ಮೂರ್ತಿಗೆ ರುದ್ರಭಿಷೇಕ, ಪಂಚ ಕಳಸ ಮತ್ತು ನಂದಿ ಭಾವಚಿತ್ರದ ಮೆರವಣಿಗೆ, ಗ್ರಾಮದ ಸುಮಂಗಲೆಯರಿಂದ ಗ್ರಾಮದ ಎಲ್ಲಾ ದೇವರುಗಳಿಗೆ ಉಡಿ ತುಂಬುವ ಕಾರ್ಯಕ್ರಮ ಹಾಗೂ ಸಂಜೆ ಐದು ಮೂವತ್ತಕ್ಕೆ ಲಘು ರಥೋತ್ಸವವು ಸಕಲ ವಾದ್ಯ ಮೇಳದೊಂದಿಗೆ ಜರಗುವುದು ಹಾಗೂ 7:30ರ ನಂತರ ಮಹಾಶಿವರಾತ್ರಿಯ ಜಾಗರಣೆಯ ನಿಮಿತ್ಯ ವಿಶೇಷ ಕಾರ್ಯಕ್ರಮ ಜರುಗುವುದು.




ಫೆಬ್ರವರಿ 16ರ ಸೋಮವಾರ ಗ್ರಾಮದ ಮಹಿಳೆಯರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ ಹಾಗೂ ಫೆಬ್ರವರಿ 17ರ ಮಂಗಳವಾರ ಬೆಳಿಗ್ಗೆ 5:00ಯಿಂದ 9 ಗಂಟೆಯವರೆಗೆ ಶ್ರೀವೀರಭದ್ರೇಶ್ವರ ಮೂರ್ತಿಗೆ ಮಹಾರುದ್ರಾಭಿಷೇಕ, ಪೂರ್ವಿ ಕಳಸ ಆಹ್ವಾನ ಮಾಡುವುದು, ನಂತರ ವಿವಿಧ ದೇವತಾ ಕಾರ್ಯದೊಂದಿಗೆ ಧಾರ್ಮಿಕ ವಿಧಿ ವಿಧಾನಗಳು ಮಧ್ಯಾಹ್ನ 3:00 ಗಂಟೆಗೆ ಬಟಪನಹಳ್ಳಿ ಗ್ರಾಮಸ್ಥರಿಂದ ರಥೋತ್ಸವದ ಹಗ್ಗವನ್ನು ಆಹ್ವಾನಿಸಿಕೊಳ್ಳುವುದು ನಂದಿಕೋಲು ಆಗಮದ ನಂತರ ಸಂಜೆ 5:00 ಗಂಟೆಗೆ ಮಹಾ ರಥೋತ್ಸವ ಜರಗುವುದು.

ಮಂಗಳವಾರ ಸಾಯಂಕಾಲ ಜರುಗುವ ಪಂಚಕಳಸ ಮಹಾ ರಥೋತ್ಸವಕ್ಕೆ ಕುಕನೂರು ಪಟ್ಟಣದ ಅನ್ನದಾನಿಶ್ವರ ಶಾಖಾಮಠದ ಪೂಜ್ಯರಾದ ಡಾ. ಮಹದೇವ ಮಹಾಸ್ವಾಮಿಗಳು ಚಾಲನೆ ನೀಡುವುದಾಗಿ ಹಾಗೂ ಈ ಧಾರ್ಮಿಕ ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಯಲಬುರ್ಗಾ ಪಟ್ಟಣದ ಶ್ರೀಧರ ಮುರುಡಿಮಠದ ಶ್ರೀ ಬಸವಲಿಂಗ ಶಿವಾಚಾರ್ಯರು ಹಾಗೂ ನಗರಗಡ್ಡಿಯ ಸಂಸ್ಥಾನ ಮಠದ ಶ್ರೀ ಶಾಂತಲಿಂಗೇಶ್ವರ ಮಹಾಸ್ವಾಮಿಗಳು ವಹಿಸಿಕೊಳ್ಳುವರು ಎಂದು ತಿಳಿಸಿರುತ್ತಾರೆ.

ಗ್ರಾಮದ ಚಿಗುರು ಚೇತನ ಯುವಕ ಸಂಘದ ವತಿಯಿಂದ ಅನ್ನಪ್ರಸಾದದ ಮಹಾದಾಸೋಹ ಹಾಗೂ ರಂಗ ಪ್ರದರ್ಶನಗಳು ಸೇರಿದಂತೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ ಎಂದು ಶ್ರೀವೀರಭದ್ರೇಶ್ವರ ಸೇವಾ ಸಮಿತಿ ವತಿಯಿಂದ ಪತ್ರಿಕಾ ಪ್ರಕಟಣೆಗೆ ತಿಳಿಸಿರುತ್ತಾರೆ.

# ಶ್ರೀಶೈಲಂನಲ್ಲಿ ಮಹಾಶಿವರಾತ್ರಿ ಮಹೋತ್ಸವ: ವಿಶೇಷ ಬಸ್‌ಗಳ ಕಾರ್ಯಾಚರಣೆ

ಮಲ್ಲಮ್ಮ ನುಡಿ ವಾರ್ತೆ , ಕಲಬುರಗಿ:

ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಶ್ರೀಶೈಲಂನಲ್ಲಿ ಮಹಾಶಿವರಾತ್ರಿ ಮಹೋತ್ಸವವು ಇದೇ ಫೆಬ್ರವರಿ 13 ರಿಂದ 18 ರವರೆಗೆ ಜರುಗಲಿದ್ದು, ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವಕ್ಕೆ ಆಗಮಿಸುವ ಭಕ್ತಾದಿಗಳ ಅನುಕೂಲಕ್ಕಾಗಿ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಕಲಬುರಗಿ ವಿಭಾಗ–1ರ ವತಿಯಿಂದ ವಿಶೇಷ ಬಸ್‌ಗಳ ಕಾರ್ಯಾಚರಣೆ ಮಾಡಲಾಗುತ್ತಿದ್ದು, ಸಾರ್ವಜನಿಕರು ಈ ಸಾರಿಗೆಗಳ ಸದುಪಯೋಗವನ್ನು ಪಡೆಯಬೇಕೆಂದು ಅವರು ತಿಳಿಸಿದ್ದಾರೆ.ಎಂದು ಕಲಬುರಗಿ ವಿಭಾಗದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ವಿಭಾಗ–1ರ ವಿಭಾಗೀಯ ನಿಯಂತ್ರಣಾಧಿಕಾರಿಗಳು ತಿಳಿಸಿದ್ದಾರೆ.

ಈ ವಿಭಾಗದ ವ್ಯಾಪ್ತಿಗೆ ಬರುವ ಕಲಬುರಗಿ, ಚಿಂಚೋಳಿ, ಚಿತ್ತಾಪೂರ, ಕಾಳಗಿ ಹಾಗೂ ಸೇಡಂ ಬಸ್‌ನಿಲ್ದಾಣ ಹಾಗೂ ಇನ್ನಿತರ ಸ್ಥಳಗಳಿಂದ ಶ್ರೀಶೈಲಂಗೆ ವಿಶೇಷ ಬಸ್ಸುಗಳ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಘಟಕಗಳ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣ/ ಗ್ರಾಮಗಳಿಂದ 45 ರಿಂದ 50 ಪ್ರಯಾಣಿಕರಿದ್ದಲ್ಲಿ ನೇರವಾಗಿ ಬಸ್‌ನಿಲ್ದಾಣ/ ಗ್ರಾಮಗಳಿಂದಲೇ ಶ್ರೀಶೈಲಂಗೆ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗುತ್ತದೆ.

ಈ ವಿಶೇಷ ವಾಹನಗಳ ಸೌಲಭ್ಯಕ್ಕಾಗಿ ಸಂಪರ್ಕಿಸಬೇಕಾದ ಘಟಕ ವ್ಯವಸ್ಥಾಪಕರ ದೂರವಾಣಿ ಸಂಖ್ಯೆ ವಿವರ ಇಂತಿದೆ. ಕಲಬುರಗಿ ಘಟಕ–1ರ ಘಟಕ ವ್ಯವಸ್ಥಾಪಕರ ಮೊಬೈಲ್ ಸಂ–ಖ್ಯೆ–7760992113, ಕಲಬುರಗಿ ಘಟಕ–4ರ ಘಟಕ ವ್ಯವಸ್ಥಾಪಕ–7022012103, ಚಿಂಚೋಳಿ ಘಟಕದ ಘಟಕ ವ್ಯವಸ್ಥಾಪಕ–7760992117, ಚಿತ್ತಾಪೂರ ಘಟಕದ ಘಟಕ ವ್ಯವಸ್ಥಾಪಕ–7760992119, ಕಾಳಗಿ ಘಟಕದ ಘಟಕ ವ್ಯವಸ್ಥಾಪಕ–7760992120 ಹಾಗೂ ಸೇಡಂ ಘಟಕದ ಘಟಕ ವ್ಯವಸ್ಥಾಪಕ–7760992466 ಗಳಿಗೆ ಸಂಪರ್ಕಿಸಬೇಕು.

# ಬಸವಣ್ಣನವರ ಮೂರ್ತಿ ಅನಾವರಣ

ಮಲ್ಲಮ್ಮ ನುಡಿ ವಾರ್ತೆ

,ಚಿಟಗುಪ್ಪ:

ತಾಲೂಕಿನ ಕಂದಗೂಳ ಗ್ರಾಮದಲ್ಲಿ ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ (ರಿ) ಭಾಲ್ಕಿ ಅಡಿಯಲ್ಲಿ ನಡೆಯುತ್ತಿರುವ ಡಾ.ಚನ್ನಬಸವ ಪಟ್ಟದ್ದೇವರು ಪ್ರೌಢ ಶಾಲೆಯ ವಿಶ್ವಗುರು ಬಸವಣ್ಣನವರ ಮೂರ್ತಿ ಅನಾವರಣ ಹಾಗೂ ಶಾಲೆಯ ವಾರ್ಷಿಕೋತ್ಸವ ಮತ್ತು ಎಸ್ಸೆಸ್ಸೆಲ್ಸಿ ತರಗತಿ ಮಕ್ಕಳ ಬೀಳ್ಕೊಡುಗೆ ಸಮಾರಂಭ ಜರುಗಲಿದೆ. ಸಮಾರಂಭದ ದಿವ್ಯ ಸಾನಿಧ್ಯ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ವಹಿಸಿಕೊಳ್ಳಲಿದ್ದಾರೆ. ದಿವ್ಯ ಸಮ್ಮುಖ ಗುರುಬಸವ ಪಟ್ಟದ್ದೇವರು.ಮಹಾಲಿಂಗಸ್ವಾಮೀಜಿ, ಮೈತ್ರಾದೇವಿತಾಯಿ,ಡಾ.ಮಹಾದೇವಮ್ಮ ತಾಯಿ ವಹಿಸಿಕೊಳ್ಳಲಿದ್ದಾರೆ. ಬಸವಕಲ್ಯಾಣದ ಸಹಾಯಕ ಆಯುಕ್ತ ಪ್ರಕಾಶ ಕುದರೆ ವಿಶ್ವಗುರು ಬಸವಣ್ಣನವರ ಮೂರ್ತಿ ಅನಾವರಣ ಮಾಡಲಿದ್ದಾರೆ. ಹುಮನಾಬಾದ್ ಡಿವೈಎಸ್ಪಿ ಮಡೋಳಪ್ಪ ಪಿ.ಎಸ್. ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ.

ಹುಮನಾಬಾದ್ ತಾಪಂ ಕಾರ್ಯನಿರ್ವಾಹಕ ಅಧಿಕಾರಿ ದೀಪಿಕಾ ನಾಯಕ 2026ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮಾಡಲಿದ್ದಾರೆ. ಕ್ಷೇತ್ರಶಿಕ್ಷಣಾಧಿಕಾರಿ ವೆಂಕಟೇಶಗುಡಾಳ ಬಸವಗುರುವಿನ ಪೂಜೆ ನೆರವೇರಿಸಲಿದ್ದಾರೆ. ಸ್ಥಾನಿಕ ಕಮಿಟಿ ಅಧ್ಯಕ್ಷ ಮಾಣಿಕರಾವ ಹೌಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಗಮೇಶ ಜವಾದಿ, ಜನಾರ್ಧನ ರೆಡ್ಡಿ, ಅರವಿಂದ ಹುಡಗಿಕರ್, ವಿರೇಶಪ್ಪ ಎಂ, ಮೋಹನ ರೆಡ್ಡಿ, ಅಮೃತಪ್ಪ ದೇವಣೀ, ಗೌರಮ್ಮ ಪೊಲೀಸ್ ಪಾಟೀಲ್, ಶಿವಶರಣಪ್ಪ ಪಾಟೀಲ್, ಶಂಭುಲಿಂಗ ಪೊಲೀಸ್ ಪಾಟೀಲ್, ಪಾಂಡುರಂಗ ಹಿರೇ ಮುಂತಾದ ಗಣ್ಯರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ಬಂಡೆಪ್ಪ ಮೂಲಗೆ ಸ್ವಾಗತ ಮಾಡಲಿದ್ದಾರೆ. ಪ್ರಾಸ್ತಾವಿಕವಾಗಿ ರೇಖಾ ಪಿ.ಎಂ. ಅವರು ಮಾತನಾಡಲಿದ್ದಾರೆ. ನಿರೂಪಣೆ ದಿಲೀಪಕುಮಾರ ಚವ್ಹಾಣ ಮಾಡಲಿದ್ದಾರೆ. ಶರಣು ಸಮರ್ಪಣೆ ಮಹಾದೇವ ಎ.ಶಟಗಾರ ಅವರಿಂದ ನಡೆಯುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

IN THE COURT OF SENOIR CIVIL JUDGE AND JMFC COURT AT HUMNA-BAD Crl. Misc No. 284/2025

1. **Jagappa S/o Late Chandrappa** Age 45 years, occu: Coolie, R/o Changlera, Tq Chitaguppa

2. **Neelamma D/o Late Chandrappa** Age 60 years, occu: House hold, R/o Changlera, Tq Chitaguppa

3. **Satyamma D/o Late Chandrappa** Age 46 years, occu: House hold, R/o Changlera, Tq Chitaguppa

4. **Suresh S/o Late Chandrappa** Age 61 years, occu: Coolie, R/o Changlera, Tq Chitaguppa

5. **Savitra W/o Late Vaijinath** Age 47 years, occu: House hold, R/o Changlera, Tq Chitaguppa

...**Petitioner.**

**-- V/S - -**

The Thasildar Chitaguppa.

...**Respondents**.

***Petition Under section 13(3) Birth & Death Registration Act-1969***

**PAPER PUBLICATION**

Whereas the above named petitioner has filed the petition under section 13(3) of Birth and Death Registration Act 1969 praying this Honorable court to issue Death certificate of Bakkamma W/o Late Chandrappa The petitioners are Sons of deceased and his name shown as above. Bakkamma W/o Late Chandrappa was died on 02.01.2023. The petitioners are claiming the death certificate of their father for transfer of property and other official purpose and home record. Therefore it is hereby proclaimed that if any person or persons have got any objection in this regard she/they may approach to this Honorable court on 07-03-2026 at 11.00 AM in person or authorized pleader to answer such claim otherwise the matter will be heard and determined in your absence as per law.

**Given under my hand seal of the Court on this 07/02/2026**

**// By Order of the Court //**

**Chief Ministerial Officer**

**Senior Civil judge & JMFC Court**

**Humnabad**

# ಶಿಕ್ಷಕರೆಂದರೆ ಕೇವಲ ಓದು, ಬರಹ, ಲೆಕ್ಕಾಚಾರಗಳಿಗಷ್ಟೇ ಅಲ್ಲ. ಸಾಮಾಜಿಕ ಜವಾಬ್ದಾರಿಯೂ ಮುಖ್ಯ: ವೆಂಕಟೇಶ ಗುಡಾಳ

ಮಲ್ಲಮ್ಮನುಡಿವಾರ್ತೆಹುಮನಾಬಾದ:

ಶಿಕ್ಷಕರೆಂದರೆ ಕೇವಲ ಓದು, ಬರಹ, ಲೆಕ್ಕಾಚಾರಗಳಿಗಷ್ಟೇ ಅಲ್ಲ. ಸಾಮಾಜಿಕ ಜವಾಬ್ದಾರಿಯೂ ಮುಖ್ಯ ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ವೆಂಕಟೇಶ ಗುಡಾಳ ಶಾಲಾ ಶಿಕ್ಷಣ ಇಲಾಖೆ ಹಾಗೂ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ (ರಿ) ಬೆಂಗಳೂರು ತಾಲೂಕು ಘಟಕ ಹುಮನಾಬಾದ ಜಿಲ್ಲೆ ಬೀದರ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ ಶೈಕ್ಷಣಿಕ ಕಾರ್ಯಗಾರ ದಿನದರ್ಶಿಕೆ ಬಿಡುಗಡೆಯನ್ನು ತಾಲೂಕಿನ ಹುಡಗಿ ಗ್ರಾಮದ ಶ್ರೀ ಕರಿಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಾ ನುಡಿದರು. ಆರೋಗ್ಯಯುತ ಸಮಾಜದ ಅವಶ್ಯಕತೆ ಬಹಳಷ್ಟಿದೆ. ದೈಹಿಕ ಶಿಕ್ಷಣ ಶಿಕ್ಷಕರು ಮೊದಲು ಸದೃಢರಾದರೆ, ಆ ಶಾಲೆ ಮಾದರಿಯಾಗಿ ರೂಪುಗೊಳ್ಳುತ್ತದೆ ಎಂದರು. ಪ್ರಾಥಮಿಕ ಶಿಕ್ಷಣ ಹಂತ ಮಕ್ಕಳಿಗೆ ಬಹು ಅಮೂಲ್ಯವಾಗಿದ್ದು, ಅವರ ಶೈಕ್ಷಣಿಕ



ಜೀವನಕ್ಕೆ ಭದ್ರ ಬುನಾದಿ ಹಾಕುವ ಹಂತವಾಗಿದೆ. ಶಿಕ್ಷಕರು ಕಾಲ ಕಾಲಕ್ಕೆ ಇಲಾಖೆ ನೀಡುವ ಎಲ್ಲ ಶೈಕ್ಷಣಿಕ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಮೂಲಕ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಕಾರಣವಾಗುವ ಜತೆಗೆ ತಮ್ಮ ವೃತ್ತಿ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳಬೇಕು. ಉಪನ್ಯಾಸಕರಾದ. ಜ್ಯೋತಿ ಎಂ.ರೆಡ್ಡಿ ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದ ಮೇಲೆ ಹೆಚ್ಚಿನ ಗಮನ ಹರಿಸಬೇಕು. ಪಿಯುಸಿ, ಪದವಿಯಲ್ಲಿ ಉತ್ತಮ ಅಂಕಗಳನ್ನು ಪಡೆದರೆ ಅದೇ ಸಾಕಾಗದು. ಅದಕ್ಕೆ ತಕ್ಕ ಉದ್ಯೋಗವನ್ನು ಪಡೆಯಲು ತ್ವರಿತವಾಗಿ ತಯಾರಿ ನಡೆಸಬೇಕು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಇಂದಿನಿಂದಲೇ ತಯಾರಿ ನಡೆಸಿ, ಉನ್ನತ ಹುದ್ದೆಗಳನ್ನು ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ನಿರಂತರ ಅಧ್ಯಯನ ಮಾಡಿದರೇ ಯಶಸ್ಸು ತಾನಾಗಿಯೇ ಸಿಗುತ್ತದೆ ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳು ಸಮಯವನ್ನು ಸಮರ್ಪಕವಾಗಿ ಯೋಜಿಸಿ, ದಿನನಿತ್ಯದ ಅಧ್ಯಯನವನ್ನು ನಿಯಮಿತವಾಗಿ ಮುಂದುವರಿಸಬೇಕು. ಕಷ್ಟವನ್ನು ಎದುರಿಸುವ ಧೈರ್ಯ ವಹಿಸಿ, ನಿರಂತರ ಪ್ರಯತ್ನದಿಂದಲೇ ಯಶಸ್ಸು ಸಿಗುತ್ತದೆ. ಓದು ಮತ್ತು ಅಭ್ಯಾಸವನ್ನು ಜೀವನಶೈಲಿಯಾಗಿ ಮಾಡಿಕೊಂಡರೆ, ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿಯೂ ನೀವು ಸಾಧನೆ ಮಾಡಬಹುದಾಗಿದೆ ಎಂದರು. ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿರುವ ಶ್ರೀ ವಿರುಪಾಕ್ಷ ಶಿವಾಚಾರ್ಯರು. ಅವರ ಮಾತನಾಡಿ ಮಕ್ಕಳಿಗೆ ಶಾರೀರಿಕ ಮಾನಸಿಕ ಭೌತಿಕವಾಗಿ ರೂಪಿಸುವುದೇ ದೈಹಿಕ ಶಿಕ್ಷಣ ಶಿಕ್ಷಕರ ಆದ್ಯ ಕರ್ತವ್ಯ ಎಂದು ಆಶೀರ್ವಚನ ನೀಡಿದರು ಅಧ್ಯಕ್ಷತೆ ಸೂರ್ಯಕಾಂತ ಎಂ. ಹಾವಶೆಟ್ಟಿ ವಹಿಸಿದರು. ಅಧ್ಯಕ್ಷರು ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಹುಮ್ನಾಬಾದ. ಮುಖ್ಯ ಅತಿಥಿಗಳಾದ ಕರುಣದೇವಿ, ತಾಲೂಕು ಪಂಚಾಯತ್ ಅಕ್ಷರ ದಾಸೋಹ ನಿರ್ದೇಶಕರು ಹುಮನಾಬಾದ ಶ್ರೀ ಕಾಶಿನಾಥ್ ಅಮ್ಮ ಗೊಂಡ, ಚಿಟಗುಪ್ಪ ಕರ್ನಾಟಕ ರಾಜ್ಯ ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ಅಧ್ಯಕ್ಷರು. ಶ್ರೀಮತಿ ಬಾಯಿ ರೆಡ್ಡಿ, ರಾಜ್ಯ ಸಾಂಸ್ಕೃತಿಕ ಕಾರ್ಯದರ್ಶಿ .ಶ್ರೀ ಜಗನ್ನಾಥ್ ಕೋರಿ ಮುಖ್ಯ ಗುರುಗಳು

ರಾಮನ ಗೌಡ ಸರ್ಕಾರಿ ಮುಖ್ಯ ಗುರುಗಳು ಸರಕಾರಿ ಪ್ರಾಥಮಿಕ ಶಾಲೆ ಮರ ಖಲ್, ಶ್ರೀ ಲೋಕೇಶ್ ರೆಡ್ಡಿ ಹಿಲಾಲಪೂರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಪ್ರಭಾರಿ ಮುಖ್ಯ ಗುರುಗಳು, ಶ್ರೀ ಭಾಸ್ಕರ ಖಾಶಂಪೂರ ಅಧ್ಯಕ್ಷರು ಅಗಸ್ಟಿನ ಆಂಗ್ಲ ಮಾಧ್ಯಮ ಶಾಲೆ ಹಳ್ಳಿಖೇಡ ಬಿ, ಶ್ರೀ ಸುಭಾಷ ಗಂಗಾ ಸಹ ಶಿಕ್ಷಕರು ಸೀತಾಳಗೇರಾ, ಶ್ರೀ ಅಮಿತ ಕುಮಾರ ಉದ್ಯಮಿಗಳು ಚಿಟಗುಪ್ಪಾ, ಗಣೇಶ್ ಶೀಲವಂತ, ಮಹೇಶ್ ಜುಲ ಪೇಕರ, ಸಾಗರ್ ಕುಂಬಾರ, ರವಿ ಹಾವಶೆಟ್ಟಿ, ಜೈಪಾಲ್ ರೆಡ್ಡಿ ನಿರೂಪಿಸಿದರು. ಸ್ವಾಗತ ಭಾಷಣ ಚಾಮರಾಜ ಸಿರಮುಂಡಿ ಮಾಡಿದರು. ವಂದನಾರ್ಪಣೆ ಗಣಪತಿ ಪವರ್ ಮಾಡಿದರು. ರಾಘವೇಂದ್ರ, ಸಿದ್ದಪ್ಪ ಹೆಗಣಿ, ವೀರೇಂದ್ರ ಮುರುಡ, ಸಂತೋಷ್ ಸತೀಶ್ ಸೂಗಿ . ಷಣ್ಮುಖಯ್ಯಸ್ವಾಮಿ. ಜಯವಂತರೆಡ್ಡಿ. ಪ್ರಭು ರೆಡ್ಡಿ. ಈರಣ್ಣ ಜೊತಗೊಂಡ ಸಮಸ್ತ ತಾಲೂಕಿನ ದೈಹಿಕ ಶಿಕ್ಷಣ ಶಿಕ್ಷಕರು ಇನ್ನಿತರರು ಇದ್ದರು

# ಉತ್ತಮ ಫಲಿತಾಂಶ ಪಡೆಯುವತ್ತ ವಿದ್ಯಾರ್ಥಿಗಳು ನಿಗಾವಹಿಸಿ: ಚನ್ನಾರೆಡ್ಡಿ ಪಾಟೀಲ್



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಪಿಯು ಪರೀಕ್ಷೆಗಳು ತೀರಾ ಹತ್ತಿರದಲ್ಲಿಯೇ ಇದ್ದು, ಸ್ವಲ್ಪವೂ ಸಮಯ ಹಾಳು ಮಾಡದೇ ಕಠಿಣ ಶ್ರಮ ಅಭ್ಯಾಸ ಮಾಡಿ ಉತ್ತಮ ಫಲಿತಾಂಶ ಪಡೆದುಕೊಳ್ಳುವತ್ತ ವಿದ್ಯಾರ್ಥಿಗಳುಗಮನಹರಿಸಬೇಕೆಂದು

ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರ್ ಸಲಹೆ ನೀಡಿದರು. ನಗರದ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಬುಧವಾರಹಮ್ಮಿಕೊಂಡಿದ್ದ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮುಕ್ತಾಯ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪ್ರತಿ ವರ್ಷದ ಪರೀಕ್ಷೆಯಲ್ಲೂ ಫಲಿತಾಂಶ ಕೊನೆಸ್ಥಾನಕ್ಕೆನಿಲ್ಲುತ್ತಿದೆ. ಇದು ಬದಲಾಗಬೇಕೆಂದರೇ ಶಿಕ್ಷಕರು ಇಷ್ಟು ದಿನಗಳ ಕಾಲ ಹೇಳಿದ ಪಾಠಗಳ ಮನನ ಮಾಡಿ,

ಹಿಂದಿನ ಕೆಲವು ವರ್ಷಗಳ ಪ್ರಶ್ನೆ ಪತ್ರಿಕೆಗಳು ಬಿಡಿಸಿದರೇ ಈ ಸಲದ ಪರೀಕ್ಷೆಯಲ್ಲಿ ಸುಲಭವಾಗಿ ಉತ್ತರ ಬರೆಯುವ ಮೂಲಕ ಗುಣಾತ್ಮಕ ಫಲಿತಾಂಶ ತಮ್ಮದಾಗಿಸಿಕೊಳ್ಳಬಹುದೆಂದು ಶಾಸಕರು ಬಹುಮಾರ್ಮಿಕವಾಗಿ ವಿವರಿಸಿದರು. ಜೀವನದಲ್ಲಿ ಎಲ್ಲರೂ ಸಾಧನೆ ಮಾಡಬಹುದು, ಆದರೇ ಇದಕ್ಕೆ ಮುಖ್ಯ ಕಾರಣ ವಿದ್ಯೆ. ಇದೊಂದರಲ್ಲಿ

ನೈಪುಣ್ಯತೆ ಪಡೆದರೇ ಅಂದುಕೊಂಡದನ್ನು ಪಡೆದು ಉತ್ತಮ ನಾಗರಿಕ ರಾಗಬಹುದೆಂದರು. ವಿದ್ಯಾರ್ಥಿ ಜೀವನ ಬಂಗಾರಕ್ಕೆ ಹೋಲಿಸಿದ್ದಾರೆ.

ಅಂದರೇ ಇದು ಹಾಳಾಗದಂತೆಯೇ ಉಳಿಸಿಕೊಳ್ಳಬೇಕಾದರೇ ಸತತ ಅಭ್ಯಾಸ ಮಾಡಿ ಯಶಸ್ಸಿ ಜೀವನ ತಮ್ಮದಾಗಿಸಿಕೊಳ್ಳಿ ಎಂದು ಶಾಸಕರು ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಅಧ್ಯಕ್ಷತೆ ವಹಿಸಿ ಮಾತಮಾಡಿದ ಕಾಲೇಜಿನ ಪ್ರಾಂಶುಪಾಲ ಬಿಸ್ಲಪ್ಪ ಕಟ್ಟಿಮನಿ, ಪಿಯು ದ್ವಿತೀಯ ವರ್ಷವೆಂದರೇ ವಿದ್ಯಾರ್ಥಿಗಳ ಬದುಕಿನ ಟರ್ನಿಂಗ್ ಪಾಯಿಂಟ್ ಇದ್ದಂತೆಯೇ ಸರಿ.

ಅದಕ್ಕೆ ಸಮಯಕ್ಕೆ ಪ್ರಾಧಾನ್ಯತೆ ನೀಡಿ ಅಭ್ಯಾಸ ಮಾಡಿ ಪರೀಕ್ಷೆಗಳು ಎದುರಿಸಿ ಎಂದರು. ಕಾರ್ಯಕ್ರಮದಲ್ಲಿ

ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಪಂಡಿತ್ ರಾವ್ ಪವಾರ್, ಉಪನ್ಯಾಸಕರಾದ ರುದ್ರಗೌಡ ಎಂ. ಮಾಲಿಪಾಟೀಲ್, ಮಹಾಂತೇಶ್ ಕಲಾಲ್, ಚಂದ್ರಶೇಖರ್ ಮುಂಡ್ರಕೇರಿ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಖಾಜಾ ಕಲಿ ಮೊದ್ದೀನ್ ಸೇರಿದಂತೆಯೇ ಇತರರಿದ್ದರು. ಸಾಬಣ್ಣ ಜುಬೇರ್ ನಿರೂಪಿಸಿದರು. ದಶರಥ ಸ್ವಾಗತಿಸಿದರು. ವಿಜಯಲಕ್ಷ್ಮಿ ವಂದಿಸಿದರು.

# ಅಕ್ರಮ ಮದ್ಯ ಹಾಗೂ ಮಾದಕ ವಸ್ತುಗಳ ಸಾಗಾಣೆ ನಿಯಂತ್ರಣ ಕ್ರಮ: ಶರಣಪ್ಪ ಸಲದಾಪು

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಯಾದಗಿರಿ ಜಿಲ್ಲೆಯಲ್ಲಿ ಅಕ್ರಮ ಮದ್ಯ,ಮಾದಕ ವಸ್ತುಗಳ ಹಾಗೂ ಕಳ್ಳಭಟ್ಟಿ ಸಾರಾಯಿ ಸೇರಿದಂತೆ ಅಮಲು ತರುವ ಪದಾರ್ಥಗಳ ಅಕ್ರಮ ಮಾರಾಟ ಹಾಗೂ ಸಾಗಾಣಿಕೆ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳುವಂತೆ

ರಾಜ್ಯ ಮದ್ಯಪಾನ ಸಂಯಮ ಮಂಡಳಿ ಅಧ್ಯಕ್ಷ ಶರಣಪ್ಪ ಸಲದಾಪುರ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು. ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಇಂದು ವಿವಿಧ ಇಲಾಖಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಜಿಲ್ಲೆಯಲ್ಲಿ ಅಕ್ರಮ ಮದ್ಯ, ಮಾದಕವಸ್ತುಗಳ ಸಾಗಾಣಿಕೆ, ಮಾರಾಟ ಹಾಗೂ ಕಳ್ಳಭಟ್ಟಿ ಸಾರಾಯಿ ಸೇರಿದಂತೆ ಜನರ ಜೀವಕ್ಕೆ ಅಪಾಯ ತರುವ ಅಮಲು ಪದಾರ್ಥಗಳ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಕೈಗೊಳ್ಳಬೇಕು. ತಪ್ಪಿತಸ್ಥರ ವಿರುದ್ಧ ಕಾನೂನಿನ ರಿತ್ಯ ಸೂಕ್ತ ಕ್ರಮ ಕೈಗೊಳ್ಳುವಂತೆ ಅವರು ಸೂಚನೆ ನೀಡಿದರು. ಅಕ್ರಮ ಮದ್ಯ ಹಾಗೂ ಮಾದಕ ವಸ್ತುಗಳು, ಕಳ್ಳಭಟ್ಟಿ ಸಾರಾಯಿ ಸೇರಿದಂತೆ ಅಮಲು ತರುವ ಪದಾರ್ಥಗಳು ವ್ಯಕ್ತಿಯ ಜೀವಕ್ಕೆ ಮಾರಕವಾಗಿವೆ. ಈ ಹೆನ್ನಲೆಯಲ್ಲಿ ಅಬಕಾರಿ ಇಲಾಖೆ, ಪೋಲಿಸ್ ಇಲಾಖೆ, ಕಂದಾಯ ಇಲಾಖೆ ಅಧಿಕಾರಿಗಳು ಪರಸ್ಪರ



ಸಮನ್ವಯತೆಯಿಂದ ಕಾರ್ಯನಿರ್ವಹಿಸಿ ನಿಯಂತ್ರಣಾ ಕ್ರಮಗಳನ್ನು ಪ್ರಾಮಾಣಿಕವಾಗಿ, ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಕೈಗೊಳ್ಳಬೇಕು. ತಪ್ಪಿತಸ್ಥರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವಂತೆ ಅವರು ಸೂಚಿಸಿದರು. ಜಿಲ್ಲೆಯ ಗ್ರಾಮ ಪಂಚಾಯತ್, ಗ್ರಾಮವಾರು, ನಗರ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ

ಅರಿವು ಮೂಡಿಸಬೇಕು. ಶಾಲಾ, ಕಾಲೇಜುಗಳ ವ್ಯಾಪ್ತಿಯಲ್ಲಿ ಪೋಸ್ಟರ್ ಅಂಟಿಸಿ ಸೂಕ್ತ ಜಾಗೃತಿ ಮೂಡಿಸಬೇಕು. ವಿವಿಧ ಕಿರಾಣಿ ಅಂಗಡಿ, ಪಾನ್ ಶಾಪ್, ವ್ಯಾನ್ ಗಳ ಹಾಗೂ ದ್ವಿಚಕ್ರ ವಾಹನಗಳ ಮೂಲಕ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ, ಮದ್ಯ, ಮಾದಕವಸ್ತುಗಳ ಅಕ್ರಮ ಸಾಗಾಣಿಕೆ, ಮಾರಾಟ ಮಾಡುವವರ ವಿರುದ್ಧ ಪ್ರಕರಣ ದಾಖಲಿಸಬೇಕು. ಅಬಕಾರಿ ಇಲಾಖೆ ಹಾಗೂ ಪೋಲಿಸ್ ಇಲಾಖೆಯಿಂದ ಕಠಿಣ ಕ್ರಮ ಕೈಗೊಳ್ಳುವಂತೆ ಅವರು ಸೂಚಿಸಿದರು. ಜಿಲ್ಲೆಯ ಜನರ ಆರೋಗ್ಯ ಹಾಗೂ ಸಮಾಜದ ಸ್ವಾಸ್ಥ್ಯ ಕಾಪಾಡುವ ಉದ್ದೇಶದಿಂದ ಸಂಬಂಧಿಸಿದ ಅಧಿಕಾರಿಗಳು ತಮ್ಮ ಹೊಣೆಗಾರಿಕೆ ಎಂದು ಭಾವಿಸಿ

ಸೂಕ್ತ ಕ್ರಮ ಕೈಗೊಳ್ಳಬೇಕು. ವಿಶೇಷವಾಗಿ ಅಬಕಾರಿ ಇಲಾಖೆ ಇನ್ನಷ್ಟು ಚುರುಕಾಗಿ ಕಾರ್ಯ ನಿರ್ವಹಿಸುವ ಜೊತೆಗೆ ಕೈಗೊಂಡ ಕ್ರಮದ ಕುರಿತು ವರದಿಯನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಂತೆ ಅವರು ಸೂಚಿಸಿದರು.

ಅಬಕಾರಿ ತಿದ್ದುಪಡಿ ಕಾಯ್ದೆ 2007 ರನ್ವಯ ಅಧಿಕಾರಿಗಳು ಅವಶ್ಯಕ ಕ್ರಮ ಕೈಗೊಳ್ಳಬೇಕು.

ಶಾಲಾ, ಕಾಲೇಜು, ದೇವರ ಗುಡಿ ವ್ಯಾಪ್ತಿಯಲ್ಲಿ ಅಕ್ರಮ ಮದ್ಯ ಮಾರಾಟದ ಮೇಲೆ ತೀವ್ರ ನಿಗಾಯಿಡಬೇಕು. ಜಿಲ್ಲೆಯಲ್ಲಿನ ಇಂತಹ ಸಂಶಯಾಸ್ಪದ ಸ್ಥಳಗಳಲ್ಲಿ

ಅನಿರೀಕ್ಷಿತ ದಾಳಿ ನಡೆಸಿ ಪ್ರಕರಣ ದಾಖಲಿಸಬೇಕು. ಗುರುಮಠಕಲ್ ಹಾಗೂ ಜಿಲ್ಲೆಯ ಗಡಿ ವ್ಯಾಪ್ತಿಯಲ್ಲಿ ಅಕ್ರಮ ಮದ್ಯ ಮಾರಾಟ, ಸಾಗಾಣಿಕೆ ಮೇಲೆ ಸೂಕ್ತ ನಿಗಾ ಇಟ್ಟು ಅವಶ್ಯಕ ಮುನ್ನೆಚ್ಚರಿಕಾ ಹಾಗೂ ಗಂಭೀರ ಸ್ವರೂಪದ ಕ್ರಮಗಳನ್ನು ಕೈಗೊಳ್ಳುವಂತೆ ಅವರು ಸೂಚಿಸಿದರು. ಆರೋಗ್ಯ ಇಲಾಖೆ, ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಕೂಡ ಜಾಗೃತಿ ಚಿತ್ರ ಅಂಟಿಸಿ ಸೂಕ್ತ ಜಾಗೃತಿ ಮೂಡಿಸಬೇಕು ಎಂದು ಅವರು ಹೇಳಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಶ್ರೀ ಹರ್ಷಲ್ ಭೋಯರ್, ಹೆಚ್ಚುವರಿ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಶ್ರೀ ಧರಣೇಶ, ಅಬಕಾರಿ ಡಿಸಿ ಸೇರಿದಂತೆ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

# ಫೆ, 13ಕ್ಕೆ ಚಿಣ್ಣರ ಸಂತೆ ಮಕ್ಕಳ ಮೇಳ




• ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್:

ತಾಲೂಕಿನ ಚಪೆಟ್ಲಾ ಗ್ರಾಮದ ಶಾಂತಿನಿಕೇತನ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಫೆಬ್ರುವರಿ 13, 2026ರಂದು 'ಚಿನ್ನರ ಸಂತೆ' (ಮಕ್ಕಳ ಮೇಳ) ವಿಶೇಷ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಶಾಲೆಯ ಮುಖ್ಯ ಗುರುಗಳಾದ ಸೂಗಯ್ಯ ಸ್ವಾಮಿ ತಿಳಿಸಿದ್ದಾರೆ.

ಈ ಮೇಳಕ್ಕೆ ಎಲ್ಲಾ ಗ್ರಾಮಸ್ಥರು ಮತ್ತು ಹಿರಿಯರು ಕುಟುಂಬ ಸದಸ್ಯರೊಂದಿಗೆ ಹಾಜರಾಗಿ ಪಾಲ್ಗೊಳ್ಳುವಂತೆ ಆಹ್ವಾನಿಸಿ. ಮೇಳದಲ್ಲಿ ದಿನಸಿ ವಸ್ತುಗಳು, ತಾಜಾ ತರಕಾರಿಗಳು ಮತ್ತು ಹಣ್ಣುಗಳು, ಮಕ್ಕಳ ಆಟಿಕೆಗಳು ಮತ್ತು ಆಟದ ಸಾಮಗ್ರಿ, ಜ್ಯೂಸ್ ಅಂಗಡಿ, ತಿಂಡಿ ಅಂಗಡಿ, ಸೀರೆ ಅಂಗಡಿ, ಸಿನಿಮಾ ಥಿಯೇಟರ್ ನಂತಹ 40ಕ್ಕೂ ಹೆಚ್ಚು ಆಕರ್ಷಕ ಮಳಿಗೆಗಳು ಆಯೋಜಿಸಲಾಗಿದ್ದು, ಈ ಮೇಳ ಮಕ್ಕಳ ಪ್ರತಿಭೆಯನ್ನು ಪ್ರೋತ್ಸಾಹಿಸುತ್ತದೆ ಎಂದು ಶಾಲೆಯ ವ್ಯವಸ್ಥಾಪಕ ಗೌರಿಶಂಕರ ಪಾಟೀಲ ತಿಳಿಸಿದರು.

# ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಏಕದಿನ ಕಾರ್ಯಗಾರ: ಹಿರೇಮಠ



• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:

ಗುರುಮಠಕಲ್ ಪಟ್ಟಣದ ಮಾತಾ ಪಬ್ಲಿಕೇಶನ್ ಗುರುಮಠಕಲ್ ಶಾಖೆಯ ವತಿಯಿಂದ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗಾಗಿ ಒಂದು ದಿನದ ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆ ಹಾಗೂ ಪರೀಕ್ಷಾ ಸಿದ್ಧತೆಗೆ ಮಾರ್ಗದರ್ಶನ ನೀಡುವ ಉದ್ದೇಶದಿಂದ ಈ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದು ಸಂಸ್ಥೆಯ ವ್ಯವಸ್ಥಾಪಕ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತ ಸಂಘ ತಾಲ್ಲೂಕು ಅಧ್ಯಕ್ಷ ದಯಾನಂದ ಹಿರೇಮಠ ಅವರು ಪ್ರಕಟಣೆ ತಿಳಿಸಿದೆ.

ಕಾರ್ಯಕ್ರಮವು ಪಟ್ಟಣದ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜು (ಬಸ್ ನಿಲ್ದಾಣದ ಹತ್ತಿರದ) ನಡೆಯಲಿದೆ. ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಗಾರದ ಪ್ರಯೋಜನ ಪಡೆಯಬೇಕೆಂದು ಆಯೋಜಕರು ಮನವಿ ಮಾಡಿದ್ದಾರೆ.

ಪರೀಕ್ಷಾ ತಯಾರಿ ವಿಧಾನ, ಸಮಯ ನಿರ್ವಹಣೆ, ಮಾದರಿ ಪ್ರಶ್ನೆಪತ್ರಿಕೆ ಪರಿಹಾರ ಹಾಗೂ ವಿಷಯವಾರು ಸಲಹೆಗಳನ್ನು ತಜ್ಞರಿಂದ ನೀಡಲಾಗುತ್ತದೆ ಎಂದು ತಿಳಿದುಬಂದಿದೆ. ವಿದ್ಯಾರ್ಥಿಗಳು ಹಾಗೂ ಪಾಲಕರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

# ವಿದ್ಯಾರ್ಥಿಗಳಿಗೆ ಯುವನಿಧಿ ಯೋಜನೆ ಪರಿಚಯ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ :

ಕೊಪ್ಪಳದ ಗಣೇಶ ನಗರದಲ್ಲಿರುವ ಜಿಲ್ಲಾ ಕೇಂದ್ರ ಗ್ರಂಥಾಲಯದಲ್ಲಿ ಕರ್ನಾಟಕ ಸರ್ಕಾರದ ಯುವನಿಧಿ ಯೋಜನೆಯ ಕುರಿತು ಗ್ರಂಥಾಲಯದಲ್ಲಿನ ಓದುಗರಿಗೆ ಪರಿಚಯ ಮಾಡುವ ಕಾರ್ಯಕ್ರಮ ಜರುಗಿತು.

ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆಯ ನೋಡಲ್ ಅಧಿಕಾರಿ ಶಿವಯೋಗಿ ಹೊಸಹಳ್ಳಿ ಅವರು ವಿದ್ಯಾರ್ಥಿ ಓದುಗರಿಗೆ ಯುವನಿಧಿ ಯೋಜನೆಗೆ ನೋಂದಣಿ ಮಾಡಿಕೊಳ್ಳುವ ಪ್ರಕ್ರಿಯೆ, ಯೋಜನೆಯ ಫಲಾನುಭವಿಗಳಾಗಬೇಕಾದರೆ ಇರುವ ಅರ್ಹತೆಗಳ ಕುರಿತು ಯುವನಿಧಿ ಯೋಜನೆಯ ಕುರಿತು ಒಟ್ಟಾ–ರೆಯಾಗಿ ಪರಿಚಯಿಸಿದರು.

ಪರಿಚಯ ಮಾಡಿಕೊಟ್ಟ ನಂತರ ಓದುಗರು ಯುವನಿಧಿ ಕುರಿತು ಪ್ರಶ್ನೆಗಳನ್ನು ಕೇಳಿದರು. ಆ ಎಲ್ಲ ಪ್ರಶ್ನೆಗಳಿಗೂ ಉತ್ತರ ನೀಡಲಾಯಿತು.

2023, 2024 ಹಾಗೂ 2025 ರಲ್ಲಿ ಪದವಿ/ಸ್ನಾತಕೋತ್ತರ ಪದವಿ/ಡಿಪ್ಲೋಮಾ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ನೋಂದಾಯಿಸಿಕೊಳ್ಳಲು ಸೇವಾ ಸಿಂಧು ಪೋರ್ಟಲ್‌ನಲ್ಲಿ https://sevasindhugs.karnataka.gov.in ಗೆ ಭೇಟಿ ನೀಡಬೇಕು. ಸಹಾಯವಾಣಿ 18005997154 ಸಂಪರ್ಕಿಸಲು ತಿಳಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಗ್ರಂಥಾಲಯಾಧಿಕಾರಿ ಯಮನೂರಪ್ಪ ಉಪಸ್ಥಿತರಿದ್ದರು. ಗ್ರಂಥಾಲಯ ಸಹಾಯಕ ನಾಗರಾಜ ನಾಯಕ ಡಿ.ಡೊಳ್ಳಿನ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಗ್ರಂಥಾಲಯ ಸಹಾಯಕಿ ವಿಜಯಲಕ್ಷ್ಮೀ ವಡ್ಡಟ್ಟಿ ಸ್ವಾಗತಿಸಿ, ವಂದಿಸಿದರು.

# ಮೂಲಭೂತ ಸೌಕರ್ಯಕ್ಕೆ ಒತ್ತಾಯಿಸಿ ಪ್ರತಿಭಟನೆ



• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:

ಪಟ್ಟಣದ ಮೂಲಭೂತ ಸೌಕರ್ಯಗಳಿಗೆ ಒತ್ತಾಯಿಸಿ ನಮ್ಮ ಕರ್ನಾಟಕ ಸೇನೆ' ಕೆಂಭಾವಿ ಹೋಬಳಿ ಘಟಕವು ಪ್ರತಿಭಟಿಸುವುದರ ಮೂಲಕ ಆಕ್ರೋಶ ವ್ಯಕ್ತಪಡಿಸಿದರು.

ಈ ಕುರಿತು ಮುಖ್ಯಾಧಿಕಾರಿಗೆ ಮಂಗಳವಾರ ಮನವಿ ಪತ್ರ ಸಲ್ಲಿಸಿದ ಸೇನೆಯ ಪದಾಧಿಕಾರಿಗಳು ಪಟ್ಟಣದಲ್ಲಿ ಬೀದಿ ದೀಪಗಳ ದುರಸ್ತಿ ಹಾಗೂ ಚರಂಡಿ ಹೂಳು ಹಾಗೂ ಸ್ವಚ್ಛತೆಯನ್ನು ಕಾಪಾಡುವಲ್ಲಿ ಪುರಸಭೆ ಆಡಳಿತ ವಿಫಲವಾಗಿದೆ ಎಂದು ಆರೋಪಿಸಿದರು. ಇನ್ನಾದರೂ ಸ್ಪಂದಿಸಿ ನಿಗದಿತ ಕಾಲಮಿತಿಯೊಳಗೆ ಪಟ್ಟಣದ ಅಭಿವೃದ್ಧಿಗೆ ಕ್ರಮವಹಿಸಲಿ ಇಲ್ಲವಾದರೆ ಮುಂದಿನ ದಿನಗಳಲ್ಲಿ ಕರ್ನಾಟಕ ಸೇನೆಯ ವತಿಯಿಂದ ಉಗ್ರವಾದ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದ್ದಾರೆ.

ಈ ಸಂದರ್ಭದಲ್ಲಿ ನಮ್ಮ ಕರ್ನಾಟಕ ಸೇನೆಯ ಕೆಂಭಾವಿ ಅಧ್ಯಕ್ಷರಾದ ಶರಣು ಎಸ್. ದೇವರಮನಿ, ಕಾರ್ಮಿಕ ಘಟಕದ ಅಧ್ಯಕ್ಷ ಗುರುರಾಜ ಎಸ್. ಅಂಗಡಿ, ಗೌರವಾಧ್ಯಕ್ಷ ಬಸ್ಸು ಪರಸನಹಳ್ಳಿ, ಕಾರ್ಮಿಕ ಘಟಕದ ಉಪಾಧ್ಯಕ್ಷ ಶಿವು ರಬ್ಬನಳ್ಳಿ, ಮಲ್ಲಾಬಿ ಘಟಕದ ಅಧ್ಯಕ್ಷ ರಫೀಕ ಮುಜವಾರ, ಏವರು ಗ್ರಾಮದ ಅಧ್ಯಕ್ಷ ಬಾಪುಗೌಡ ಅನ್ವರ್, ವೀರೇಶ, ಬಸ್ಸು ದೂರಿ, ಶ್ರೀಕಾಂತ ಕುಂಬಾರ, ಜಗ್ಗು , ಮಲ್ಲು ಸೇರಿದಂತೆ ಅನೇಕರು ಉಪಸ್ಥಿತರಿದ್ದರು

# ಯಲಸತ್ತಿ ಗ್ರಾಮಕ್ಕೆ ಸಿಇಒ ಭೇಟಿ

• ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ :

ಜಿಲ್ಲೆಯ ಗುರುಮಠಕಲ್ ತಾಲೂಕಿನ ಯಲಸತ್ತಿ ಗ್ರಾಮ ಪಂಚಾಯಿತಿಗೆ ಜಿಲ್ಲಾ ಪಂಚಾಯತಿಯ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಲವೀಶ್ ಓರಾಡಿಯಾ ಸರ್ ಅವರು ಭೇಟಿ ನೀಡಿದ್ದರು.

ಯಲಸತ್ತಿ ಗ್ರಾಮ ಪಂಚಾಯಿತಿಯಲ್ಲಿ ಗ್ರಾಮಸ್ಥರ ಜೊತೆ ವಿವಿಧ ಸಮಸ್ಯೆಗಳು ಕುರಿತು ಚರ್ಚೆ ನಡೆಸಿದ ಅವರು ಗ್ರಾಮದಲ್ಲಿ ಕೋತಿಗಳ ಕಾಟ ಅಧಿಕವಾಗಿದ್ದು, ದಿನನಿತ್ಯ ಜನರಿಗೆ ತೊಂದರೆ ಕೊಡುತ್ತಿವೆ ಇಂದು ಗ್ರಾಮಸ್ಥರಿಗೆ ಸ್ಪಂದಿಸಿದವರು ಅರಣ್ಯ ಇಲಾಖೆ ಅಧಿಕಾರಿಗಳ ಜೊತೆ ದೂರವಾಣಿ ಕರೆ ಮಾಡಿ ಮಾತನಾಡಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು. ಗ್ರಾಮದಲ್ಲಿ ಕೋತಿಗಳನ್ನು ಹಿಡಿಯಲು ವಿಶೇಷ ತಂಡ ಕರೆಸಿ ಸೆರೆ ಹಿಡಿಯುವ ಬಗ್ಗೆ ಚರ್ಚಿಸಿದರು.

ಕೂಲಿಕಾರರಿಗೆ ಶೀಘ್ರವೇ ಎಂಆರ್ ತೆ–ಗೆದು ಕೆಲಸ ಕೊಡುವಂತೆ ಪಿಡಿಓ ಅವರಿಗೆ ಸೂಚಿಸಿದರು. ಸ್ವಚ್ಛ ವಾಹಿನಿ ಮೂಲಕ ದಿನನಿತ್ಯ ಕಸ ಸಂಗ್ರಹ ಮಾಡಿ, ಗ್ರಾಮದಲ್ಲಿ ಸ್ವಚ್ಛತೆಗೆ ಆದ್ಯತೆ ನೀಡುವುದು. ಕರವಸೂಲಿ ಮಾಡುವುದು, ಎನ್ ಆರ್ ಎಲ್ ಎಂಅಡಿ ಮಹಿಳಾ ಒಕ್ಕೂಟಗಳಿಗೆ ಸಾಲ ನೀಡುವುದು. ಸೇರಿದಂತೆ ಇನ್ನಿತರ ವಿಷಯಗಳ ಕುರಿತು ಮಾಹಿತಿ ಪಡೆದರು.

ಆನಂತರ ಶುದ್ಧ ಕುಡಿವ ನೀರಿನ ಘಟಕಕ್ಕೆ ಭೇಟಿ ನೀಡಿ ದುರಸ್ತಿ ಕಾರ್ಯ ಪೂರ್ಣಗೊಳಿಸಿ ಶೀಘ್ರವೇ ಆರಂಭಿಸುವಂತೆ ಸೂಚಿಸಿದರು.

ಮುಂದೆ ಗ್ರಂಥಾಲಯಕ್ಕೆ ತೆರಳಿದ ಅವರು ಎಲ್ಲಾ ಪುಸ್ತಕಗಳನ್ನು ಒಂದೇ ಕಡೆ ಸೇರಿಸಿ ಇಡಬಾರದು, ಸ್ಪರ್ಧಾತ್ಮಕ ಪುಸ್ತಕಗಳು, ಕಾದಂಬರಿಗಳು ಪುಸ್ತಕಗಳು ಪ್ರತ್ಯೇಕವಾಗಿಡಬೇಕು ಎಂದು ಅಲ್ಲಿನ ಗ್ರಂಥಪಾಲಕರಿಗೆ ತಿಳಿಸಿದರು. ವಿದ್ಯುತ್ ವ್ಯವಸ್ಥೆ ಕುರಿತು ಪರಿಶೀಲಿಸಿದರು.

ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ದಿನಚರಿ, ಹೊರರೋಗಿಗಳ ಪುಸ್ತಕ ವೀಕ್ಷಣೆ ಮಾಡಿದರು.

ಅಂಗನವಾಡಿ ಕೇಂದ್ರಗಳಿಗೆ ಹಾಗೂ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗೆ ತೆರಳಿ ಶಾಲಾ ಕಟ್ಟಡ ವೀಕ್ಷಣೆ ಮಾಡಿದರು. ಮನರೇಗಾ ಅನುದಾನದಡಿ ನಿರ್ಮಾಣ ಹಂತದಲ್ಲಿರುವ ಬಾಲಕ ಬಾಲಕಿಯರ ಶೌಚಾಲಯಗಳು ವೀಕ್ಷಿಸಿದರು.



ಮುಂದುವರಿದು ಮಕ್ಕಳಿಗೆ ಪೌಷ್ಟಿಕ ಆಹಾರ ಕೊಡುವ ಕುರಿತು ವಿದ್ಯಾರ್ಥಿಗಳಿಂದ ಮಾಹಿತಿ ಪಡೆದರು. 10ನೇ ತರಗತಿ ವಿದ್ಯಾರ್ಥಿಗಳ ಜೊತೆ ಚರ್ಚಿಸಿದ ಅವರು ಈ ಬಾರಿ ನೂರಕ್ಕೆ ನೂರರಷ್ಟು ಫಲಿತಾಂಶ ಬರಬೇಕು. ಆದ್ದರಿಂದ ಕಠಿಣವಾದ ವಿಷಯಗಳನ್ನು ಹೆಚ್ಚಿನ ಗಮನ ಕೊಟ್ಟು ಅಧ್ಯಯನ ಮಾಡಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯಿತಿಯ ಮಾನ್ಯ ಯೋಜನಾ ನಿರ್ದೇಶಕರಾದ ಶ್ರೀ ಸಿಬಿ ದೇವರಮನಿ, ಗುರುಮಠಕಲ್ ತಾಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಮಾನ್ಯ ಶ್ರೀ ಅಂಬರೀಶ್ ಪಾಟೀಲ್, ತಾ.ಪಂ ಎಡಿ ರಾಮಚಂದ್ರ ಬಸೂದೆ, ಯಲ್ಲಸತ್ತಿ ಗ್ರಾಮ ಆಡಳಿತ ಅಧಿಕಾರಿಗಳು ಹಾಗೂ ಯಾದಗಿರಿ ತಾಲೂಕು ಕೃಷಿ ಇಲಾಖೆ ಸಹಾಯಕ ನಿರ್ದೇಶಕರಾದ ಮಾನ್ಯ ಶ್ರೀ ಸುರೇಶ್, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಸೈಯದ್ ಅಲಿ ಸೇರಿದಂತೆ ಸಿಬ್ಬಂದಿ ವರ್ಗದವರು ಮತ್ತು ಮನರೇಗಾ ಸಿಬ್ಬಂದಿಗಳು ಹಾಜರಿದ್ದರು.

# ಚಿರತೆ ದಾಳಿಗೆ ಆಕಳು ಕರ ಬಲಿ



• ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:

ತಾಲೂಕಿನ ಅರಣ್ಯದಂಚಿನಲ್ಲಿ ಬರುವ ಹಟಕಿನಾಳ ಗ್ರಾಮದಲ್ಲಿ ಚಿರತೆ ದಾಳಿಗೆ ರೈತನ ಆಕಳು ಕರು ಬಲಿಯಾಗಿವೆ.

ಗ್ರಾಮವು ಅರಣ್ಯದಂಚಿನಲ್ಲಿ ಬರುವುದರಿಂದ ಪಕ್ಕದ ಕೆರೆಯಲ್ಲಿ ನೀರು ಕುಡಿಯಲು ಬರುವ ಕಾಡು ಪ್ರಾಣಿಗಳು ಗ್ರಾಮದಲ್ಲಿ ಜಮೀನಿನಲ್ಲಿ ಕಟ್ಟಿರುವ ಸಾಕು ಪ್ರಾಣಿಗಳು ದಾಳಿ ಮಾಡುತ್ತಿದ್ದು ಅದೇ ರೀತಿ ಶಂಕರ ಅಮಗಾಂವಕರ ಎನ್ನುವ ರೈತರಿಗೆ ಸೇರಿದ ಎರಡು ಆಕಳು ಕರುವುಗಳು ಚಿರತೆ ದಾಳಿ ಮಾಡಿದ್ದು ಗ್ರಾಮಸ್ಥರಲ್ಲಿ ಭಯ ಮೂಡಿಸಿದೆ ಆರ್ .ಎಫ್ ಓ ಅರುಣಕುಮಾರ ಅಷ್ಟಗಿ ಸ್ಥಳಕ್ಕೆ ಧಾವಿಸಿ ಹೆಚ್ಚಿನ ಅರಣ್ಯ ರಕ್ಷಕ ಸಿಬ್ಬಂದಿಗಳನ್ನು ನೇಮಿಸಿದ್ದು ಗ್ರಾಮಸ್ಥರು ರಾತ್ರಿ ವೇಳೆ ಒಬ್ಬಬ್ಬರಾಗಿ ಹೊರಬರದಂತೆ ಎಚ್ಚರಿಸಲಾಗಿದೆ ಎಂದರು.

### ಪುರಾಣ ಆರಂಭೋತ್ಸವ ಕಾರ್ಯಕ್ರಮದಲ್ಲಿ ಪೂಜ್ಯ ಶಿವಯೋಗಿ ಸ್ವಾಮೀಜಿ ಅಭಿಮತ

# ಪುರಾಣ ಪ್ರವಚನಗಳಿಂದ ಮಾನಸಿಕ ನೆಮ್ಮದಿ



ಬದುಕಿನಲ್ಲಿ ಆಧ್ಯಾತ್ಮಿಕತೆಯನ್ನು ಮೈಗೂಡಿಸಿಕೊಂಡು ಸತ್ಕರ್ಮಗಳನ್ನು ಮಾಡಲು ಪ್ರಯತ್ನಿಸಿ, ಭಗವಂತ ಕೊಟ್ಟ ಸಂಪತ್ತಿನಿಂದ ಒಂದಿಷ್ಟು ಧರ್ಮಕಾರ್ಯಗಳಿಗಾಗಿ ವಿನಿಯೋಗಿಸಿ.

ದುಶ್ಚಟಗಳಿಂದ ದೂರವಿದ್ದು ಧರ್ಮವಂತರಾಗಿ ಬಾಳಿ.

ರಾಜಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಸ್ವಾಮೀಜಿ.

**• ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**

ಮನುಷ್ಯನ ಬದುಕು ಇಂದು ಯಾಂತ್ರಿಕೃತಗೊಂಡಿರುವುದರಿಂದ ಒತ್ತಡದಿಂದಾಗಿ ಮಾನಸಿಕ ನೆಮ್ಮದಿ ಇಲ್ಲದಂತಾಗಿದೆ. ಮಹಾಪುರುಷರ ಸಂತ ಶರಣರ ಜೀವನದ ಕುರಿತು ಪ್ರವಚನಗಳನ್ನು ಆಲಿಸುವುದರಿಂದ ಮಾನಸಿಕ ನೆಮ್ಮದಿ ಪ್ರಾಪ್ತಿಯಾಗಿ ಜೀವನ ಪಾವನವಾಗುತ್ತದೆ ಎಂದು ದೇವರಹಿಪ್ಪರಗಿ ಪರದೇಶಿ ಮಠದ ಪೂಜ್ಯ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ನಾವದಗಿ ಗ್ರಾಮದ ಶ್ರೀ ಪರ್ವತೇಶ್ವರ ಬ್ರಹನ್ಮಠದ ಷ.ಬ್ರ.108 ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯರ ಗುರು ಪಟ್ಟಾಧಿಕಾರದ ದ್ವಿತೀಯ ವಾರ್ಷಿಕೋತ್ಸವದ ಅಂಗವಾಗಿ ಹಮ್ಮಿಕೊಂಡ" ಗುಡ್ಡಾಪುರದ ಶ್ರೀ ದಾನಮ್ಮ ದೇವಿ ಪುರಾಣ" ಆರಂಭೋತ್ಸವ ಕಾರ್ಯಕ್ರಮದ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಕಲಕೇರಿಯ ಪೂಜ್ಯ ಶ್ರೀ ಸಿದ್ದರಾಮ ಶಿವಾಚಾರ್ಯ ಮಹಾಸ್ವಾಮಿಗಳು ಮಾತನಾಡಿ ರಾಜೇಂದ್ರ ಶ್ರೀಗಳ ಗುರು ಪಟ್ಟಾಧಿಕಾರದ ಕಾರ್ಯಕ್ರಮವನ್ನು ಇಡೀ ನಾಡಿನಲ್ಲಿಯೇ ಹೆಸರುವಾಸಿಯಾಗಿ ಮಾಡಿದ್ದೀರಿ ಇದು ನೀವು ಪೂಜ್ಯರ ಹಾಗೂ ಶ್ರೀಮಠದ ಕುರಿತು ಹೊಂದಿರುವ ಅಪಾರ ಕಾಳಜಿಯನ್ನು ತೋರಿಸುತ್ತದೆ ಈ ಪುರಾಣ ಕಾರ್ಯಕ್ರಮ ಮಾರ್ಚ್ 2ರವರೆಗೆ ನಡೆಯಲಿದೆ ಇದರ ಸದುಪಯೋಗಮಾಡಿಕೊಳ್ಳಿ ಎಂದರು.

ಸಾಸನೂರ ತುಂಬಗಿ ಹಿರೇಮಠದ ಮ.ನಿಪ್ರ. ಶ್ರೀಮಹಾಂತಲಿಂಗ ಶಿವಾಚಾರ್ಯರು ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಪೂಜ್ಯ ಷ.ಬ್ರ.ಶ್ರೀ ರಾಜ ಗುರು ರಾಜೇಂದ್ರ ಒಡೆಯರ್ ಶಿವಾಚಾರ್ಯ ಮಹಾಸ್ವಾಮಿಗಳು ಸಮಾರಂಭದ ಸಾನಿಧ್ಯ ವಹಿಸಿದ್ದರು.

ವೇ.ಮೂ.ಡಾ.ಗುರುಲಿಂಗಯ್ಯ ಹಿರೇಮಠ(ಶಹಾಪುರ) ಸಮ್ಮುಖ ವಹಿಸಿದ್ದರು. ವೇದಿಕೆ ಕಾರ್ಯಕ್ರಮ ಮುನ್ನ ಗ್ರಾಮ ದೇವತೆಗೆ ಉಡಿತುಂಬಿ ಶ್ರೀ ಪರ್ವತೇಶ್ವರ ಗದ್ದುಗೆಗೆ ಪೂಜೆ ಸಲ್ಲಿಸಿ ಮೆರವಣಿಗೆಯೊಂದಿಗೆ ವೇದಿಕೆಗೆ ಆಗಮಿಸಲಾಯಿತು. ಪ್ರವಚನಕಾರ ವೇ.ಮೂ. ರಾಚಯ್ಯ ಶಾಸ್ತ್ರಿ ಹಿರೇಮಠ, ಸಂಗೀತಗಾರ ಸೋಮಯ್ಯಸ್ವಾಮಿ, ತಬಲವಾದಕ ಮಹಾಂತೇಶ ಹರನಾಳ, ಸಾಹಿತಿ ಬಸವರಾಜ ಗೊರಜಿ(ಕೊಡಗಾನೂರ), ಗ್ರಾಮದ ಗಣ್ಯರು ಹಿರಿಯರು ಹಾಗೂ ಮಠದ ಸದ್ಭಕ್ತರು ಇದ್ದರು.

# ಹೆಚ್ಚಿನ ಅಂಕ ಪಡೆಯಲು ಪೂರ್ವಭಾವಿ

### ಪರೀಕ್ಷೆ ಸಹಕಾರಿ: ಮಹಾಂತಗೌಡ ಪಾಟೀಲ್



**• ಮಲ್ಮನ ನುಡಿ ವಾರ್ತೆ ಮಸ್ಕಿ:**

ವಿದ್ಯಾರ್ಥಿಗಳ ಭಯವನ್ನು ನಿವಾರಿಸಲು ಪೂರ್ವಭಾವಿ ಪರೀಕ್ಷೆಗಳು ಸಹಕಾರಿಯಾಗಿವೆ ಎಂದು ದೇವನಾಂಪ್ರಿಯ ಅಶೋಕ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ

ಡಾ.ಮಹಾಂತಗೌಡ ಪಾಟೀಲ್ ರವರು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು. ಪಟ್ಟಣದ ದೇವನಾಂಪ್ರಿಯ ಅಶೋಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ತಾಲೂಕಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳಿಗಾಗಿ ತಾಲೂಕು ಮಟ್ಟದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮಾತನಾಡಿ,

ವಿದ್ಯಾರ್ಥಿಗಳಲ್ಲಿ ಪರೀಕ್ಷಾ ವೇಳೆಗೆ ಉಂಟಾಗುವ ಆತಂಕವನ್ನು ಪೂರ್ವಭಾವಿಯಾಗಿ ಪರಿಚಯಿಸಿ ತಮ್ಮ ಸಿದ್ಧತೆಯಲ್ಲಿನ ಕೊರತೆಗಳನ್ನು ಗುರುತಿಸಿ ಸುಧಾರಿಸಿಕೊಳ್ಳಲು ಇಂತಹ ಕಾರ್ಯಕ್ರಮಗಳು ಸಹಾಯಕವಾಗುತ್ತವೆ ಎಂದು ತಿಳಿಸಿದರು.

ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಮನೋಭಾವದೊಂದಿಗೆ ಭಾಗವಹಿಸಿ ತಮ್ಮ ದುರ್ಬಲತೆಗಳನ್ನು ಗುರುತಿಸಿ ಮುಂದಿನ ಸಿದ್ಧತೆಯಲ್ಲಿ ಅದನ್ನು ಬಲಪಡಿಸಿಕೊಳ್ಳಬೇಕು ಎಂದು ಪ್ರಾಧ್ಯಾಪಕರಾದ ಬಸವರಾಜ ತಡಕಲ್ ರವರು ಹೇಳಿದರು. ರಾಷ್ಟ್ರೀಯ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಸ್ಥಾನ, ವಿದ್ಯಾನಿಕೇತನ ಪದವಿ ಪೂರ್ವ ದ್ವಿತೀಯ ಸ್ಥಾನ ಹಾಗೂ ಪ್ರಭವಿತುಂ ಪದವಿ ಪೂರ್ವ ವಿದ್ಯಾರ್ಥಿಗಳು ತೃತೀಯ ಸ್ಥಾನ ಪಡೆದರು.

ಈ ಸಂದರ್ಭದಲ್ಲಿ ಪ್ರಾಧ್ಯಾಪಕರಾದ ಡಾ.ರಾಮಣ್ಣ ಎ, ಯಾಳಗಿ ಶ್ರೀನಿವಾಸ್, ಶ್ರೀಮತಿ ಆಶಾ.ಸಿ, ಕನ್ಯಾಕುಮಾರಿ, ಡಾ.ಪರಮಾನಂದ, ರೋಹಿಣಿ ಮೂರ್ತಿ, ಶಿವಗ್ಯಾನಪ್ಪ, ಡಾ.ರಜಿಯಾ, ಸಣ್ಣಪ್ಪ, ಇಮಾಮ್ ಸಾಬ್ ಸೇರಿದಂತೆ ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು, ವಿದ್ಯಾರ್ಥಿಗಳು ಇದ್ದರು.

# ಅಖಿಲ ಭಾರತ ಮುಷ್ಕರದಲ್ಲಿ ಪಾಲ್ಗೊಳ್ಳಲು ಜಾಗ್ರತೆ ಆಂದೋಲನ



**• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**

10.12.ರಂದು ನಡೆಯುವ ಅಖಿಲ ಭಾರತ ಮುಷ್ಕರದ, ಅಂಗವಾಗಿ ಟ್ರೇಡ್ ಯೂನಿಯನ್ ಸೆಂಟರ ಆಫ್ ಇಂಡಿಯಾ ( TUCI )ನ ಆದಿನದಲ್ಲಿ ಇರುವ ಕರ್ನಾಟಕ ಅಮಾಲರ ಸಂಘ 7 ಮೆಲ್ ಕ್ಯಾಂಪ್ ಹಾಗೂ ಶ್ರೀಶೈಲ ಮಲ್ಲಿಕಾರ್ಜುನ ಹಮಾಲರ ಸಂಘ ಕಲ್ಮಂಗಿ ಜಂಟಿ ಯಾಗಿ ಅಖಿಲ ಭಾರತ ಮುಷ್ಕರದಲ್ಲಿ ಪಾಲ್ಗೊಳ್ಳಲು ಜಾಗೃತಿ ಆಂದೋಲನ ವನ್ನು ಉದ್ದೇಶಿಸಿ ಮಾತನಾಡಿ ದ ಬಿ ಎನ್ ಯರದಿಹಾಳ ದೇಶ ಅತ್ಯಂತ ಅಪಾಯಕಾರಿ ಪರಿಸ್ಥಿತಿಯಲ್ಲಿದೆ. ಕೇಂದ್ರದ ನರೇಂದ್ರಮೋದಿ ಸರ್ಕಾರ ಕಾರ್ಪೊರೇಟ್ ಕುಟುಂಬಗಳ ಪರವಾಗಿ ಕಾನೂನು ಕಾಯ್ದೆಗಳನ್ನು ಮಾಡುವುದರ ಮೂಲಕ ಈ ದೇಶದ ರೈತ ಕೂಲಿ ಕಾರ್ಮಿಕರ ಮೇಲೆ ದುರ್ದಾಳಿ ಮಾಡುತ್ತಿದ್ದಾನೆ ಕಾರ್ಮಿಕ ವಿರೋಧಿ ಮತ್ತು ರೈತ ವಿರೋಧಿ ಕಾನೂನುಗಳನ್ನು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಒತ್ತಾಯಪೂರ್ವಕವಾಗಿ ಜಾರಿ ಮಾಡಿದರ ಮೂಲಕ ದೇಶದ ಜನತೆಯನ್ನು ಗುಲಾಮಗಿರಿಗೆ ತಳ್ಳುವ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಧಿಕ್ಕಾರ 4 ಸಂಹಿತಿಗಳನ್ನು ವಾಪಸ್ ಪಡಿಬೇಕೆಂದು ಆ ಗ್ರಿಹಿಸಿದರು.

ಕೆ ಆರ್ ಎಸ್ ನ ಜಿಲ್ಲಾ ಕಾರ್ಯದರ್ಶಿ ಕಾಮ್ರೆಡ್ ಚಿಟ್ಟಿಬಾಬು ಮಾತನಾಡಿ ಕೇಂದ್ರದ ನರೇಂದ್ರಮೋದಿ ಸರ್ಕಾರ ಭಾರತ ಅಭಿವೃದ್ಧಿ ಹೊಂದುತ್ತಿದೆ ಎನ್ನುವುದರ ಮೂಲಕ ರೈತರ ಪರ ಇರುವ ಕಾಯಿದೆಗಳನ್ನು ತಿದ್ದುಪಡಿ ಮಾಡು ವದರ ಮೂಲಕ ಈ ದೇಶಕ್ಕೆ ಅನ್ನ ಹಾಕುವ ಮನೆಗೆ ಕನ್ನ ಹಾಕುವ ಕೆಲಸವನ್ನು ನರೇಂದ್ರ ಮೋದಿ ಸರ್ಕಾರ ಮಾಡುತ್ತಿದೆ ರೈತರ ಬೆಳೆದ ಬೆಳೆಗೆ ಸರಿಯಾದ ರೇಟ್ ಕೊಡದೆ ಕಾರ್ಪೊರೇಟ್ ಕಂಪನಿಗಳ ಉತ್ಪಾದನೆ ಮಾಡತಕ್ಕಂಥ ವಸ್ತುಗಳು ಮೇಲೆ ಬೆಲೆಯನ್ನು ನಿಗದಿಪಡಿಸುವ ಅಧಿಕಾರ ಕೊಟ್ಟಿದ್ದಾರೆ ಆದರೆ ರೈತ ಶ್ರಮಪಟ್ಟು ದುಡಿದ ಬೆಳೆದ ಬೆಳೆಗೆ ರೇಟ್ ಫಿಕ್ಸ್ ಮಾಡುವ ಅಧಿಕಾರ ಕೊಟ್ಟಿಲ್ಲ ಯಾಕೆ? ಈ ದೇಶದ ಸಂಪತ್ತಲ ಅಧಾನಿ ಅಂಬಾನಿ ಗಳ ಮನೆ ತುಂಬಾವ ಕೆಲಸ ನರೇಂದ್ರ ಮೋದಿಯವರು ಮಾಡುತ್ತಾರೆ ಎಂದರು.

ಕಾಮ್ರೇಡ್ ರಮೇಶ್ ಪಟೇಲ್ ಮಾತನಾಡಿ ಈ ಹಿಂದೆ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಯಿಂದ ದೇಶದ ಗ್ರಾಮೀಣ ಜನತೆಗೆ ಕೆಲಸ ಸಿಗುತ್ತಿತ್ತು ಆದರೆ ಈಗ ಆ ಕಾಯ್ದೆಯನ್ನು ವಿಭಿ ಜೀ ರಾಮ್ ಜಿ ಎಂದು ಬದಲಾವಣೆ ಮಾಡಿ ಕೆಲಸವನ್ನು ಕಿತ್ತಿ ಕೊಳ್ಳುತ್ತಿದ್ದಾರೆ ಗ್ರಾಮೀಣ ಜನತೆಯ ಮೇಲೆ ನಡೆಯುವ ದುರ್ದಾಳಿಯಾಗಿದೆ. ಎಂದರೆ. ಮತ್ತು ಕೇಂದ್ರ ಸರ್ಕಾರ 60% ಹಾಗೂ ರಾಜ್ಯ ಸರ್ಕಾರ 40% ಕೂಲಿ ಹಣ ನೀಡಬೇಕಾಗಿದೆ ಈ ಎರಡು ಸರ್ಕಾರದ ನಡುವೆ ತಿಕ್ಕಾಟ ನಡೆದಿದೆ ದೇಶದ ದುಡಿಯುವ ಜನತೆ ಅಪಾಯದಲ್ಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಸಿಪಿಐ (ಎಂ.ಎಲ್) ಮಾಸ್ ಲೈನ್ ತಾಲೂಕು ಕಾರ್ಯದರ್ಶಿ ಯಲ್ಲಪ್ಪ ಚಿಕ್ಕಬೇರಗಿ ಮೇಘರಾಜ್ ನಾಯಕ ಶರಣೆ ಗೌಡ ಕಲ್ಮಂಗಿ ಬಸವರಾಜ ಕಲ್ಮಮಂಗಿ. ಬಸಪ್ಪ ಕಡಬುರ 7ಮೇಲ್ ಕ್ಯಾಂಪ್ ಈರ್ಪಣ್ಣ 7ಮೇಲ್. ನಿರುಪಾದಿ7ಮೇಲ್ ಕ್ಯಾಂಪ್ ಇನ್ನಿತರ ಹಮಾಲಿ ಕಾರ್ಮಿಕರು ಭಾಗವಹಿಸಿದ್ದರು

# ಸಂಗಾಪುರದಿಂದ ಹುಬ್ಬಳ್ಳಿಗೆ ಪಾದಯಾತ್ರೆ



**• ಮಲ್ಲಮ್ಮ ನುಡಿ ವಾರ್ತೆ. ಬಾಗಲಕೋಟೆ**

ಮಹಾ ಶಿವರಾತ್ರಿ ಪ್ರಯುಕ್ತ ಫೆ.16 ರಂದು ಜರುಗುವ ಹುಬ್ಬಳ್ಳಿಯ ಸಿದ್ಧಾರೂಢರ ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ತಾಲ್ಲೂಕಿನ ಸಂಗಾಪುರದಿಂದ ಭಕ್ತರು ಬುಧವಾರ ಪಾದಯಾತ್ರೆ ಬೆಳೆಸಿದರು. ಬೆಳಿಗ್ಗೆ 8 ಗಂಟೆಗೆ ಸಂಗಾಪುರ ಗ್ರಾಮದ ಸಿದ್ಧಾರೂಢ ಮಠದಿಂದ ಪಾದಯಾತ್ರೆ ಹೊರಟ ಭಕ್ತರ ದಂಡು ಹಳ್ಳೂರ ಗ್ರಾಮಕ್ಕೆ ಆಗಮಿಸಿ ಬಸವಣ್ಣ ದೇವರ ದರ್ಶನ ಪಡೆದು ಭಗವತಿ, ಸಂಗಮಕ್ರಾಸ್, ಸೂಳಿಕೇರಿ ಮಾರ್ಗವಾಗಿ ಬಾದಾಮಿ ತಾಲ್ಲೂಕಿನ ಲಕ್ಕಸಕೊಪ್ಪ ಗ್ರಾಮದಲ್ಲಿ ವಾಸ್ತವ್ಯ ಹೂಡಿತು. ಫೆ.12 ರಂದು ಲಕ್ಕಸಕೊಪ್ಪದಿಂದ ಹೊರಟು ಅಗಸನಕೊಪ್ಪ, ಕೆರೂರ, ಮಮ್ಮಟಗೇರಿ ಮಾರ್ಗವಾಗಿ ಗೋವಿನಕೊಪ್ಪ ತಲುಪಿ ಫೆ.13 ರಂದು ಅಲ್ಲಿಂದ ಕೊಣ್ಣೂರ, ಭೈರನಹಟ್ಟಿ, ನರಗುಂದ ಮಾರ್ಗವಾಗಿ ಹುಣಸಿಕಟ್ಟಿ ತಲುಪಿ ವಾಸ್ತವ್ಯ ಮಾಡಲಿದೆ. ಫೆ.14 ಹುಣಸಿಕಟ್ಟಿಯಿಂದ ಹೊರಟು ಅಳಗವಾಡಿ, ತಿರ್ಲಾಪುರ, ಬ್ಯಾಹಟ್ಟಿ ಮಾರ್ಗವಾಗಿ ಕುಸುಗಲ್ ತಲುಪಿ ಫೆ.15 ರಂದು ಅಲ್ಲಿಂದ ಹೊರಟು ಕುಸುಗಲ್ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸಿದ್ಧಾರೂಢ ಮಠದಲ್ಲಿ ಮಂಗಳಾರತಿ ಸಲ್ಲಿಸಿ ಹುಬ್ಬಳ್ಳಿಯ ಸಿದ್ಧಾರೂಢ ಮಠ ತಲುಪಿ ಸಂಜೆ ಅಕ್ಕಲಕೋಟೆ ರೇವಣಸಿದ್ಧ ಶರಣರ ಮಠದಲ್ಲಿ ವಾಸ್ತವ್ಯ ಮಾಡಿ, ಫೆ.16 ರಂದು ಜರುಗುವ ಸಿದ್ಧಾರೂಢರ ಮಹಾರಥೋತ್ಸವದಲ್ಲಿ ಪಾಲ್ಗೊಳ್ಳುವರು. ಮಧ್ಯಪ್ರದೇಶದ ನರ್ಮದಾ ತೀರದ ಸಿದ್ಧಾರೂಢ ಸ್ವಾಮೀಜಿ, ತೆಗ್ಗಿಯ ವಿದ್ಯಾನಂದ ಸ್ವಾಮೀಜಿ ನೇತೃತ್ವದಲ್ಲಿ ಪಾದಯಾತ್ರೆ ಹೊರಟಿದ್ದು, ಮಾರ್ಗ ಮಧ್ಯದಲ್ಲಿ ವಿವಿಧ ಗ್ರಾಮಗಳಲ್ಲಿ ಪಾದಯಾತ್ರೆಯ ಭಕ್ತರಿಗೆ ಉಪಹಾರ, ಪ್ರಸಾದ ಸೇವೆ ನೀಡಲಾಗುತ್ತಿದೆ. ಪಾದಯಾತ್ರೆಯಲ್ಲಿ ಸಂಗಾಪುರ, ಬೋಡನಾಯಕದಿನ್ನಿ, ಬೆನ್ನೂರು, ಚವಡಾಪುರ, ಬೇವೂರು, ಹಳ್ಳೂರ ಗ್ರಾಮಗಳ ಭಕ್ತರು ಪಾಲ್ಗೊಂಡಿದ್ದಾರೆ ಎಂದು ಯಾತ್ರೆಯ ಉಸ್ತುವಾರಿ ವಹಿಸಿರುವ ಲಕ್ಷ್ಮಣ ದಡ್ಡಿ ತಿಳಿಸಿದರು.

# ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಮನವಿ: ಎಂ ಜಾರ್ಜ್



**• ಮಲ್ಲಮ್ಮ ನುಡಿ ವಾರ್ತೆ ಹುಣಸೂರು:**

ಕರ್ನಾಟಕ 26. 27ನೆಯ ಸಾಲಿನ ಆಯಾ ಆಯವ್ಯ ಕ್ರೈಸ್ತ ಸಮುದಾಯದ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯ ಸರ್ಕಾರಿ ಯೋಜನೆಗಳ ಅನುಷ್ಠಾನ ಸೇರಿದಂತೆ ವಿವಿಧ ಸೌಲಭ್ಯಗಳ ಬೇಡಿಕೆಗಳನ್ನು ಈಡೇರಿಕೆಗಿ ಆಗ್ರಹಿಸಿ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಮತ್ತು ವಕ್ ಬೋರ್ಡ್ ಇಲಾಖೆಯ ಸಚಿವರಾದ ಬಿ ಜೆಡ್ ಜಮೀರ್ ಅಹ್ಮದ್ ಖಾನ್ ರವರಿಗೆ ಮನವಿ ಪತ್ರ ಸಲ್ಲಿಸಿದ್ದೇವೇ ಎಂದು ಅಲ್ಪಸಂಖ್ಯಾತರ ಕ್ರೈಸ್ತ ಹಿತ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಕೂಡ್ಲೂರು ಎಂ ಜಾರ್ಜ್ ತಿಳಿಸಿದ್ದಾರೆ

ನಂತರ ಪತ್ರಿಕಾ ಹೇಳಿಕೆ ನೀಡಿ ರಾಜ್ಯದ ಕ್ರೈಸ್ತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪ್ರೊ ಜೋ ಪಟ್ ರವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ನಡೆದ ಸಚಿವರಾದ ಜಮೀರ್ ಅಹ್ಮದ್ ಖಾನ್ ಅವರನ್ನು ಸಮುದಾಯದ ಮುಖಂಡರು ಸಮಿತಿಯ ಸದಸ್ಯರುಗಳು ಪಾಸ್ಟರ್ ಫಾದರ್ ಗಳು ಸರ್ಕಾರದಿಂದ ಸಹಾಯಧನವನ್ನು ಮನವಿ ಅಲ್ಲದೆ ಕ್ರೈಸ್ತ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು ಸ್ಮಶಾನಕ್ಕೆ ಇಲ್ಲದ ಊರುಗಳು ಸ್ಮಶಾನದ ಅಭಿವೃದ್ಧಿ ಬಡ ಕುಟುಂಬಗಳಿಗೆ ವಸತಿ ಸೌಲಭ್ಯಗಳು ಹಾಡು ಕುರಿ ಹಸು ಸಾಗಣಿಕೆಗೆ ಆರ್ಥಿಕ ನೆರವು ಹಾಗೂ ವಾಹನ ಖರೀದಿ ಗಂಗಾ ಕಲ್ಯಾಣ ಯೋಜನೆ ಸವಲತ್ತುಗಳನ್ನು ನೀಡಲು ಮನವಿ ಸಲ್ಲಿಸಲಾಗಿದೆ

ಸಚಿವರು ಮನವಿ ಸ್ವೀಕರಿಸಿ ಸಚಿವರಾದ ಬಿ ಝೆಡ್ ಝಮೀರ್ ಅಹ್ಮದ್ ಖಾನ್ ಮಾತನಾಡಿ ನಾನು700 ಕೋಟಿ ಬೇಡಿಕೆಯನ್ನು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಅನುದಾನವನ್ನು ಕೊಡಲು ಮೀಸಲಿಗಾಗಿ ಇಡಲು ನಾನು ಒತ್ತಾಯಿಸುವುದಕ್ಕೆ ಭರವಸೆ ನೀಡಿದರು ಎಂದು ತಿಳಿಸಿದ್ದಾರೆ

ಈ ಸಂದರ್ಭದಲ್ಲಿ ಸಚಿವರಾದ ರಹೀಂಮ್ ಖಾನ್

ತಾಲೂಕಿನ ನೋಹೆನ್ ಸಹಕಾರ ಸಂಘದ ಅಧ್ಯಕ್ಷ ಚಿ ಜಾರ್ಜ್ ಜೋಸೆಫ್ ಹಂಟ್ ಸದಸ್ಯರಾದ ಗೀತಾ ಮಾಜಿ ಅಧ್ಯಕ್ಷರಾದ ಬಲ್ಲವೇಂದ್ರನ್ ಕಾರ್ಯದರ್ಶಿ ದೇವ ಮತ್ತು ಡೊನಾಲ್ಡ್ ಪ್ರಕಾಶ್ ರಾಜಪ್ಪ ಜಾನ್ ಕಿಶೋಫರ್ ಪ್ರಿಯಾಂಕಾ ಇದ್ದರು

# ಅಂಬೇಡ್ಕರ್ ನಾಮ ಫಲಕ ಮುಂದೆ ಹಾಕಿದ ಕರೆಂಟು ಕಂಬಗಳನ್ನು ತೆರವುಗೊಳಿಸಿ




**• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು:**

ತಾಲೂಕಿನ ಬಿನ್ನಗೆನೂರು ಕ್ರಾಸ್ ಬಳಿ ಎನ್.ಎಚ್. ರಸ್ತೆ ಕಾಮಗಾರಿ ಪ್ರಾರಂಭಿಸಿದ್ದು, ರಸ್ತೆಯ ಮೇಲಿರುವ ಹಳೆ ಕರೆಂಟ್ ಕಂಬಗಳನ್ನು ಸ್ಥಳಾಂತರ ಮಾಡಲಾಗಿತ್ತು

ಆದರೆ ಪೋತ್ನಾಳ ಬನ್ನಿಗೆನೂರು ಕ್ರಾಸ್‌ನಲ್ಲಿ ಡಾ। ಬಿ.ಆರ್. ಅಂಬೇಡ್ಕರ್‌ರವರ ನಾಮಫಲಕ ಹಾಕಿದ್ದು, ಸದರಿ ನಾಮ ಫಲಕವನ್ನು ಕಾಣದಂತೆ 33 ಕಿ.ವಿ. ಟವರ್ ಕಂಬಗಳನ್ನು ಹಾಕಿ ಮಹಾನ್ ನಾಯಕ ಡಾ.ಅಂಬೇಡ್ಕರ್ ಅವಮಾನ ಮಾಡಿದ್ದೀರಿ. ಕೆ ಇ ಬಿ ಅಧಿಕಾರಿಗಳು ಹಾಕಿರುವ 33 ಕಂಬಗಳನ್ನು

ಕೂಡಲೇ ತೆರವುಗೊಳಿಸಿ ಬೇಕು ಎಂದು ದಲಿತ ಮುಖಂಡರು ತಿಕ್ಕಯ್ಯ ಅವರು ತಾಕೀತು ಮಾಡಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು ಕೆ.ಇ.ಬಿ., ಜೆ.ಇ. ಮತ್ತು ಎ.ಇ.ಇ. ಸಿಂಧನೂರು ಇವರಿಗೆ ಟವರ್ ಹಾಕಿದ ಬಗ್ಗೆ ಫೋನ್ ಕರೆ ಮಾಡಿ ತಿಳಿಸಿದಾಗ ತೆರವುಗೊಳಿಸಿದ್ದು, ಆದರೆ ಪುನಃ ಎನ್.ಎಚ್. ರಸ್ತೆಯ ಗುತ್ತೇದಾರರು ಬನ್ನಿಗನೂರು ಕ್ರಾಸಿನಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ನಾಮ ಫಲಕದ ಪಕ್ಕದ ಪಶ್ಚಿಮ ದಿಕ್ಕಿಗೆ ಮತ್ತು ತಮ್ಮ ಇಲಾಖೆಯ ರಸ್ತೆಯ ಮೇಲೆ ಕಂಬಗಳು ಹಾಕಿದ್ದು, ಕಂಬಗಳನ್ನು ಹಾಕದಂತೆ ತಕರಾರು ಮಾಡಿದರೂ, ಅದೇ ಸ್ಥಳದಲ್ಲಿ ರಾತ್ರೋರಾತ್ರಿ ಕರೆಂಟ್ ಟವರ್ ಕಂಬಗಳು ಹಾಕಿದ್ದರಿಂದ ರಸ್ತೆಯ ಮೇಲೆ ಸಂಚರಿಸುವ ಸಾರ್ವಜನಿಕರಿಗೆ, ವಾಹನಗಳಿಗೆ ಸಂಚಾರ ಮಾಡಲು ತುಂಬಾ ತೊಂದರೆಯಾಗಿದ್ದು ಎಂದು ತಿಳಿಸಿದರು

ಈ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ರಸ್ತೆಯ ಮಧ್ಯ ಭಾಗದಿಂದ ಎಡ ಮತ್ತು ಬಲ 25 ಮೀಟರ್ ಅಂತರ ಇದ್ದದ್ದು ತಮ್ಮ ಇಲಾಖೆಯ ನಿಯಮವಿದ್ದು, ಈ ನಿಯಮವನ್ನು ಮೀರಿ ಎನ್.ಎಚ್. ರಸ್ತೆಯ ಗುತ್ತೇದಾರರು ತಮ್ಮ ರಸ್ತೆಯನ್ನು ಒತ್ತುವರಿ ಮಾಡಿ ಕರೆಂಟ್ ಟವರ್ ಕಂಬಗಳು ಹಾಕಿದ್ದು ತೆರವುಗೊಳಿಸಬೇಕು. ಎಂದು ಹೇಳಿದರು

ನಂತರ ಮಾತನಾಡಿದ ಅವರು ಬನ್ನಿಗನೂರು ಕ್ರಾಸಿನಲ್ಲಿ ಡಾ. ಬಿ.ಆರ್. ಅಂಬೇಡ್ಕರವರ ನಾಮ ಫಲಕ ಕಾಣದಂತೆ ಹಾಗು ಸಾರ್ವಜನಿಕರು, ವಾಹನಗಳು ರಸ್ತೆಯ ಮೇಲೆ ಸಂಚರಿಸಲು ತೊಂದರೆಯಾಗಿರುತ್ತದೆ. ಕಾರಣ ತಮ್ಮ ರಸ್ತೆಯ ಮೇಲೆ ಹಾಕಿರುವ ಟವರ್ ಕಂಬವನ್ನು ತೆರವುಗೊಳಿಸಬೇಕು ಎಂದು ಪತ್ರಿಕಾ ಪ್ರಕಟಣೆ ಮೂಲಕ ತಿಳಿಸಲಾಗಿದೆ ಒಂದು ವಿಳಂಬ ಮಾಡಿದ್ದಲ್ಲಿ ನಾವುಗಳು ತಮ್ಮ ವಿರುದ್ಧ ರಸ್ತಾ ರೋಖಾ ಚಳುವಳಿ ಹೋರಾಟ ಮಾಡಬೇಕಾಗುತ್ತದೆಂದು ಛಲವಾದಿ ಮಹಾಸಭಾದ ಡಾ. ರಾಮಣ್ಣ ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ. ಹುಸೇನಪ್ಪ ರಾಗಲಪರ್ವಿ. ಮೌನೇಶ್. ಹುಸೇನಪ್ಪ. ಅಲಂಪಾಷ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ದಿನಪೂರ್ತಿ ತೆರೆದ ಬಾಗಿಲೇ ಮುಚ್ಚದ ಮರಕಂದಿನ್ನಿ ಸರ್ಕಾರಿ ಶಾಲೆ

**• ಮಲ್ಲಮ್ಮ ನುಡಿ ವಾರ್ತೆ ಮಸ್ಕಿ:**

ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳನ್ನು ಓದಿನೆಡೆಗೆ ಆಕರ್ಷಿಸುವ ನಿಟ್ಟಿನಲ್ಲಿ

ತಾಲೂಕಿನ ಮರಕಮದಿನ್ನಿ ಪಿಎಂಶ್ರೀ ಸರ್ಕಾರಿ ಪ್ರೌಢ ಶಾಲೆಯ ಶಿಕ್ಷಕರು ಕಳೆದ ಮೂರು ವರ್ಷಗಳಿಂದ ವಿಶಿಷ್ಟ ಹೆಜ್ಜೆಯನ್ನಿಟ್ಟಿದ್ದಾರೆ.

ಟಿವಿ ಮತ್ತು ಮೊಬೈಲ್ ಗೀಳಿಗೆ ಬಿದ್ದಿರುವ ವಿದ್ಯಾರ್ಥಿಗಳನ್ನು ಓದಿನ ಕಡೆ ಸೆಳೆಯುವುದು ಕಷ್ಟಕರವಾಗಿರುವ ಇಂದಿನ ದಿನಗಳಲ್ಲಿ ಈ ಶಾಲೆಯ ಶಿಕ್ಷಕರು ದಿನಪೂರ್ತಿ ಶಾಲೆಯನ್ನು ತೆರೆದು ರಾತ್ರಿಪಾಳಿಯಲ್ಲಿ ಬೋಧಿಸುತ್ತಿದ್ದಾರೆ! ಈ ವಿಶೇಷ ಯೋಜನೆಯನ್ನು 'ಬಾಗಿಲು ಮುಚ್ಚದ ಸರ್ಕಾರಿ ಶಾಲೆ' ಅಥವಾ ತೆರೆದಶಾಲೆ ಎಂದು ಕರೆಯಲಾಗುತ್ತಿದೆ.

ಸಾಮಾನ್ಯವಾಗಿ ಶಾಲೆಗಳು ಬೆಳಿಗ್ಗೆ 9.30ಕ್ಕೆ ಆರಂಭವಾಗಿ ಸಂಜೆ 4 30ಕ್ಕೆ ಮುಕ್ತಾಯಗೊಂಡರೆ, ಪಿಎಂಶ್ರೀ ಸರ್ಕಾರಿ ಪ್ರೌಢ ಶಾಲೆಯಲ್ಲಿ ಬೆಳಿಗ್ಗೆ, ಮಧ್ಯಾಹ್ನ, ಸಂಜೆ ಮಾತ್ರವಲ್ಲದೆ ರಾತ್ರಿ ವೇಳೆಯೂ ಪಾಠ ಬೋಧನೆ ನಡೆಯುತ್ತದೆ. ಅಂದರೆ, ದಿನದ 24 ಗಂಟೆಯೂ ಶಾಲೆಯ ಬಾಗಿಲು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗಾಗಿ ತೆರೆದಿರುತ್ತದೆ.9 ರಿಂದ 10ನೇ ತರಗತಿಯವರೆಗೆ 184 ಕ್ಕೂ ಹೆಚ್ಚು ಮಕ್ಕಳು ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದು, ಅದರಲ್ಲಿ 95 ಮಕ್ಕಳು 10ನೇ ತರಗತಿಯ ವಿದ್ಯಾರ್ಥಿಗಳಾಗಿದ್ದಾರೆ.

ಹೆಣ್ಣು ಮಕ್ಕಳು ಸಂಜೆ 6ರ ವರೆಗೆ ಶಾಲೆಯಲ್ಲಿ ಅಧ್ಯಯನ ಮಾಡಿ ಮನೆಗೆ ತೆರಳಿದರೆ,39 ಗಂಡು ಮಕ್ಕಳಿಗೆ ರಾತ್ರಿ 11ರ ತನಕ ಪಾಠ ಮುಂದುವರೆಯುತ್ತದೆ. ರಾತ್ರಿ ಶಾಲೆಯಲ್ಲಿ ಉಳಿಯುವ ಈ ವಿದ್ಯಾರ್ಥಿಗಳನ್ನು ಬೆಳಗ್ಗೆ 5 ಗಂಟೆಗೆ ಎಬ್ಬಿಸಿ ಯೋಗಾ ಅಭ್ಯಾಸ ಮಾಡಿ ನಂತರ ಓದಿಸುವ ವ್ಯವಸ್ಥೆ ಮಾಡಲಾಗಿದೆ.

ಈ ಸರ್ಕಾರಿ ಪ್ರೌಢ ಶಾಲೆಯಲ್ಲಿ ಒಬ್ಬರೆ ಖಾಯಂ ಮುಖ್ಯ ಶಿಕ್ಷಕರಿದ್ದು, ಉಳಿದ 6 ಜನ ಅತಿಥಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ ಈ ಶಿಕ್ಷಕರಿಗೆ ಸರತಿ ಪ್ರಕಾರ ರಾತ್ರಿ ವೇಳೆ ಶಿಫ್ಟ್ ಗಳಲ್ಲಿಯೂ ಹಾಜರಿರುತ್ತಾರೆ. ಕಳೆದ ಮೂರು ವರ್ಷಗಳಿಂದ ಶೈಕ್ಷಣಿಕ ನೆರವು ಮಕ್ಕಳಿಗಾಗಿ ಲಭ್ಯವಿದ್ದು, ಶಿಕ್ಷಕರ ಈ ಕಾರ್ಯಕ್ಕೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



### ಅತಿಥಿ ಶಿಕ್ಷಕರಿಂದ ರಾತ್ರಿ ಪಾಠ

ತಾಲೂಕಿನಲ್ಲಿಯೇ ಮರಕಂದಿನ್ನಿ ಶಾಲೆ, ಬಾಗಿಲು ಮುಚ್ಚದ ಸರ್ಕಾರಿ ಶಾಲೆಯಾಗಿದ್ದು, ಅಲ್ಲಿರುವ ಶಾಲೆಯ ಮುಖ್ಯ ಗುರುಗಳು ಹಾಗೂ ಅತಿಥಿ ಶಿಕ್ಷಕರು ಕಾಳಜಿ ವಹಿಸಿ ರಾತ್ರಿಸಮಯದಲ್ಲಿ ಪಾಠವನ್ನು ಹೇಳಿಕೊಡುತ್ತಿದ್ದು ಅತಿಥಿ ಶಿಕ್ಷಕರ ಕಾರ್ಯ ಶ್ಲಾಘನೀಯವಾಗಿದೆ.

ಮುಂದಿನ ದಿನಗಳಲ್ಲಿ ಉತ್ತಮ ಫಲಿತಾಂಶ ಪಡೆಯುವಲ್ಲಿ ಯಾವುದೇ ಸಂದೇಹ ಇಲ್ಲ.

**ಚಂದ್ರಶೇಖರ ದೊಡ್ಡಮನಿ,**
**ಕ್ಷೇತ್ರ ಶಿಕ್ಷಣಾಧಿಕಾರಿಗಳು, ಮಾನವಿ.**

ಪತ್ರಿಕೆಯೊಂದಿಗೆ ಮಾತನಾಡಿದ ಮುಖ್ಯ ಶಿಕ್ಷಕಿ ಕಮಲಾಕ್ಷಿ ಅವರು ಕಳೆದ 3 ವರ್ಷಗಳಿಂದ ನಾವು ಆರಂಭಿಸಿದ ತೆರೆದಮನೆ ಶಾಲೆ ಕಾರ್ಯಕ್ರಮಕ್ಕೆ ಶಾಲಾ ಎಸ್‌ಡಿಎಂಸಿ ಅಧ್ಯಕ್ಷರು, ಸದಸ್ಯರು, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಎಲ್ಲ ಗ್ರಾಮಸ್ಥರು ಹಾಗೂ ಸಿಬ್ಬಂದಿ ಸಲಹೆ, ಸಹಕಾರದಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ. ಈ ಬಾರಿ ಉತ್ತಮ ಫಲಿತಾಂಶ ನಿರೀಕ್ಷೆಯಲ್ಲಿದ್ದೇವೆ.

ಒಟ್ಟಿನಲ್ಲಿ ತಾಲೂಕಿನ ಹಲವಾರು ಸರ್ಕಾರಿ ಶಾಲೆಗಳು ಎಸ್‌ಎಸ್‌ಎಲ್‌ಸಿ ಫಲಿತಾಂಶಕ್ಕಾಗಿ ಶ್ರಮ ವಹಿಸುತ್ತಿದ್ದು, ಈ ಬಾರಿಯಾದರೂ ಎಸ್‌ಎಸ್‌ಎಲ್‌ಸಿ ಫಲಿತಾಂಶ ನೂರಕ್ಕೆ ನೂರರಷ್ಟು ಬರಲಿ ಎಂಬುದೇ ಶಿಕ್ಷಕರ ಆಶಯವಾಗಿದೆ.

# ಕಂಪ್ಲಿ ಉತ್ಸವಕ್ಕೆ ಜಮೀರ್ ಅಹ್ಮದ್ ಖಾನ್ ಚಾಲನೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.11 ಮತ್ತು 12 ರಂದು ಕಂಪ್ಲಿ ಉತ್ಸವ ಆಯೋಜಿಸಲಾಗಿದೆ.

ಫೆ.12 ರಂದು ಸಂಜೆ 06 ಗಂಟೆಗೆ ಕಂಪ್ಲಿ ಪಟ್ಟಣದ ಸುಂದರಿ ಸಕ್ಕರೆ ಕಾರ್ಖಾನೆ ಮೈದಾನದ ಗಂಡುಗಲಿ ಕುಮಾರರಾಮ ವೇದಿಕೆಯಲ್ಲಿ ಉದ್ಘಾಟನಾ ಸಮಾರಂಭ ನೆರವೇರಲಿದ್ದು, ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಅವರು ಉದ್ಘಾಟಿಸುವರು.

ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾದ ಎಸ್.ಶಿವರಾಜ ತಂಗಡಗಿ ಅವರು ಘನ ಉಪಸ್ಥಿತಿ ಇರುವರು.

ಕಂಪ್ಲಿ ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಕೈಮಗ್ಗ ನೇಕಾರರ ಮಹಾಮಂಡಳಿ ನಿಯಮಿತ (ಕಾವೇರಿ ಹ್ಯಾಂಡ್‌ಲೂಮ್ಸ್‌)ದ ಅಧ್ಯಕ್ಷರೂ ಆಗಿರುವ ಜೆ.ಎನ್. ಗಣೇಶ್ ಅವರು ಅಧ್ಯಕ್ಷತೆ ವಹಿಸುವ ಮುಖ್ಯ ಅತಿಥಿಗಳಾಗಿ ಸಂಸದರುಗಳಾದ ಈ.ತುಕಾರಾಂ, ಕೆ.ರಾಜಶೇಖರ ಬಸವರಾಜ ಹಿಟ್ನಾಳ್, ರಾಜ್ಯ ಸಭೆ ಸದಸ್ಯ ಡಾ.ಸೈಯದ್ ನಾಸೀರ್ ಹುಸೇನ್, ಡಾ.ಬಾಬು ಜಗಜೀವನ್‌ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುಂಡರಗಿ ನಾಗರಾಜ್, ಬಳ್ಳಾರಿ ಗ್ರಾಮೀಣ ಶಾಸಕ ಬಿ.ನಾಗೇಂದ್ರ, ಸಿರುಗುಪ್ಪ ಶಾಸಕ ಬಿ.ಎಂ ನಾಗರಾಜ್, ಬಳ್ಳಾರಿ ನಗರ ಶಾಸಕ ನಾರಾ ಭರತ್ ರೆಡ್ಡಿ, ಸಂಡೂರು ಶಾಸಕಿ ಈ.ಅನ್ನಪೂರ್ಣ, ವಿಧಾನ ಪರಿಷತ್ ಶಾಸಕರಾದ ಡಾ.ಚಂದ್ರಶೇಖರ ಬಿ.ಪಾಟೀಲ, ಶಶೀಲ್ ಜಿ.ನಮೋಶಿ, ವೈ.ಎಂ.ಸತೀಶ್, ಕರ್ನಾಟಕ ಸ್ಟೇಟ್ ಮಿನಿರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ನ ಉಪಾಧ್ಯಕ್ಷ ಹೆಚ್.ಲಕ್ಷಣ್, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಕಂಪ್ಲಿ ತಾಲ್ಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಶ್ರೀನಿವಾಸರಾವ್ ಸೇರಿದಂತೆ ಇತರರು ಭಾಗವಹಿಸುವರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಕೆ.ವಿ.ತ್ರಿಲೋಕಚಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿ ಮಂಜುನಾಥ, ಕಲಬುರಗಿ ಪ್ರಾದೇಶಿಕ ಆಯುಕ್ತರಾದ ಜಹೀರಾ ನಾಸೀಮ್, ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್. ಕೆ., ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಕೆ.ಎಂ. ಗಾಯತ್ರಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಸುಮನ್ ಡಿ ಪೆನ್ನೇಕರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್., ಸಹಾಯಕ ಆಯುಕ್ತ ರಾಜೇಶ್. ಹೆಚ್.ಡಿ ಸೇರಿದಂತೆ ಇತರರು ಉಪಸ್ಥಿತರಿರುವರು.




**ವಿವಿಧ ಕಾರ್ಯಕ್ರಮಗಳು:**

ಫೆ.11 ರಂದು ಮಧ್ಯಾಹ್ನ 03 ರಿಂದ 06 ಗಂಟೆಯವರೆಗೆ ಕಂಪ್ಲಿ ಕೋಟೆಯ ಪಂಪಾಪತಿ ದೇವಸ್ಥಾನದಿಂದ ಸೋಮಪ್ಪ ಕೆರೆಯವರೆಗೆ ಕಲಾ ತಂಡಗಳಿಂದ ಭವ್ಯ ಮೆರವಣಿಗೆ ನಡೆಯಲಿದೆ. ಸಂಜೆ 06 ರಿಂದ 07 ಗಂಟೆಯವರೆಗೆ ಐತಿಹಾಸಿಕ ಸೋಮಪ್ಪ ಕೆರೆ ವೇದಿಕೆಯಲ್ಲಿ ಸ್ಥಳೀಯ ಕಲಾವಿದರಿಂದ ಭರತ ನಾಟ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ.

ಸಂಜೆ 07 ರಿಂದ 08 ಗಂಟೆಯವರೆಗೆ ಐತಿಹಾಸಿಕ ಸೋಮಪ್ಪ ಕೆರೆ ತಟದಲ್ಲಿ ತುಂಗಭದ್ರ ಆರತಿ ಮಹೋತ್ಸವ ಜರುಗಲಿದೆ. ಬಳಿಕ ರಾತ್ರಿ 08 ರಿಂದ 11 ಗಂಟೆಯವರೆಗೆ ಐತಿಹಾಸಿಕ ಸೋಮಪ್ಪ ಕೆರೆ ವೇದಿಕೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಪ್ರಗತಿ ಸಾಧಿಸಿದ ಸಾಧಕರಿಗೆ, ಹೋರಾಟಗಾರರಿಗೆ ಸನ್ಮಾನ ಕಾರ್ಯಕ್ರಮ ಆಯೋಜಿಸಲಾಗಿದೆ.

ಫೆ.12 ರಂದು ಕಂಪ್ಲಿ ಪಟ್ಟಣದ ಸುಂದರಿ ಸಕ್ಕರೆ ಕಾರ್ಖಾನೆ ಮೈದಾನದ ಗಂಡುಗಲಿ ಕುಮಾರರಾಮ ವೇದಿಕೆಯಲ್ಲಿ ಮಧ್ಯಾಹ್ನ 03 ರಿಂದ ಸಂಜೆ 06 ಗಂಟೆಯವರೆಗೆ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಬಳಿಕ ಸಂಜೆ 06 ರಿಂದ 07 ಗಂಟೆಯವರೆಗೆ ಜಿಲ್ಲಾ ಉಸ್ತುವಾರಿ ಸಚಿವರಿಂದ ಉದ್ಘಾಟನಾ ಕಾರ್ಯಕ್ರಮ ನೆರವೇರಲಿದೆ.

ಬಳಿಕ ರಾತ್ರಿ 07 ರಿಂದ 09 ಗಂಟೆಯವರೆಗೆ ರಾಜ್ಯ ಮಟ್ಟದ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ, 09 ರಿಂದ 11 ಗಂಟೆಯವರೆಗೆ ಚಂದನ್ ಶೆಟ್ಟಿ ಮತ್ತು ತಂಡದವರಿಂದ ಸಂಗೀತ ಕಾರ್ಯಕ್ರಮ, ರಾತ್ರಿ 11 ರಿಂದ 12 ಗಂಟೆಯವರೆಗೆ ಬಾಣ ಬಿರುಸು ಪ್ರದರ್ಶನ, ರಾತ್ರಿ 12 ರಿಂದ ಆಸಕ್ತ ಸ್ಥಳೀಯ ಕಲಾವಿದರಿಂದ ಕಾರ್ಯಕ್ರಮಗಳು ನಡೆಯಲಿವೆ.

# ಸ್ವಚ್ಛ ಸುಂದರ ನಗರಕ್ಕ ಸಾರ್ವಜನಿಕರ ಸಹಕಾರ ಅಗತ್ಯ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಸ್ವಚ್ಛತೆ ಇದ್ದರೆ ಮಾತ್ರ ಉತ್ತಮ ಆರೋಗ್ಯ ಸಾಧ್ಯ. ಅದಕ್ಕಾಗಿ ನಗರದ ನಾಗರೀಕರು ನಗರದ ಸ್ವಚ್ಛತಾ ಕಾರ್ಯದಲ್ಲಿ ಹೆಚ್ಚಿನ ಸಹಕಾರ ನೀಡಬೇಕು ಎಂದು ಮೇಯರ್ ಪಿ.ಗಾದೆಪ್ಪ ಹೇಳಿದರು.

ಅವರು ಇಂದು ನಗರದ ವಾಲ್ಮೀಕಿ ಭವನದಲ್ಲಿ ಪಾಲಿಕೆಯಿಂದ ಹಮ್ಮಿಕೊಂಡಿದ್ದ "ನಮ್ಮ ಬಳ್ಳಾರಿ, ಸ್ವಚ್ಛ ಬಳ್ಳಾರಿ" ವಿಷಯದ ಮೇಲಿನ ಚಿತ್ರಕಲೆ ಸ್ಪರ್ಧೆ ಉದ್ಘಾಟನೆ ಮಾಡಿ ಮಾತನಾಡುತ್ತಿದ್ದರು. ನಮ್ಮ ಬಳ್ಳಾರಿ ಸ್ವಚ್ಛವಾಗಿಡುವ ಕೆಲಸ ಪಾಲಿಕೆರದ್ದು ಎಂಬ ಭಾವನೆ ಬಿಡಬೇಕು. ಅದನ್ನು ಮಕ್ಕಳಿಂದ ಪೋಷಕರಿಗೆ ಅರಿವು ಮೂಡಿಸಲು ಈ ಸ್ಪರ್ಧೆಗಳಿಂದ ಪ್ರಯತ್ನ ನಡೆಯುತ್ತೆ. ಸ್ವಚ್ಛ ಸುಂದರ ನಗರಕ್ಕೆ ಸರ್ವರ ಸಹಕಾರ ಅಗತ್ಯ ಎಂದರು.

ಪಾಲಿಕೆ ಆಯುಕ್ತ ಪಿ.ಎಸ್. ಮಂಜುನಾಥ ಮಾತನಾಡಿ, ಸ್ವಚ್ಛತೆಯೇ ಸೇವೆ ಎಂದು ಹೇಳಿದ ಮಹಾತ್ಮ ಗಾಂಧೀಜಿ ಅವರ ಆಶಯದಂತೆ ಪಾಲಿಕೆ, ಸಾರ್ವಜನಿಕರ ಸಹಭಾಗಿತ್ವದಲ್ಲಿ ಸ್ವಚ್ಛತೆಯ ಪ್ರಯತ್ನ ನಡೆಸಿದೆ. ಈ ಬಗ್ಗೆ ಮಕ್ಕಳಿಂದಲೇ ಅರಿವು ಹೆಚ್ಚಾಗಲಿ ಎಂಬ ನಿಟ್ಟುನಲ್ಲಿ ಈ ಸ್ಪರ್ಧೆ. ಮಕ್ಕಳೇ ನಿಮ್ಮ ಮನೆ, ಪೋಷಕರು ಮತ್ತು ನೆರಹೊರೆಯವರಿಗೆ ಸ್ವಚ್ಛತೆ ಬಗ್ಗೆ ತಿಳಿಸಬೇಕು. ಮನೆಯಲ್ಲಿನ ಕಸ ರಸ್ತೆಗೆ ಬೀಸಾಡದೇ ಕಸ ಸಂಗ್ರಹ ವಾಹನಗಳಿಗೆ ನೀಡಬೇಕು ಎಂದರು.

ಮಾಜಿ ಮೇಯರ್ ರಾಜೇಶ್ವರಿ ಮಾತನಾಡಿ, ಮಕ್ಕಳು ಪ್ಲಾಸ್ಟಿಕ್ ಬಳಕೆಯಿಂದ ದೂರವಾಗಿ ಬಳ್ಳಾರಿಯನ್ನು ಸ್ಮಾರ್ಟ್ ಸಿಟಿ ಮಾಡಲು ನಿಮ್ಮ ಕೊಡುಗೆ ಮುಖ್ಯ ಎಂದು ಮಕ್ಕಳಿಗೆ ಕರೆ ನೀಡಿದರು.

ಪಾಲಿಕೆಯ ಸಹಾಯಕ ಅಭಿಯಂತರ(ಪರಿಸರ) ಮುನಾಫ್ ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿ, ದೇಶಾದ್ಯಾಂತ ಸ್ವಚ್ಛತೆ ಕುರಿತು ಸ್ಪರ್ಧೆ ನಡೆಯುತ್ತದೆ. ಸರ್ಕಾರದ ನಿರ್ದೇಶನದಂತೆ ಇಂದು "ನಮ್ಮ ಬಳ್ಳಾರಿ, ಸ್ವಚ್ಛ ಬಳ್ಳಾರಿ" ವಿಷಯದ ಮೇಲೆ ಚಿತ್ರಕಲೆ ಸ್ಪರ್ಧೆ ನಗರದ 76 ಶಾಲೆಗಳ 97 ತಂಡಗಳು ಮೂರು ವಿಭಾಗಗಳಲ್ಲಿ ನಡೆಯುತ್ತಿದೆ. ಸ್ವಚ್ಛತೆ, ಪರಿಸರ, ಸಾಮಾಜಿಕ ಕಾಳಜಿ ಬಗ್ಗೆ ಮಕ್ಕಳಿಗೆ ಮನದಟ್ಟು ಮಾಡಲು ಈ ಕಾರ್ಯಕ್ರಮ ಹಮ್ಮಿಕೊಂಡಿದೆಂದು. ಸಾರ್ವಜನಿಕರ ಸಹಭಾಗಿತ್ವದಲ್ಲಿ ನಮ್ಮ ಪಾಲಿಕೆ ದೇಶ ಮಟ್ಟದಲ್ಲಿ 73 ನೇ ಸ್ಥಾನದಲ್ಲಿ, ರಾಜ್ಯ ಮಟ್ಟದಲ್ಲಿ 12 ನೇ ಸ್ಥಾನ ಪಡೆದಿತ್ತು ಎಂದು ಹೇಳಿದರು.

ಈ ವೇಳೆ ನಗರದ ಸ್ವಚ್ಛತೆ ಬಗ್ಗೆ ಮಕ್ಕಳಿಗೆ ಪ್ರತಿಜ್ಞಾವಿಧಿ ಭೋಧಿಸಲಾಯ್ತು.

ಖಾಸಗಿ ಶಾಲೆಗಳ ಮಾಲೀಕರ ಸಂಘದ ಮರಿಸ್ವಾಮಿ ರೆಡ್ಡಿ, ಪಾಲಿಕೆ ಸದಸ್ಯರಾದ ವಿ.ಕುಬೇರ, ಗಾಯತ್ರ, ಮುಖಂಡರಾದ ಬಿ.ಆರ್.ಎಲ್.ಶೀನಾ ಇದ್ದರು. ಪಾಲಿಕೆಯ ಪರಿಸರ ವಿಭಾಗದ ಕಿರಣ್ ಕುಮಾರ್ ಕಾರ್ಯಕ್ರಮ ನಿರ್ವಹಣೆ ಮಾಡಿದರು.

# ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಗೆ ಬರುವ 110/11ಕೆವಿ ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾರ್ಯದ ನಿಮಿತ್ತ ಮತ್ತು ದುರಸ್ತಿ, ಕಬ್ಬಿಣದ ಕಂಬಗಳ ಬದಲಾವಣೆ ಕಾಮಗಾರಿ ಕೈಗೊಳ್ಳುತ್ತಿರುವುದರಿಂದ ಫೆ.12 ರಂದು ಬೆಳಿಗ್ಗೆ 09.30 ರಿಂದ ಸಂಜೆ 06.30 ಗಂಟೆಯವರೆಗೆ ಎಫ್–24 ಫೀಡರ್ ವ್ಯಾಪ್ತಿಯ ಬಂಡಿಮೋಟ್, ಬಾಪೂಜಿ ನಗರ, ಕುರಿಕಮೇಲ, ಕಮೇಲ ರಸ್ತೆ, ಬೆಂಗಳೂರು ರಸ್ತೆ, ತೇರು ಬೀದಿ, ಬ್ರೂಸ್ ಪೇಟೆ ಪೊಲೀಸ್ ಠಾಣೆ ಸೇರಿದಂತೆ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಹೆಸರು ನೋಂದಣಿಗೆ ಆಹ್ವಾನ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ 2025–26 ನೇ ಸಾಲಿಗೆ ಮಹಿಳಾ ಉದ್ದಿಮೆದಾರರನ್ನು ನೋಂದಾಯಿಸಲು ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್ ಆಪ್ ರೂಪಿಸಿದ್ದು, ಅರ್ಹರು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಆಹ್ವಾನಿಸಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ತಿಳಿಸಿದ್ದಾರೆ.

ಕರ್ನಾಟಕ ರಾಜ್ಯದ ಮಹಿಳೆಯರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿಗೊಳಿಸಲು ಸ್ವಯಂ ಉದ್ಯೋಗದಲ್ಲಿ ತೊಡಗಿಸಿಕೊಂಡಿರುವ ಮಹಿಳೆಯರನ್ನು ಮಹಿಳಾ ಉದ್ಯಮಿದಾರರನ್ನಾಗಿ ಮಾಡಲು ಹಾಗೂ ಮಹಿಳೆಯರು ಉತ್ಪಾದಿಸುವ ಹಾಗೂ ತಯಾರಿಸುವ ವಿವಿಧ ವಸ್ತುಗಳಿಗೆ ಉಚಿತ ಮಾರುಕಟ್ಟೆ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಗೃಹಲಕ್ಷ್ಮಿ ಡಿಜಿಟಲ್ ವೇದಿಕೆಯ ಸೌಲಭ್ಯದಲ್ಲಿ ಕಲ್ಪಿಸಲಾಗಿದ್ದು, ಇದರ ಪೂರಕಗಾಗಿ ಗೃಹಲಕ್ಷ್ಮಿ ಡಿಜಿಟಲ್ ಮಾರ್ಕೆಟಿಂಗ್ ಆಪ್ ಅನ್ನು ಲಾಂಚ್ ಮಾಡಲಾಗಿದೆ. ಹಾಗಾಗಿ ಅರ್ಹ ಮಹಿಳಾ ಉದ್ಯಮಿಗಳು ನೋಂದಾಯಿಸಿಕೊಳ್ಳಲು ಅರ್ಜಿ ಸಲ್ಲಿಸಬಹುದಾಗಿದೆ.

*ಅರ್ಹರು:*

ಸ್ತ್ರೀ ಶಕ್ತಿ ಸ್ವಸಹಾಯ ಗುಂಪಿನ ಸದಸ್ಯರು, ಎನ್‌ಆರ್‌ಎಲ್‌ಎಂ ಫಲಾನುಭವಿಗಳು ಹಾಗೂ ಉದ್ಯಮಿಗಳು, ಅಕ್ಕ ಕೆಫೆ ಘಟಕಗಳನ್ನು ನಿರ್ವಹಿಸುತ್ತಿರುವ ಮಹಿಳೆಯರು, ಕರ್ನಾಟಕ ಸಣ್ಣ ಪ್ರಮಾಣದ ಕೈಗಾರಿಕೆಗಳ ಸಂಘ–ಘಟಕಗಳ ಮಹಿಳಾ ಉದ್ಯಮಿಗಳು, ರುಡ್‌ಸೆಟ್ (ಧರ್ಮಸ್ಥಳ) ಮೂಲಕ ತರಬೇತಿ ಪಡೆದು ಸ್ವ ಉದ್ಯೋಗ ನಡೆಸುತ್ತಿರುವ ಮಹಿಳೆಯರು ಅರ್ಹರಾಗಿರುತ್ತಾರೆ.

ನಿಗಮದಿಂದ ಹಾಗೂ ಸರ್ಕಾರದ ವಿವಿಧ ನಿಗಮ ಮಂಡಳಿ ಮತ್ತು ಇಲಾಖೆಗಳಿಂದ ವಿವಿಧ ಯೋಜನೆಗಳಡಿ ಸೌಲಭ್ಯ ಪಡೆದ ಮಹಿಳಾ ಫಲಾನುಭವಿಗಳು, ಜಿಲ್ಲಾ ತಾಲ್ಲೂಕು ಮತ್ತು ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರೆ ಯಶಸ್ವಿ ಮಹಿಳಾ ಉದ್ದಿಮೆದಾರರು ತಾವು ತಯಾರಿಸುವ ಉತ್ಪನ್ನಗಳ ಮಾಹಿತಿಯನ್ನು ನಗರದ ಎಸ್.ಪಿ ವೃತ್ತದ ಬಳಿಯ ದೇವಿನಗರದ ಮಹಿಳಾ ಪೊಲೀಸ್ ಠಾಣೆಯ ಪಕ್ಕದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರ ಕಚೇರಿಗೆ ಭೇಟಿ ನೀಡಿ ಮಹಿಳಾ ಅಭಿವೃದ್ಧಿ ನಿಗಮದ ಅಭಿವೃದ್ಧಿ ನಿರೀಕ್ಷಕರನ್ನು ಸಂಪರ್ಕಿಸಬಹುದು ಎಂದು ಮಹಿಳಾ ಮತ್ತು ಮಕ್ಕಳ ಆಭಿವೃದ್ಧಿ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿದ್ಯುತ್ ವ್ಯತ್ಯಯ 12ಕ್ಕೆ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ–1 ರ ವ್ಯಾಪ್ತಿಯ 220/11ಕೆವಿ ಅಲ್ಲಿಪುರ ವಿದ್ಯುತ್ ಉಪ–ಕೇಂದ್ರದಲ್ಲಿ 20ಎಂವಿಎ ಟ್ರಾನ್ಸಫಾರ್ಮರ್ ನ ನಿರ್ವಹಣಾ ಕಾರ್ಯ ಹಾಗೂ ಈ ಉಪಕೇಂದ್ರದಿಂದ ಸರಬರಾಜು ಆಗುವ ವಿದ್ಯುತ್ ಲೈನ್ ಗಳ ನಿರ್ವಹಣೆ ಕಾರ್ಯ ಕೈಗೊಳ್ಳುತ್ತಿರುವುರಿಂದ ಫೆ.12 ರಂದು ಬೆಳಿಗ್ಗೆ 09 ರಿಂದ ಸಂಜೆ 06 ಗಂಟೆಯವರೆಗೆ ಬಳ್ಳಾರಿ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:**

ಎಫ್–33 ರ ವ್ಯಾಪ್ತಿಯ ಕೆ.ಚ್.ಬಿ. ಕಾಲೋನಿ, ನೇತಾಜಿ ನಗರ, ಇನ್ನಾರೆಡ್ಡಿ ಲೇಔಟ್, ಇನ್‌ಫ್ಯಾಂಟ್ರಿ ರೋಡ್, ವಾಸವಿ ಸೂಲ್ಕ್, ಕೊಳಗಲ್ ರೋಡ್, ವಿದ್ಯಾನಗರ, ಕಲ್ಯಾಣಿ ಕಾಲೋನಿ, ಭತ್ರಿ ರೋಡ್, ಭತ್ರಿ, ಗುರು ಕಾಲೋನಿ, ಸತ್ಯವಾಣಿ ನಗರ, ಸಿದ್ದಾರ್ಥ ನಗರ, ವಿಯಾನಿ ಶಾಲೆ. ಎಫ್–34 ರ ವ್ಯಾಪ್ತಿಯ ಫಸ್ಟ್ ಗೇಟ್, ಕೊರಚ ಸ್ಟ್ರೀಟ್, ಉರ್ದು ಟ್ರೈನಿಂಗ್ ಸ್ಕೂಲ್, ಕಡಪಗೆರೆ, ಟೈಲರ್ ಸ್ಟ್ರೀಟ್, ವಡ್ಡೆ ನಾಗಪ್ಪ ಕಾಲೋನಿ, ತಿಲಕ್ ನಗರ, ವಿನಾಯಕ ನಗರ, ಐಶ್ವರ್ಯ ಕಾಲೋನಿ, ಐಟಿಐ ಕಾಲೇಜು, ರೇಡಿಯೋ ಪಾರ್ಕ್, ಕೌಲ್ ಬಜಾರ್ ಮೇನ್ ರೋಡ್. ಎಫ್–35 ವ್ಯಾಪ್ತಿಯ ಜಲ ಶುದ್ಧೀಕರಣ ಕೇಂದ್ರ.ಎಫ್–36 ವ್ಯಾಪ್ತಿಯ ಬಂಡಿಹಟ್ಟಿ, ಆಶ್ರಯ ಕಾಲೋನಿ, ಈದ್ಗ ರೋಡ್, ಟೀರ್ಸ್ ಕಾಲೋನಿ, ಜಾಗೃತಿ ನಗರ ಸರ್ಕಲ್, ಆಜಾದ್ ನಗರ. ಎಫ್–40 ವ್ಯಾಪ್ತಿಯ ಕುವೆಂಪು ನಗರ, ರಾಮಂಜನೇಯ ನಗರ, ಸಿ.ಎಮ್.ಸಿ ಕಾಲೋನಿ, ಎಕ್ಸ್ ಸರ್ವಿಸ್‌ಮೆನ್ ಕಾಲೋನಿ.ಎಫ್–72 ವ್ಯಾಪ್ತಿಯ ಕಾಂಟೋನ್ ಮೆಂಟ್, ಸೂರ್ಯ ಕಾಲೋನಿ, ತಿಲಕ್ ನಗರ, ಸುಧಾ ಕ್ರಾಸ್, ನಂದಿ ಕಾಲೋನಿ, ಹೆಚ್.ಆರ್.ಜಿ ಕಾಲೋನಿ, ಜಯನಗರ, ರಹಿಮಬಾದ್ ಕಾಲೋನಿ, ಸಾರ್ವಜನಿಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ನಲಂದ ಕಾಲೇಜ್, ವಿಜಯನಗರ ಕಾಲೋನಿ, ಕೆ.ಹೆಚ್.ಬಿ ಕಾಲೋನಿ, ಜಗನಾಥ ಮಂದಿರ, ಭಾಸ್ಕರ ನಾಯ್ಡು ಸ್ಟ್ರೀಟ್, ಸೆಂಟ್ ಜೋಸೆಫ್ ಸ್ಕೂಲ್, ಬೆಳಗಲ್ ಕ್ರಾಸ್, ಚಂದ್ರ ಕಾಲೋನಿ, ಎಂ.ಕೆ ಗಡಂಗ್.

ಎಫ್–77 ವ್ಯಾಪ್ತಿಯ ಬಸವನಕುಂಟೆ, ಕೋಟೆ ಪ್ರದೇಶ, 1 ನೇ ಗೇಟ್, 2 ನೇ ಗೇಟ್, ಸಿದ್ದಾರ್ಥ ನಗರ, ಸುಧಾಕ್ರಾಸ್, ಒ.ಪಿ.ಡಿ,. ಎಫ್–75 ವ್ಯಾಪ್ತಿಯ ಟ್ರಾಮಾ ಕೇರ್ ಸೆಂಟರ್, ಗೋಪಾಲಗೌಡ ನಗರ. ಎಫ್–76 ವ್ಯಾಪ್ತಿಯ ಅರಣ್ಯ ಕ್ವಾಟರ್ಸ್, ಜಾಗೃತಿ ನಗರ, ರೇಷ್ಮೆ ಇಲಾಖೆ, ಟೀರ್ಸ್ ಕಾಲೋನಿ, ಈದ್ಗ ಮೈದಾನ, ರಾಮಾಂಜನೇಯ ನಗರ. ಎಫ್–77 ವ್ಯಾಪ್ತಿಯ ಓ.ಪಿ.ಡಿ., ಶಾಂತಿ ನಗರ, ಕೊಳಗಲ್ ರೋಡ್, ಬಿಎಂಆರ್‌ಸಿ ಕ್ಯಾಂಪಸ್ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

# ಕನ್ನಡ ಕೇವಲ ಭಾಷೆಯಲ್ಲ ಬದುಕಿನ ಜೀವಾಳ




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ಕನ್ನಡ ಭಾಷೆ ಕೇವಲ ಸಂವಹನ ಸಾಧನವಾಗದೆ ಬದುಕಿನ ಜೀವಾಳವಾಗಬೇಕೆಂದು ಮಕ್ಕಳ ಕಲ್ಯಾಣ ಸಮಿತಿ ಜಿಲ್ಲಾಧ್ಯಕ್ಷರಾದ ಶ್ರೀಮತಿ ತ್ರಿವೇಣಿ ಪತ್ತಾರ ಅಭಿಪ್ರಾಯಪಟ್ಟರು.

ಅಖಂಡ ಬಳ್ಳಾರಿ ಜಿಲ್ಲಾ ಕ.ಸಾ.ಪ ವು ಬಳ್ಳಾರಿಯ ಸರ್ಕಾರಿ ಮಹಿಳಾ ಪದವಿ ಕಾಲೇಜಿನಲ್ಲಿ ಆಯೋಜಿಸಿದ್ದ ಡಿ. ಪಾಂಡುರಂಗ ಸ್ಮರಣಾರ್ಥ ದತ್ತಿ, ಟಿ.ಎಂ. ಬಸವರಾಜ ಶಾಸ್ತ್ರಿ ಸ್ಮರಣಾರ್ಥ ದತ್ತಿ, ವೈ. ಲಿಂಗಾರೆಡ್ಡಿ ಮತ್ತು ಪಾರ್ವತಮ್ಮ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಜಾಗತೀಕರಣದ ಯಾಂತ್ರಿಕ ಯುಗದಲ್ಲಿ ಪುಸ್ತಕ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ಕನ್ನಡ ಸಾಹಿತ್ಯ ಪರಿಷತ್ತು ದತ್ತಿ ಕಾರ್ಯಕ್ರಮಗಳ ಮೂಲಕ ಮಾಡುತ್ತಿದೆ ಎಂದು ತ್ರಿವೇಣಿ ಪತ್ತಾರ ತಿಳಿಸಿದರು.

ಆಧುನಿಕ ಮಹಿಳಾ ಸಾಹಿತ್ಯ–ಒಂದು ಪಕ್ಷಿನೋಟ ಕುರಿತು ಅಲ್ಲಂ ಸುಮಂಗಳಮ್ಮ ಪದವಿ ಮಹಿಳಾ ವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಸುವರ್ಣಮ್ಮ ವಿಶೇಷ ಉಪನ್ಯಾಸ ನೀಡುತ್ತಾ ಮಹಿಳಾ ಸೂಕ್ಷ್ಮ ಸಂವೇದನೆಗಳನ್ನು ಸಾಹಿತ್ಯದ ಮೂಲಕ ವ್ಯಕ್ತಪಡಿಸುವಲ್ಲಿ ಆಧುನಿಕ ಮಹಿಳಾ ಸಾಹಿತಿಗಳು ಯಶಸ್ವಿಯಾಗಿದ್ದಾರೆ ಎಂದು ತಿಳಿಸಿದರು.

ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರಜ್ಞಾ.ಕೆ.ವಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ, ಕನ್ನಡ ಸಾಹಿತ್ಯ ಪರಿಷತ್ತು ಮುಕ್ತ ವಿಶ್ವವಿದ್ಯಾಲಯವಿದ್ದಂತೆ, ಕನ್ನಡ ಕಾರ್ಯಕ್ರಮಗಳ ಮೂಲಕ ಜನಮಾನಸಕ್ಕೆ ಕನ್ನಡ ಸಾಹಿತ್ಯವನ್ನು ತಲುಪಿಸುತ್ತಿರುವುದು ಶ್ಲಾಘನೀಯ ಎಂದರು.

ನವಕರ್ನಾಟಕ ಯುವಶಕ್ತಿ ಸಂಘಟನೆಯ ರಾಜ್ಯ ಉಪಾಧ್ಯಕ್ಷರಾದ ಸಿದ್ಮಲ್ ಮಂಜುನಾಥ, ದತ್ತಿ ದಾನಿಗಳಾದ ಟಿ.ಎಂ.ಮಲ್ಲಿಕಾರ್ಜುನ, ಕಸಾಪ ಜಿಲ್ಲಾ ಸಂಚಾಲಕ ಕಪ್ಪಗಲ್ಲು ಬಿ ಚಂದ್ರಶೇಖರ ಆಚಾರ್, ಸಹಾಯಕ ಪ್ರಾಧ್ಯಾಪಕರಾದ ಡಾ. ಸಿ. ಕೊಟ್ರೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಕು. ಭಾವನ ಕಾರ್ಯಕ್ರಮವನ್ನು ನಿರೂಪಿಸಿದರು.

# ಜನಸಂಖ್ಯೆಗೆ ಅನುಗುಣವಾಗಿ ಅನುದಾನ ನೀಡಲು ಮನವಿ

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**



ಮಂಡಿಸಲಿರುವ 2026–2027ರ ಬಜೆಟ್ ನಲ್ಲಿ ದಲಿತರ ಜನಸಂಖ್ಯೆಯ ಅನುಗುಣವಾಗಿ ಶೇ. 24.1ರಷ್ಟು ಅನುದಾನ ಮೀಸಲಿರಿಸಿ, ಹಣ ದುರ್ಬಳಕೆ ತಡೆಯಲು ಖಅಖಕ/TSP ಕಾಯ್ದೆ ಸೆಕ್ಷನ್ 7 (ಸಿ) ರದ್ದುಪಡಿಸುವಂತೆ ಹಾಗೂ ನ್ಯಾಯ ಸಮ್ಮತವಾದ ಬೇಡಿಕೆಗಳಿಗೆ ಸೂಕ್ತ ನ್ಯಾಯ ಒದಗಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿಗಳ ಮೂಲಕ ರಾಜ್ಯದ ಮುಖ್ಯಮಂತ್ರಿಗಳಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ( ಪ್ರೊಫೆಸರ್ ಬಿ ಕೃಷ್ಣಪ್ಪ ಬಣ) ಜಿಲ್ಲಾ ಸಮಿತಿ ಮನವಿ ಮಾಡಿದೆ.

**ಹಕ್ಕೊತ್ತಾಯಗಳು:** 2026–27ರ ಒಟ್ಟು ಬಜೆಟ್ ನಲ್ಲಿ ದಲಿತರ ಜನಸಂಖ್ಯೆ ಅನುಗುಣವಾಗಿ ಶೇ. 24.1ರಷ್ಟು ಅನುದಾನ ಮೀಸಲಿರಿಸಬೇಕು, ಮೀಸಲಿರಿಸಿದ ಅನುದಾನ ದುರ್ಬಳಕೆ ತಡೆಯಲು ಖಅಖಕ/ಖಿಖಕ ಕಾಯ್ದೆ 2013ರ ಸೆಕ್ಷನ್ 7 (ಡಿ) ರದ್ದುಪಡಿಸಿದಂತೆ ಸೆಕ್ಷನ್ 7 (ಸಿ) ರದ್ದುಪಡಿಸಿ ಆದೇಶ ಹೊರಡಿಸಬೇಕು ಹಾಗೂ SCSP/TSPಯ ಅನುದಾನ ನಿಯಮ ಬಾಹಿರವಾಗಿ ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿದ 25 ಸಾವಿರ ಕೋಟಿ ಹಣವನ್ನು ಹಿಂತಿರುಗಿಸಬೇಕು.

2 ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿನ ನಿವೇಶನ ರಹಿತ ಕುಟುಂಬಗಳಿಗೆ ನಿವೇಶನಗಳನ್ನು ಹಂಚಿಕೆ ಮಾಡಲು ಸರ್ಕಾರ ಖರೀದಿಸುವ ಜಮೀನು ದರ ಅವೈಜ್ಞಾನಿಕವಾಗಿದೆ. ಖಾಸಗಿ ಜಮೀನು ಬೆಲೆ ಅತೀ ಹೆಚ್ಚಳವಾಗಿದ್ದು, ವಸತಿ ಇಲಾಖೆಯು ಹೊರಡಿಸಿರುವ ಆದೇಶ ಸಂಖ್ಯೆ: ವಇ 33 HAH2016 (ಭಾಗ –2) ದಿನಾಂಕ: 12.07.2016 ಅನ್ನು ಪುನಃ ಪರಿಷ್ಕರಿಸಿ ಪ್ರಸ್ತುತ ಭೂಮಿಯ ದರ ಹೆಚ್ಚಿಸಿ ಆದೇಶ ಹೊರಡಿಸಬೇಕು.

ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ವಸತಿ ಸೌಲಭ್ಯ ಪಡೆಯಲು ನಿವೇಶನ ಹೊಂದಿರಬೇಕು. ಸ್ವಂತ ನಿವೇಶನ ಇಲ್ಲದ ಬಡವರಿಗೆ ನಿವೇಶನ ಖರೀದಿಸಲು ರೂ.5 ಲಕ್ಷ ಆರ್ಥಿಕ ನೆರವು ನೀಡಬೇಕು ಹಾಗೂ ವಿವಿಧ ವಸತಿ ಯೋಜನೆಗಳಿಗೆ ನೀಡುವ ಮನೆಗಳ ನಿರ್ಮಾಣ ವೆಚ್ಚ ಕನಿಷ್ಟ ರೂ. 5 ಲಕ್ಷ ವರೆಗೆ ಹೆಚ್ಚಿಸಬೇಕು. ನಿವೇಶನ ರಹಿತರಿಗೆ ನಿವೇಶನ ಒದಗಿಸಲು ವಸತಿಗೆ ಯೋಗ್ಯವಾದ ಸರ್ಕಾರಿ ಭೂಮಿ ಮಂಜೂರು ಮಾಡಬೇಕು. ಸರ್ಕಾರಿ ಭೂಮಿ ಲಭ್ಯವಿರದಿದ್ದರೆ ಖಾಸಗಿ ಭೂಮಿ ಖರೀದಿಸಿ ನಿವೇಶನ ಹಂಚಿಕೆ ಮಾಡಬೇಕು. ಬಗರ್ ಹುಕುಂ ಸಾಗುವಳಿದಾರರು ಸಕ್ರಮಕ್ಕಾಗಿ ಸಲ್ಲಿಸಿರುವ ನಮೂನೆ– 57ರ ಅರ್ಜಿಗಳನ್ನು ಸೂಕ್ತಡಿ ಕಾರಣವನ್ನು ನೀಡದೆ ಏಕಪಕ್ಷೀಯವಾಗಿ ತಿರಸ್ಕಾರ ಮಾಡುತ್ತಿರುವುದರಿಂದ ಬೇರೆ ಭೂಮಿ ಇಲ್ಲದೆ, ಇದೇ ಭೂಮಿಯಲ್ಲಿ ಸಾಗುವಳಿ ಮಾಡಿ ಉಪ ಜೀವನ ಸಾಗಿಸುತ್ತಿರುವ ಬಡವರನ್ನು ಭೂ ಹಕ್ಕಿನಿಂದ ಒಕ್ಕಲೆಬ್ಬಿಸದೆ, ಸಕ್ರಮಗೊಳಿಸಿ ಹಕ್ಕು ಪತ್ರ ನೀಡಬೇಕು. ಸೇರಿದಂತೆ ಪ್ರಮುಖ 17 ಬೇಡಿಕೆಗಳ ಈಡೇರಿ–ಕೆಗೆ ಒತ್ತಾಯಿಸಲಾಗಿದೆ ಮನವಿ ಪತ್ರ ಸಲ್ಲಿಸಿದ ಸಂದರ್ಭದಲ್ಲಿ ಡಿಎಸ್‌ಎಸ್ ಜಿಲ್ಲಾ ಸಮಿತಿಯ ಜಿಲ್ಲಾ ಸಂಚಾಲಕರು ಜಿ ಗೋವರ್ಧನ, ಜಿಲ್ಲಾ ಸಂಘಟನಾ ಸಂಚಾಲಕರು ಎ.ಕೆ ನಾಗರಾಜ್. ಜಿಲ್ಲಾ ಸಂ ಸಂಚಾಲಕರು ಫೋಟೋ ರಾಜ್, ಜಿಲ್ಲಾ ಸಂ ಸಂಚಾಲಕರು ಡಿ. ಎ ನಾಗರಾಜ್, ಜಿಲ್ಲಾ ಸಂ ಸಂಚಾಲಕರು ಕೆ ಮುರಳಿ ಮೋಹನ್, ಬಳ್ಳಾರಿ ನಗರ ಸಂಚಾಲಕರು ಹೆಚ್. ಹೊನ್ನೇಶ್, ಡಿ ಎಸ್ ಎಸ್ ಮುಖಂಡರಾದ ಗುರುದೇವ, ಸೋಮಪ್ಪ ಕೊಳಗಲ್, ಗಾದಿಲಿಂಗಪ್ಪ, ದೇವಪುತ್ರ, ಪ್ರಹ್ಲಾದ್ ಮತ್ತಿತರರಿದ್ದರು.

# ವಿಕಲಚೇತನರಿಗೆ ಉಚಿತ ಪ್ರವೇಶ

## ತಂದೆ ಇಲ್ಲದ ಮಕ್ಕಳಿಗೆ ಅರ್ಧ ಫೀಜ್



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ತಾಲೂಕಿನ ಸಿರಿವಾರ ಕ್ರಾಸ್ ಬಳಿ ಮಾತೃಭೂಮಿ ಎಜುಕೇಷನಲ್ ಅಂಡ್ ಚಾರಿಟಬಲ್ ಟ್ರಸ್ಟ ನಿಂದ ಪರ ಶ್ರೇಷ್ಠ ಇಂಟರ್ ನ್ಯಾಷನಲ್ ಶಾಲೆ, ವಿಕಲಚೇತನ ಮಕ್ಕಳಿಗೆ ಉಚಿತ, ತಂದೆ ಇಲ್ಲದ ಮಕ್ಕಳಿಗೆ ಶೇ 50 ರಷ್ಟು, ರೈತರ ಮಕ್ಕಳಿಗೆ ಶೇ 10 ರಷ್ಟು ಫೀಜ್ ರಿಯಾಯತಿಯಲ್ಲಿ ಮೌಲ್ಯವರ್ಧಿತ ಅಂದರೆ ಕೌಶಲ್ಯಾಧಾರಿತ ಶಿಕ್ಷಣ ನೀಡಲಿದೆ ಎಂದು ಶಾಲೆಯ ಆಡಳಿತ ಮಂಡಳಿಯ ಅಧ್ಯಕ್ಷ ಬ್ರಹ್ಮಯ್ಯ ನಾಯ್ಡು ಹೇಳಿದ್ದಾರೆ.

ಅವರು ಇಂದು ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ. ಖ್ಯಾತ ಕ್ರಿಕೆಟಿಗ ಅನಿಲ್ ಕುಂಬ್ಳೆ ಅವರ ಇಂಟಿಗ್ರೇಟೆಡ್ ಸ್ಪೋರ್ಟ್ಸ್ ಅಕಾಡೆಮಿ ಟೆನ್ ವಿಕ್ ಸಂಸ್ಥೆ ಮತ್ತು ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಅವರ ಅಕಾಡೆಮಿ ಫರ್ ಕ್ರಿಯೇಟಿವ್ ಟೀಚಿಂಗ್ ನೊಂದಿಗೆ ಒಡಂಬಡಿಕೆ ಮಾಡಿಕೊಂಡು ಸಿ ಬಿ ಎಸ್ ಇ ಪಠ್ಯದೊಂದಿಗೆ ಶಾಲೆ ಆರಂಭಿಸಿದೆ.

ಶಾಲೆಯು 9 ಎಕರೆ ಆವರಣದಲ್ಲಿ ಆರಂಭಗೊಂಡಿದ್ದು ಪಕ್ಕದ 12 ಎಕರೆಯನ್ನು ಸಹ ಭೋಗಕ್ಕೆ ಪಡೆದಿದೆ.

ಇಲ್ಲಿ ಶಿಕ್ಷಣದ ಜೊತೆಗೆ ವಿಶೇಷವಾಗಿ ಕ್ರೀಡೆಗೆ ಸಹ ಹೆಚ್ಚಿನ ಒತ್ತು ನೀಡುತ್ತಿದೆ. ಅನಿಲ್ ಕುಂಬ್ಳೆ ಅವರ ಸಂಸ್ಥೆಯಿಂದ ಕ್ರಿಕೆಟ್, ಈಜು, ಫುಟ್ ಬಾಲ್, ಬ್ಯಾಡ್ ಮಿಂಟನ್, ಕುದರೆ ಸವಾರಿ ಮೊದಲಾದ ಕ್ರೀಡೆಗಳನ್ನು ಕಲಿಸಲಿದೆ. ತಮಿಳುನಾಡಿನ ತಂಜಾವೂರಿನ ಸಂಸ್ಥೆಯಿಂದ ಪಾರಂಪರಿಕ ಅಸತ್ಮ ರಕ್ಷಣೆಯ ಕಲೆಗಳನ್ನು ಕಲಿಸಲಿದೆ. ಮುಖ್ಯವಾಗಿ ಮಕ್ಕಳಿಗೆ ಒತ್ತಡ ರಹಿತ ಶಿಕ್ಷಣ ನೀಡುವುದಾಗಿದೆ. ಶಾಲೆಯಲ್ಲಿನ ಮಕ್ಕಳಿಗೆ ನಮ್ಮ ಸಂಸ್ಥೆಯ 35 ಎಕರೆ ಪ್ರದೇಶದಲ್ಲಿ ಬೆಳೆಯುವ ಸಾವಯವ ತರಕಾರಿ, ಹಣ್ಣು, ಧಾನ್ಯಗಳಿಂದಲೇ ಊಟದ ವ್ಯವಸ್ಥೆ ಮಾಡಲಿದೆಂದು ತಿಳಿಸಿದರು. ಶಾಲೆಯ ಪ್ರವೇಶಕ್ಕೆ ಪೋಷಕರು ಶಿಕ್ಷಣ ಪಡೆದಿರಬೇಕು ಎಂಬ ಯಾವುದೇ ನಿಯಮ ಇಲ್ಲ ಎಂದರು.

ಈ ತಿಂಗಳ 14 ರಂದು ಶಾಲೆಯ ಪ್ರಾಥಮಿಕ ವಾರ್ಷಿಕೋತ್ಸವ ಸಂಜೆ 5 ಕ್ಕೆ ಶಾಲೆಯ ಆವರಣದಲ್ಲಿ ಹಮ್ಮಿಕೊಂಡಿದ್ದು. ಶಿಕ್ಷಣ ತಜ್ಞ ಡಾ.ಗುರುರಾಜ್ ಕರ್ಜಗಿ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆಂದು ಬ್ರಹ್ಮಯ್ಯ ನಾಯ್ಡು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸುನೀಲ್ ಕುಮಾರ್ ಮತ್ತು ವಿವೇಕ್ ಇದ್ದರು.

# ನಗರದಲ್ಲಿನ ‘ಸ್ಪಾ’ ಗಳು ಬಂದ್

• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರದಲ್ಲಿ ಅಷ್ಟೇ ಅಲ್ಲದೆ ಜಿಲ್ಲೆಯ ಹಲವಡೆ ನಡೆಯುತ್ತಿದ್ದ ಅಕ್ರಮ ಚಟುವಟಿಕೆಗಳ ಮೇಲೆ ತೀವ್ರ ನಿಗಾ ಇರಿಸಿ ದಿನ ನಿತ್ಯ ಇವುಗಳ ಮೇಲೆ ದಾಳಿ ನಡೆಸುತ್ತಿರುವ ಪೊಲೀಸ್ ಇಲಾಖೆ ಈಗ ಅನೈತಿಕ ಚಟುವಟಿಕೆಗಳಿಗೆ ಕಾರಣವಾಗಿದ್ದವು ಎನ್ನಲಾದ "ಸ್ಪಾ" ಗಳನ್ನು ಸಹ ಬಂದ್ ಮಾಡಿಸಲಾಗಿದೆ.

ಕಳೆದ ಜ.1 ರಂದು ನಡೆದ ಬ್ಯಾನರ್ ಗಲಾಟೆ, ಫೈರಿಂಗ್ ಪ್ರಕರಣದ ನಂತರ ಬಳ್ಳಾರಿಗೆ ವರ್ಗಾವಣೆಯಾಗಿ ಬಂದ ನೂತನ ಎಸ್ಪಿ ಸುಮನ್ ಡಿ ಪೆನ್ನೇಕರ್ ಮತ್ತು ಬಳ್ಳಾರಿ ವಲಯದ ಐಜಿಪಿ ಡಾ.ಹರ್ಷ ಅವರು ಬಂದ ಮೇಲೆ ಮಟಕಾ, ಇಸ್ಪೀಟ್ ಜೂಜಾಟ, ಗಾಂಜಾ ಮಾರಾಟ, ಅಕ್ರಮವಾಗಿ ಮರಳು, ಪಡಿತರ ಅಕ್ಕಿ ಸಾಗಾಟ ನಡೆಯದಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡು ಕಳೆದ ಒಂದು ತಿಂಗಳಲ್ಲಿ 130 ಕ್ಕೂ ಹೆಚ್ಚು ಪ್ರಕರಣ ದಾಖಲಿಸಲಾಗಿದೆ.

ಇವರು ಕಟ್ ನಿಟ್, ಸ್ಟ್ರಿಕ್ಟ್ ಎಂಬ ಮಾತುಗಳು ಮತ್ತು ದಿನ ನಿತ್ಯದ ದಾಳಿಗಳಿಂದಾಗಿ ಅಕ್ರಮ ಚಟುವಟಿಕೆಗಳನ್ನು ನಡೆಸುವವರು ಥರಗುಟ್ಟಿದ್ದಾರೆ. ವಾಸ್ತವದಲ್ಲಿ ಮಸಾಜ್ ಪಾರ್ಲರ್ ಗಳಾಗಿದ್ದ "ಸ್ಪಾ" ಪುರುಷರನ್ನು ಅಕ್ರಮ ಲೈಂಗಿಕ ಕ್ರಿಯೆಗೆ ಪ್ರಚೋದಿಸುವ ತಾಣಗಳಾಗಿದ್ದವು ಎಂಬ ಆರೋಪ ಇತ್ತು. ಅದಕ್ಕಾಗಿ ಇಂತಹವುಗಳ ಬಗ್ಗೆ ಮಾಹಿತಿ ಪಡೆದ ಎಸ್ಪಿಯವರು ನಗರದ 20 ಕ್ಕೂ ಹೆಚ್ಚು ಸ್ಪಾ ಗಳನ್ನು ಬಂದ್ ಮಾಡಿಸಿದ್ದಾರೆ.

ಬಂದ್ ಮಾಡಿಸಿದ್ದರೂ ಯಾವೊಬ್ಬ ಸ್ಪಾ ಮಾಲೀಕರು ಎಸ್ಪಿಯವರ ಕ್ರಮದ ವಿರುದ್ದ ಮಾತನಾಡಿಲ್ಲ ಎಂದರೆ ಅವರು ಕಾನೂನು ರೀತಿಯಲ್ಲಿ ಈ ವರೆಗೆ ಇರಲಿಲ್ಲ ಎಂಬುದು ಸಾಬೀತಾಗುತ್ತದೆ. ಒಟ್ಟಿನಲ್ಲಿ ಎಸ್ಪಿ ಸುಮನ್ ಅವರ ದಿಟ್ಟ ಕ್ರಮಗಳು ನಗರದ ಉತ್ತಮ ನಾಗರೀಕರ ಮೆಚ್ಚುಗೆಗೆ ಕಾರಣವಾಗಿದೆ ಎನ್ನಬಹುದು.

# ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸವೇ ಸಂಸ್ಥೆಯ ಗುರಿ




• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಉತ್ತಮ ಕಲಿಕಾ ವಾತಾವರಣವನ್ನು ನಿರ್ಮಾಣ ಮಾಡುವುದರ ಜೊತೆಗೆ ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಾಸವನ್ನೂ ಸಾಧಿಸುವುದು ವಿಪ್ರ ಸಂಸ್ಥೆಯ ಉದ್ದೇಶವಾಗಿದೆ ಎಂದು ಸಂಸ್ಥೆಯ ಗೌರವ ಕಾರ್ಯದರ್ಶಿ ಡಾ.ಗಿರೀಶ ಮಸೂರಕರ ಹೇಳಿದರು.

ವಿದ್ಯಾ ಪ್ರಸಾರಕ ಮಂಡಳದ ಎಸ್.ಆರ್.ನರಸಾಪೂರ ಕಲಾ ಹಾಗೂ ಎಂ.ಬಿ.ಶಿರೂರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಮಂಗಳವಾರ ಜರುಗಿದ ಪಾಲಕರ ಸಭೆಯಲ್ಲಿ ಅವರು ಮಾತನಾಡಿ, ಓದಿನ ಜೊತೆಗೆ ವಿದ್ಯಾರ್ಥಿಗಳು ನಾಯಕತ್ವ ಗುಣಗಳನ್ನು ಹಾಗೂ ಸಕಾರಾತ್ಮಕ ಭಾವನೆಯನ್ನು ಬೆಳೆಸಿಕೊಳ್ಳುವಂತಹ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ. ಇವುಗಳ ಸದುಪಯೋಗಕ್ಕೆ ಪಾಲಕರು ತಮ್ಮ ಮಕ್ಕಳಿಗೆ ಉತ್ತೇಜನ ನೀಡಬೇಕು. ಪಡೆದ ಜ್ಞಾನವನ್ನು ಬದುಕಿನಲ್ಲಿ ಅನ್ವಯ ಮಾಡಿಕೊಳ್ಳುವಂತೆಯೂ ತಮ್ಮ ಮಕ್ಕಳಿಗೆ ತಿಳಿಸಿ ಹೇಳಬೇಕು ಎಂದರು.

ಕಾಲೇಜು ಉಪವಿಭಾಗದ ಅಧ್ಯಕ್ಷ ಡಾ.ಪಿ.ಆರ್.ಜೋಶಿ ಮಾತನಾಡಿ, ಸಂಸ್ಥೆಯ ಬೆಳವಣಿಗೆಯಲ್ಲಿ ಶಿಕ್ಷಕರ ಜೊತೆಗೆ ಪಾಲಕರೂ ಮಹತ್ವದ ಪಾತ್ರವನ್ನು ವಹಿಸುತ್ತಾರೆ. ತಮ್ಮ ಮಕ್ಕಳಿಗೆ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಅವರ ಕಲಿಕೆ ಮತ್ತು ಇತರೇ ಚಟುವಟಿಕೆಗಳ ಬಗ್ಗೆ ವಿಚಾರಿಸುತ್ತಿರಬೇಕು. ವಿದ್ಯಾರ್ಥಿಗಳ ವಿಕಾಸಕ್ಕೆ ಪೂರಕ ವಾತಾವರಣವಿದ್ದು ಅದರ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆಯಬೇಕು ಎಂದರು.

ಪ್ರಾಚಾರ್ಯ ಶ್ರೀನಿವಾಸ ನರಗುಂದ ಮಾತನಾಡಿ, ಸಂಸ್ಥೆಯ ನಿಜವಾದ ಆಸ್ತಿಯಾಗಿರುವ ವಿದ್ಯಾರ್ಥಿಗಳ ಹಿತವನ್ನು ಕಾಪಾಡಿ ಅವರ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಲಾಗುತ್ತಿದೆ. ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯಪೂರಕ ಚಟುವಟಿಕೆಗಳಲ್ಲೂ ಪಾಲ್ಗೊಳ್ಳಲು ಪ್ರೇರೇಪಿಸಲಾಗುತ್ತಿದೆ. ವಿದ್ಯಾರ್ಥಿಗಳ ಬೌದ್ಧಿಕ ಬೆಳವಣಿಗೆಯಲ್ಲಿ ಶಿಕ್ಷಕರು ಹಾಗೂ ರಕ್ಷಕರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಪಾಲಕರು ತಮ್ಮ ಮಕ್ಕಳ ಶೈಕ್ಷಣಿಕ ಪ್ರಗತಿಯ ಅವಲೋಕನ ಮಾಡಬೇಕು. ಸಕಾಲಕ್ಕೆ ಪಾಲಕರಿಂದ ಬರುವ ಉತ್ತಮ ಸಲಹೆಗಳು ಕಾಲೇಜಿನ ಅಭಿವೃದ್ಧಿಗೆ ಸಹಕಾರಿಯಾಗುತ್ತವೆ ಎಂದರು.

ಪಾಲಕರ ಪರವಾಗಿ ಜ್ಯೋತಿ ಬಾಸುತಕರ, ದಾವಲಸಾಬ ಮೋಮಿನ್ ಮತ್ತು ರಾಜೇಶ್ವರಿ ಮಸೂತಿ ಮಾತನಾಡಿದರು. ಉಪನ್ಯಾಸಕಿ ಕೀರ್ತಿ ದಾಸರ ಪ್ರಾರ್ಥಿಸಿದರು. ಉಪನ್ಯಾಸಕ ಎಸ್.ಎಂ.ಜೇವೂರ ನಿರೂಪಿಸಿದರು. ಡಾ.ಎಸ್.ಎಸ್. ಹಂಗರಗಿ ವಂದಿಸಿದರು. ಸಂಯೋಜಕ ಎಸ್.ವಾಯ್.ಬೊಮ್ಮಣ್ಣವರ, ಶಿಕ್ಷಕ–ಶಿಕ್ಷಕೇತರ ಸಿಬ್ಬಂದಿ ಇದ್ದರು.

# ಕಲಾದಗಿ ಠಾಣೆಗೆ ಐಜಿಪಿ ಭೇಟಿ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಬೆಳಗಾವಿ ಉತ್ತರ ವಲಯದ ಪೊಲೀಸ್ ಮಹಾ ನಿರ್ದೇಶಕ ಐಜಿಪಿ ಡಾ. ಚೇತನ್ ಸಿಂಗ್ ರಾಥೋಡ್ ತಾಲ್ಲೂಕಿನ ಕಲಾದಗಿ ಪೋಲಿಸ್ ಠಾಣೆಗೆ ಬುಧವಾರ ಭೇಟಿ ನೀಡಿದರು.

ಬಳಿಕ ಕಾನೂನು ಸುವ್ಯವಸ್ಥೆ, ಅಪರಾಧ ತಡೆ ಕ್ರಮಗಳು, ಬಾಕಿ ಪ್ರಕರಣಗಳು ಮತ್ತು ಠಾಣೆಯ ದಾಖಲಾತಿಗಳನ್ನು ಪರಿಶೀಲಿಸಿದರು. ಸಿಬ್ಬಂದಿ ಸಾರ್ವಜನಿಕರೊಂದಿಗೆ ಸೌಜನ್ಯದಿಂದ ವರ್ತಿಸಲು ಸಲಹೆ ನೀಡಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ್ ಗೋಯಲ್, ಡಿವೈಎಸ್ಪಿ ಗಜಾನನ ಸುತಾರ, ಸಿಪಿಐ ಆರ್. ಎಸ್. ಬಿರಾದಾರ, ಠಾಣೆಯ ಪಿಎಸ್ಐಗಳಾದ ಪ್ರವೀಣ ಬೀಳಗಿ, ನೂರಜಾನ ಸಾಬರ, ಎಎಸ್ಐಗಳಾದ ಎಸ್. ಜಿ. ಹೆಳವರ, ಎ.ಎ.ಬೈಗನಪಲ್ಲೆ, ಡಿ.ಎಸ್. ಕುಂಬಾರ ಹಾಗೂ ಸಿಬ್ಬಂದಿ ವರ್ಗ ಇದ್ದರು.



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಜಂಟಿ ಮುಖ್ಯ ಚುನಾವಣಾ ಅಧಿಕಾರಿ ಜ್ಞಾನೇಶ ಎಚ್ ಅವರು ನವನಗರ, ವಿದ್ಯಾಗಿರಿ, ಮುಚಖಂಡಿ, ನೀಲಾನಗರದಲ್ಲಿರುವ ವಿವಿಧ ಮತಗಟ್ಟೆಗಳಿಗೆ ಬುಧವಾರ ಭೇಟಿ ನೀಡಿ ಮತಗಟ್ಟೆ ಕೊಠಡಿಗಳನ್ನು ಪರಿಶೀಲಿಸಿದರು. ಮತಗಟ್ಟೆ ಅಧಿಕಾರಿಗಳಿಂದ ಮತದಾರರ ಬಗ್ಗೆ ಸಾಮಾನ್ಯ ಮಾಹಿತಿ, ಮ್ಯಾಪಿಂಗ್ ಬಗ್ಗೆ ಮಾಹಿತಿ ಪಡೆದುಕೊಂಡರು. ಈ ಸಂದರ್ಭದಲ್ಲಿ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ ಸ್ವಾಮಿ, ಗ್ರೇಡ್–2 ತಹಶೀಲ್ದಾರ, ಕಂದಾಯ ನಿರೀಕ್ಷಕ ಗ್ರಾಮ ಆಡಳಿತ ಅಧಿಕಾರಿ ಸೇರಿದಂತೆ ಇತರರು ಇದ್ದರು.

# ಭಾಷಾ ಶಿಕ್ಷಕರಿಂದ ಭಾವೈಕ್ಯತೆ ಬೆಳೆಯುತ್ತದೆ: ಲಕ್ಷ್ಮಣ ಯಂಕಂಚಿ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಶಿಕ್ಷಣ ಕ್ಷೇತ್ರದ ಸೇವೆ ಸಮಾಜದಲ್ಲಿ ಇಂದಿಗೂ ಪವಿತ್ರವಾಗಿದ್ದು, ಶಿಕ್ಷಕರು ಸಮಾಜ ಮತ್ತು ಶಿಕ್ಷಣದ ಬಾಂಧವ್ಯದ ಬೆಸುಗೆಯಾಗಿ ಕಾರ್ಯ ನಿರ್ವಹಿಸಬೇಕು. ಭಾಷೆಭಾವೈಕ್ಯತೆಯನ್ನು ಬೆಳೆಸುತ್ತದೆ ಎಂಬುದಕ್ಕೆ ಕನ್ನಡ ಭಾಷೆಯ ಸಹ ಶಿಕ್ಷಕಿಯವರಾದ ಕಮಲಾ ಕುಲಕರ್ಣಿಯವರು ಮಾದರಿಯಾಗಿದ್ದಾರೆ ಎಂದು ಜಿಲ್ಲಾ ಎಸ್.ಸಿ, ಎಸ್.ಟಿ ನೌಕರರ ಸಂಘದ ಜಿಲ್ಲಾಧ್ಯಕ್ಷರಾದ ಲಕ್ಷ್ಮಣ ಯಂಕಂಚಿ ಅವರು ಹೇಳಿದರು.

ಅವರಿಗೆ ಇತ್ತಿಚಿಗೆ ಬಾಗಲಕೋಟೆ ನವನಗರದ ಸೆಕ್ಟರ್ ನಂಬರ್ 13 ರ ಸರ್ಕಾರಿ ಉರ್ದು ಮಾದರಿ ಪ್ರಾಥಮಿಕ ಶಾಲೆ ನಂ–01 ರಲ್ಲಿ ಮಂಗಳವಾರ ನಡೆದ ಕನ್ನಡ ಭಾಷಾ ಸಹ ಶಿಕ್ಷಕಿಯವರಾದ ಶ್ರೀಮತಿ ಕಮಲಾ ಗು.ಕುಲಕರ್ಣಿ ಅವರ ಸೇವಾ ನಿವೃತ್ತರಾಗುವ ಪ್ರಯುಕ್ತ ಆಯೋಜಿಸಿದ್ದ ಅಭಿನಂದನಾ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಮುಂದುವರಿದು ಮಾತನಾಡಿದ ಅವರು ಮೂರು ದಶಕಗಳ ಕಾಲ ಹೆಚ್ಚು ಸುದೀರ್ಘವಾಗಿ ಶಿಕ್ಷಣ ಇಲಾಖೆಯಲ್ಲಿ ಸೇವೆ ಸಲ್ಲಿಸುವ ಮೂಲಕ ಉರ್ದು ಶಾಲೆಯಲ್ಲಿ ಭಾವೈಕ್ಯತೆಯ ಬಾಂಧವ್ಯದ ಪರಿಸರವನ್ನು ಕಟ್ಟಿದ್ದಾರೆ. ಇವರ ಪ್ರಾಮಾಣಿಕ ಸೇವೆ ಪರಿಗಣಿಸಿ ಜಿಲ್ಲಾ ಮಟ್ಟದ ಪ್ರಶಸ್ತಿ ಸಿಗಬೇಕಾಗಿತ್ತು, ಆದರೆ ಇವರು ಯಾವತ್ತೂ ಯಾವ ಪ್ರಶಸ್ತಿಗಳ ಗೋಜಿಗೆ ಹೋಗದೆ ತಮ್ಮ ಶಿಕ್ಷಕ ವೃತ್ತಿಯ ನಿಷ್ಠೆಯಿಂದ ಸೇವೆ ಸಲ್ಲಿಸಿ, ಸಮಾಜ ಮತ್ತು ಮಕ್ಕಳ ಪ್ರೀತಿಗೆ ಪಾತ್ರರಾಗಿದ್ದರೆ ಎಂದರು.

ಮುಸ್ಲಿಂ ನೌಕರರ ಸಂಘದ ಮಾಜಿ ಜಿಲ್ಲಾಧ್ಯಕ್ಷರಾದ ಎಂ.ಎ.ಸೌದಾಗಾರ ಅವರು ಮಾತನಾಡಿ ಕಮಲಾ ಕುಲಕರ್ಣಿ ಮೇಡಂ ಅವರ ಶಿಕ್ಷಕ ವೃತ್ತಿಯ ಪ್ರಾಮಾಣಿಕ ಸೇವೆಯಾಗಿದ್ದು, ಮಕ್ಕಳ ಮೆಚ್ಚಿದ ಗುರುಮಾತೆಯಾಗಿ ನಮ್ಮ ಉರ್ದು ಶಾಲೆಯ ಕೀರ್ತಿಯನ್ನು ತಂದಿದ್ದಾರೆ ಎಂದರು.

ಅತಿಥಿಗಳಾಗಿ ಸಾವಿತ್ರಿಬಾಯಿ ಫುಲೆ ಶಿಕ್ಷಕಿಯರ ಸಂಘದ ರಾಜ್ಯ ಘಟಕ ಉಪಾಧ್ಯಕ್ಷರಾದ ಕೊಡ್ಡಣ್ಣವರ ಅವರು ಮಾತನಾಡಿ, ನಮ್ಮ ಶಿಕ್ಷಕ ವೃತ್ತಿಯು ಘನತೆ ಮತ್ತು ಗೌರವ ಹೆಚ್ಚಿಸುವ ವೃತ್ತಿಯಾಗಿದ್ದು, ಕಮಲಾ ಕುಲಕರ್ಣಿ ಗುರುಮಾತೆಯು ತಮ್ಮ ವೃತ್ತಿಯೊಂದಿಗೆ ಸಮಾಜದ ಕೀರ್ತಿ ಬೆಳೆಗಿಸಿದ್ದಾರೆ ಎಂದು ಹೇಳಿದರು.

ಬಾಗಲಕೋಟೆ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತ ಅಧ್ಯಕ್ಷರಾದ ಪಾಂಡುರಂಗ ಸಣ್ಣಪ್ಪನವರ ಅಭಿನಂದನೆ ಸಲ್ಲಿಸಿ ಮಾತನಾಡಿ, ಗುರು ಎಂದರೆ ಅಜ್ಞಾನದಿಂದ ಜ್ಞಾನದತ್ತ ಮಾರ್ಗ ತೊರುವ ಚೈತನ್ಯ ನೀಡುವ ಶಕ್ತಿಯಾಗಿದೆ. ಹಿರಿಯ ಗುರುಮಾತೆಯಾದ ಕಮಲ ಕುಲಕರ್ಣಿ ಅವರು ಮಕ್ಕಳ ಮಮತೆಯ ಮಾತೆಯಾಗಿ ಅವರ ಬದುಕು ಬೆಳೆಗಿಸಿ ತಾಯಿಯಾಗಿದ್ದಾರೆ ಎಂದು ಹೇಳಿದರು.

ಸಮಾರಂಭದಲ್ಲಿ ಹಿರಿಯ ಶಿಕ್ಷಕಿಂ–ಯರಾದ ಕಮಲಾ ಗು.ಕುಲಕರ್ಣಿ ಅವರು ಗೌರವ ಅಭಿನಂದನೆ ಸ್ವೀಕರಿಸಿ ಮಾತನಾಡಿ, ನಾನು ಶಿಕ್ಷಣ ಕ್ಷೇತ್ರದಲ್ಲಿ ಸುದೀರ್ಘ ಸೇವೆ ಸಲ್ಲಿಸಲು ನನಗೆ ನನ್ನ ಕುಟುಂಬ ವರ್ಗದ ಪ್ರೀತಿ, ಮಾರ್ಗದರ್ಶನ, ನನ್ನ ಶಾಲೆಯ ಎಲ್ಲಾ ಶಿಕ್ಷಕ ಬಳಗದವರ ಸಹಕಾರ, ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಸದಸ್ಯರು, ಎಲ್ಲಾ ಸಮಾಜ ಬಾಂಧವರು, ಬಿಸಿ ಊಟದ ಸಿಬ್ಬಂದಿಯವರ ಹಾಗೂ ಶಾಲೆಯ ಮಕ್ಕಳ ತೊರಿಸಿರುವ ಮಮತೆ ಗೌರವದಿಂದ ನನ್ನ ಸೇವೆ ನನಗೆ ಸಂತೃಪ್ತಿಯನ್ನು ತಂದಿದೆ ಎಂದು ಹೇಳಿದರು.

ಉರ್ದು ಶಿಕ್ಷಕರ ಸಂಘದ ತಾಲೂಕಾಧ್ಯಕ್ಷರಾದ ಐ.ಡಿ.ಅತ್ತಾರ, ಕ.ರಾ.ಪ್ರಾ.ಶಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷರಾದವಾಯ್.ಡಿ.ಕಿರಸೂರ, ಶಿಕ್ಷಣ ಸಂಯೋಜಕರಾದ ವಾಯ್.ಎ.ಸಾಲಿ, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಮಹ್ಮದ್ ರಫೀಕ್ ಟಕ್ಕಳಿಕಿ, ಉರ್ದು ಶಾಲೆಯ ಮುಖ್ಯ ಗುರುಗಳಾದ ನಜೀರ ಅಹ್ಮದ್ ಕಲಾದಗಿ, ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಹಾಗೂ ಶಾಲೆಯ ಎಸ್.ಡಿ.ಎಂ.ಸಿ ಸರ್ವ ಸದಸ್ಯರು, ಬಿಸಿ ಊಟದ ಸಿಬ್ಬಂದಿ ವರ್ಗದವರು, ಸಮಸ್ತ ಶಿಕ್ಷಕ ಬಳಗದವರು, ಕುಲಕರ್ಣಿ ಕುಟುಂಬ ಪರಿವಾರದವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

# ವಿವಿದೆಡೆ ವಿದ್ಯುತ್ ವ್ಯತ್ಯಯ

• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ಫೆಬ್ರವರಿ 11 (ಕರ್ನಾಟಕ ವಾರ್ತೆ) : ಗುಳೇದಗುಡ್ಡದ 110 ಕೆವಿ ಉಪ ಕೇಂದ್ರದಿಂದ 110 ಕೆವಿ ಇಳಕಲ್ಲ ಉಪಕೇಂದ್ರದವರೆಗೆ ನಿರ್ಮಿಸಲಾಗುತ್ತಿರುವ 110 ಕೆವಿ ವಿದ್ಯುತ್ ಲಿಂಕ್ ಲೈನ್ ಕಾಮಗಾರಿ ಪ್ರಗತಿಯಲ್ಲಿದ್ದು, ಕಾಮಗಾರಿ ಅಂಗವಾಗಿ ವಿದ್ಯುತ್ ವಾಹಕಗಳನ್ನು ಎಳೆಯುವ ಕೆಲಸ ನಿಮಿತ್ಯ ಫೆಬ್ರವರಿ 12 ರಂದು ಮುಂಜಾನೆ 5.45 ರಿಂದ ಬೆಳಿಗ್ಗೆ 8 ಗಂಟೆವರೆಗೆ 33 ಕೆವಿ ಗುಡೂರ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಭೀಮನಗಡ, ಚಿಕ್ಕನಾಳ, ಮುರುಡಿ, ಗುಡೂರ, ವಡಗೇರಿ, ಧಮ್ಮೂರ ಮಾರ್ಗಗಲ್ಲಿ ವಿದ್ಯುತ್ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಬಾಗಲಕೋಟೆ ಹೆಸ್ಕಾಂ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ಕೋರಿದ್ದಾರೆ.

# ಆರೋಗ್ಯ ಕಡೆ ದೇವದಾಸಿಯರ ಗಮನ ಹರಿಸಲು ಕರೆ




• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ದೇವದಾಸಿ ಮಹಿಳೆಯರು ಹತ್ತು ಹಲವು ರೋಗಗಳು ತಗಲುವ ಸಾಧ್ಯತೆಗಳಿವೆ, ದೇವದಾಸಿಯರು ತಮ್ಮ ಆರೋಗ್ಯ ಕಡೆ ಗಮನ ಹರಿಸಬೇಕು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ.ಮಹೇಶ ಬಿರದಾರ ಸಲಹೆ ನೀಡಿದರು.

ಯಾದಗಿರಿ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಭಾಂಗಣದಲ್ಲಿ ಫೆ.11 ರಂದು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ದೇವದಾಸಿ ಪುನರ್ವಸತಿ ಯೋಜನೆ, ಯಾದಗಿರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯಾದಗಿರಿ ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಮಾಜಿ ದೇವದಾಸಿ ಮಹಿಳೆಯರಿಗಾಗಿ ಜಿಲ್ಲಾ ಮಟ್ಟದ ಆರೋಗ್ಯ ತಪಾಸಣೆ ಹಾಗೂ ಅರಿವು ಶಿಬಿರ ಉದ್ಘಾಟಿಸಿ ಮಾತನಾಡಿದರು.

ಮಾಜಿ ದೇವದಾಸಿ ಮಹಿಳೆಯರು ಮೇಲಿಂದ ಮೇಲೆ ಆರೋಗ್ಯ ತಪಾಸಣೆ ಮಾಡಿಕೊಂಡು ಮಾಹಿತಿಯ ಜೊತೆಗೆ ಸೂಕ್ತ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು, ಸರ್ಕಾರದಿಂದ ಸಿಗುವ ಸೇವಾ ಸೌಲಭ್ಯಗಳನ್ನು ಪಡೆದುಕೊಳ್ಳಬೇಕು, ಪೌಷ್ಟಿಕ ಆಹಾರವನ್ನು ಸೇವಿಸಬೇಕು. ರಕ್ತ ಹೀನತೆ ಆಗದಂತೆ ನೊಡಿಕೊಳ್ಳಬೇಕು, ಉತ್ತಮ ಆರೋಗ್ಯದ ಕಡೆ ಗಮನ ಹರಿಸಬೇಕು, ದೇವದಾಸಿ ಪದ್ಧತಿ ಸಮಾಜಕ್ಕೆ ಅಂಟಿದ ಕಳಂಕ. ಇದು ಸಾಮಾಜಿಕ ಪಿಡುಗಾಗಿದ್ದು, ಇದರಿಂದ ಹತ್ತು ಹಲವು ರೋಗಗಳು ತಗಲುವ ಸಾಧ್ಯತೆಗಳಿವೆ, ದೇವದಾಸಿಯರು ತಮ್ಮ ಆರೋಗ್ಯ ಕಡೆ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ದೇವದಾಸಿ ಪುನರ್ವಸತಿ ಯೋಜನೆ, (ಪ್ರ) ಯೋಜನಾ ಅಧಿಕಾರಿಗಳಾದ ಶ್ರೀಮತಿ ಶಿವಮಂಗಳ ಅವರು ಮಾತನಾಡಿ, ದೇವದಾಸಿ ಪದ್ಧತಿಯ ಅನಿಷ್ಟ ಪದ್ಧತಿಯಿಂದ ಹೊರಬರಲು ಮತ್ತು ಮಾಜಿ ದೇವದಾಸಿ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಆರೋಗ್ಯ ಶಿಬಿರಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ಈ ಪದ್ಧತಿಯನ್ನು ತೊಡೆದುಹಾಕಲು ಜಿಲ್ಲೆಗಳಲ್ಲಿ ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಹೇಳಿದರು.

# 13ಕ್ಕೆ ಬಂದ್ ಪೂರ್ವಭಾವಿ ಸಭೆ: ಅಲ್ಲಮಪ್ರಭು ಬೆಟ್ಟದೂರು




• **ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ:**

ನಗರಸಭೆ ಆವರಣದಲ್ಲಿ ಜಿಲ್ಲಾ ಬಚಾವೋ ಆಂದೋಲನ ಸಮಿತಿ ಹಾಗೂ ಪರಿಸರ ಹಿತರಕ್ಷಣಾ ವೇದಿಕೆ ಇದರ ಜಂಟಿ ಕ್ರಿಯಾ ವೇದಿಕೆ ಮೂಲಕ ನಡೆಸಿರುವ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ 103ನೇ ದಿನ ಪೂರೈಸಿತು.

ಈ ಸಂದರ್ಭದಲ್ಲಿ ಪ್ರಧಾನ ಸಂಚಾಲಕರಾದ ಅಲ್ಲಮಪ್ರಭು ಬೆಟ್ಟದೂರು ಅವರು ಮಾತನಾಡಿ ಫೆ.24 ರಂದು ಕೊಪ್ಪಳ ಜಿಲ್ಲಾ ಕೇಂದ್ರ, ಭಾಗ್ಯನಗರ ಸಂಪೂರ್ಣ ಬಂದ್ ಮಾಡಲು ಪೂರ್ವಭಾವಿ ಸಭೆ ಕರೆಯಲು ನಿರ್ಣಯ ಮಾಡಲಾಗಿದೆ. ಇದರ ಯಶಸ್ವಿಗಾಗಿ ಶುಕ್ರವಾರ 13.02.2026ರಂದು ಬೆಳಗ್ಗೆ 11 ಗಂಟೆಗೆ ಪೂರ್ವಭಾವಿ ಸಭೆಯನ್ನು ನಗರದ ಲಕ್ಷ್ಮೀ ಚಿತ್ರಮಂದಿರ ಪಕ್ಕದ ಮಹಾಂತಯ್ಯನಮಠ ಕಲ್ಯಾಣ ಮಂಟಪದಲ್ಲಿ ಸಭೆಯನ್ನು ಕರೆಯಲಾಗಿದೆ. ಇದುವರೆಗೆ ಹೋರಾಟ ಬೆಂಬಲಿಸಿದ ಎಲ್ಲಾ ಸಂಘ, ಸಂಸ್ಥೆ, ಸಮಾಜ ಮುಖಂಡರು, ಸಮುದಾಯ ನಾಯಕರು, ರಾಜಕೀಯ ಧುರೀಣರು, ಧಾರ್ಮಿಕ ಸಂಸ್ಥೆಗಳ ಮುಖ್ಯಸ್ಥರು, ಟ್ರಸ್ಟ್ ಚಾರಿಟಿಗಳು, ವಕೀಲರು, ಪರಿಸರ ಪ್ರೇಮಿಗಳು, ಸಾಹಿತಿ, ಚಿಂತಕರು, ಕನ್ನಡಪರ, ರೈತ, ಕಾರ್ಮಿಕ, ಮಹಿಳಾ, ವಿದ್ಯಾರ್ಥಿಗಳು ಹಾಗೂ ಪುರ ಪ್ರಮುಖರು ಈ ಸಭೆಗೆ ಆಗಮಿಸಬೇಕೆಂದು ಮನವಿ ಮಾಡಿಕೊಂಡರು.

103ನೇ ದಿನದ ಧರಣಿ ಬೆಂಬಲಿಸಿ ಕರ್ನಾಟಕ ಮಾದಿಗ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷರಾದ ಕರಿಯಪ್ಪ ಗುಡಿಮನಿ ಮಾತನಾಡಿ 'ಹೋರಾಟ ಶತದಿನ ಪೂರೈಸಿದರು ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳದೆ ಇಲ್ಲಿನ ಜನರ ಜೀವದೊಂದಿಗೆ ಚೆಲ್ಲಾಟವಾಡುತ್ತಿರುವುದು ಖಂಡನೀಯ. ಜನರ ಜೀವ ಮತ್ತು ಆರೋಗ್ಯಕ್ಕಿಂತ ಯಾವ ಅಭಿವೃದ್ಧಿಯೂ ದೊಡ್ಡದಲ್ಲ. ಇದನ್ನು ಜನ ಸಾಮಾನ್ಯರು ತಿಳಿಸಿ ಹೇಳಬೇಕೇ? ಭಾದಿತ ಹಳ್ಳಿಗಳ ಸ್ಥಿತಿ ಚಿಂತಾಜನಕವಾಗಿದೆ. ಸರ್ಕಾರ ಇದನ್ನು ಗಮನಿಸಬೇಕು. ರಾಜ್ಯದ ಮೂಲೆ ಮೂಲೆಯಿಂದ ಪ್ರಜ್ಞಾವಂತರು, ಖ್ಯಾತ ವ್ಯಕ್ತಿಗಳು ಹಳ್ಳಿ ಭೇಟಿ ಮಾಡಿ, ಆ ಜನರನ್ನು ಕಂಡು ಬಂದು ಕಣ್ಣೀರಾಗಿ ಬೆಂಬಲಿಸುತ್ತಿದ್ದಾರೆ. ಇದು ಸರ್ಕಾರಕ್ಕೆ ಒಳ್ಳೆಯ ಬೆಳವಣಿಗೆಯಲ್ಲ. ಕೂಡಲೇ ಇಲ್ಲಿನ ಲಕ್ಷಗಟ್ಟಲೆ ಜನರ ಆರೋಗ್ಯ ಜೀವದ ದೃಷ್ಟಿಯಿಂದ ಬಲ್ಡೋಟ ವಿಸ್ತರಣೆ ತಡೆದು ಆದೇಶ ಮಾಡಬೇಕು' ಎಂದರು.

ಧರಣಿಯಲ್ಲಿ ಹಿರಿಯ ಸಾಹಿತಿ ಎಚ್.ಎಸ್.ಪಾಟೀಲ್, ಕೃಷಿ ಬೆಲೆ ಆಯೋಗ ಸದಸ್ಯ ಡಿ.ಎಚ್.ಪೂಜಾರ, ಸಂಚಾಲಕರಾದ ಮಲ್ಲಿಕಾರ್ಜುನ ಬಿ. ಗೋನಾಳ, ಮಂಜುನಾಥ ಜಿ. ಗೊಂಡಬಾಳ, ಪ್ರಕಾಶ ಕಡಿ.ಎಂ.ಬಡಿಗೇರ, ಶಂಭುಲಿಂಗಪ್ಪ ಹರಗೇರಿ, ಶರಣು ಗಡ್ಡಿ, ಕಾಶಪ್ಪ ಚಲವಾದಿ, ಮಂಜುನಾಥ ಕವಲೂರು, ಶಿವಪ್ಪ ಜಲ್ಲಿ, ಎಸ್ ಮಹಾದೇವಪ್ಪ ಮಾವಿನಮಡು, ಗಂಗಾಧರ ಖಾನಾಪೂರ, ಗವಿಸಿದ್ದಪ್ಪ ಪೋಲಿಸ್ ಪಾಟೀಲ್, ಸುಭಾನ್ ಸಾಬ್ ನೀರಲಗಿ, ರಂಗಕರ್ಮಿ ಶರಣು ಶೆಟ್ಟರ್, ಬಿ.ಜಿ. ಕರಿಗಾರ, ವೀರನಗೌಡ ತಾವರಗೇರಾ, ಗಾಳೆಪ್ಪ ಪೂಜಾರ್, ರತ್ನಮ್ಮ ದೊಡ್ಡಮನಿ, ಬಸವರಾಜಪ್ಪ ಶೆಟ್ಟರ್, ಚೆನ್ನವೀರಯ್ಯ ಹಿರೇಮಠ, ಬೀಬಿಜಾನ್, ವೈ. ಸತ್ಯನಾರಾಯಣ, ಶಿವಸಂಗಪ್ಪ ವಣಗೇರಿ, ಬಸವರಾಜ ನರೇಗಲ್, ರಾಮಪ್ರಸಾದ್ ಮಂಜುನಾಥ, ಗುರಪ್ಪ ಮುಂತಾದವರು ಪಾಲ್ಗೊಂಡರು.

# ಗುರು ಕೊಟ್ಟೂರೇಶ್ವರ ಸ್ವಾಮಿಯ ಭಕ್ತಿ ಸೇವೆಗೆ ಹಲವು ರೂಪಗಳು

• **ಮಲ್ಲಮ್ಮ ನುಡಿ ವಾರ್ತೆ ಕೊಟ್ಟೂರು:**



ದೇವರು ಎಂದರೆ ಹಿಂದೂ ಧರ್ಮದಲ್ಲಿ ಜನರಿಗೆ ಅಪಾರ ನಂಬಿಕೆ, ದೈವಭಕ್ತಿ, ಜೀವನದ ಶಕ್ತಿ, ನಮ್ಮ ಮನಸ್ಸು ವಿಚಲಿತಗೊಂಡಾಗ, ಕಷ್ಟಬಂದಾಗ, ದೇವರ ನಾಮ ಜಪಿಸಿ ಕಷ್ಟದಿಂದ ದೂರಮಾಡು ದೇವರೇ...ಎಂದು ಕೇಳುವುದು ಸಹಜ, ಮನಸ್ಸಿಗೆ ಧ್ಯಾನದಿಂದಲೋ ಅಥವಾ ಭಕ್ತಿಯಿಂದಲೋ ನೆಮ್ಮದಿ ಲಭಿಸಿದಾಗ ದೇವರಿಗೆ ಕೃತಜ್ಞತೆ ಸಲ್ಲಿಸುವುದು, ಹರಕೆ ತೀರಿಸುವುದು ಸಹಜ. ಭಕ್ತಿ ಸರ್ಮಪಣೆಗೆ ಹಲವು ಮಾರ್ಗಗಳು, ಭಕ್ತಿಸೇವೆ ಒಂದು ರೀತಿಯಲ್ಲಿ ಆಹಾರ ಸರಪಳಿ ಇದ್ದಂತೆ ಒಬ್ಬ ಭಕ್ತ ಅನ್ನ ನೀಡಿದರೆ ಮತ್ತೊಬ್ಬ ಭಕ್ತ ಉಂಡ ಎಲೆ ತೆಗೆಯುತ್ತಾನೆ. ವೃತ್ತಿ ಅನುಸಾರ ಸೇವೆಗಳು ಸಹ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವಕ್ಕೆ ಬರುವ ಪಾದಯಾತ್ರೆ ಭಕ್ತರಿಗೆ ಸಲ್ಲುತ್ತಿರುವುದನ್ನ ನೋಡಬಹುದು.

ಸಂಘ ಸಂಸ್ಥೆಗಳು ವಿವಿಧ ಬಗೆಯ ಆಹಾರ, ಹಣ್ಣು, ಬಿಸ್ಕೆಟ್, ಜ್ಯೂಸ್, ನೀರು, ಹೀಗೆ ಲೆಕ್ಕವಿಲ್ಲದಷ್ಟು ಆಹಾರ ಹಂಚಿಕೆ ಮಾಡುವ ಮೂಲಕ ಪಾದಯಾತ್ರೆ ಭಕ್ತರ ಸೇವೆ ಮಾಡಿ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಕೃಪೆಗೆ ಪಾತ್ರರಾಗಿರುವುದು ಅನೇಕ ಜನರು ನೋಡಿದ್ದಾರೆ. ಭಕ್ತಿ ಸರ್ಮಪಣೆ ಎಂಬುವುದು ಹೀಗೆ ಮಾಡಬೇಕು ಎಂಬ ನಿಯಮ ವಿಲ್ಲ, ಒಬ್ಬಬ್ಬ ಭಕ್ತರು ಒಂದೊಂದು ರೀತಿ ಸೇವೆ ಸಲ್ಲಿಸುವುದರಲ್ಲಿ ಶ್ರೀ ಸ್ವಾಮಿಯಲ್ಲಿ ಭಕ್ತಿ ಕಾಣುತ್ತಾರೆ. ಕೊಟ್ಟೂರು ಜಾತ್ರೆಯಲ್ಲಿ ಶ್ರೀಗುರು ಬಸವೇಶ್ವರ ಸ್ವಾಮಿ ಜಾತೆ–ಯ ಭಕ್ತರ ಸೇವೆ ನೋಡಿ, ಭಕ್ತಿಯ ಸೇವೆಯ ವಿವಿಧ ರೂಪಗಳನ್ನು ತಿಳಿಯಬಹುದು. ಪಟ್ಟಣದ ಹಸಿರು ಹೊನಲು ತಂಡಕ್ಕೆ ಪಟ್ಟಣವನ್ನು ಸ್ವಚ್ಚತೆಯಿಂದ ಇಟ್ಟುಕೊಳ್ಳಬೇಕೆಂದು ಅಲ್ಲಲ್ಲೇ ಕಸದ ತೊಟ್ಟಿಯನ್ನು ಕೃತಕವಾಗಿ ನಿರ್ಮಿಸಿದ್ದಾರೆ. ನಾಡಿನ ವಿವಿಧ ಕಡೆಗಳಿಂದ ಬಂದ ಪಾದಯಾತ್ರೆ ಭಕ್ತರಿಗೆ ಒಳ್ಳೆಯ ಸ್ವಚ್ಚಂದಪರಿಸರ ನೀಡುವ ಉದ್ದೇಶವೇ ದೈವಭಕ್ತಿ ಅನ್ನಬಾರದು ಯಾಕೆ ? ರಥೋತ್ಸವ ನಂತರದಿನ ಅವರ ತಂಡದಿಂದ ಸ್ವಚ್ಚತೆ ಮಾಡಿ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಕೃಪೆಗೆ ಪಾತ್ರರಾಗುವರು. ಭಕ್ತಿ ಎನ್ನುವುದು ನಾವು ಹೀಗೆ ಮಾಡಬೇಕು ಅನ್ನುವುದಲ್ಲ ಶ್ರೀ ಸ್ವಾಮಿ ಹೆಸರನ್ನ ಹೇಳಿ ಜನರ ಸೇವೆ ಮಾಡಿದರು ಸಾಕು ನಾವು ದೇವರಿಗೆ ಕೃಪೆಗೆ ಪಾತ್ರರಾಗುತ್ತೇವೆ.

ವಿಜಯನಗರ ಜಿಲ್ಲೆ, ಹರಪನಹಳ್ಳಿ ತಾಲೂಕು, ದುಗ್ಗತ್ತಿ ಗ್ರಾಮದ ಗೌತಮ್ ಸುಮಾರು 14 ವರ್ಷಗಳಿಂದ ನಿರಂತರ ಪಾದಯಾತ್ರೆ

ಮಾಡಿಕೊಂಡು ಬರುತ್ತಿದ್ದೇನೆ. ಮೂರು ವರ್ಷಗಳ ಕೆಳಗೆ ವಸಂತ ಎಂಬುವರ ಜೊತೆ ಮದುವೆ ಆಯಿತು. ನಮ್ಮಿಬ್ಬರ ಒಂದು ಗಂಡು ಮಗು ಹಿಂದಿನ ವರ್ಷ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ ದಿನದಂದು ಜನಿಸಿತ್ತು. ಆದರೆ ಮಗು ಅನಾರೋಗ್ಯ ಇರುವ ಕಾರಣ ನಾವು ಯಾವುದೇ ಭರವಸೆ ನೀಡಲಾಗದು ಎಂದು ವೈದ್ಯರು ಕೈಚೆಲ್ಲಿ ಕುಳಿತರು ನಮಗೆ ದಿಕ್ಕುತೋಚದಾಗ ನಾನು ನಂಬಿದ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿಯನ್ನು ಭಕ್ತಯಿಂದಲೇ ಮನದಲ್ಲಿ ನೆನೆದು ಸಂಕಲ್ಪ ಮಾಡಿಕೊಂಡೆ "ನಿನ್ನ ರಥೋತ್ಸವ ದಿನದಂದೇ 'ಜನಿಸಿದ ಮಗ'ನನ್ನು ನೀನೇ ರಕ್ಷಿಸಬೇಕು" ಎಂದು ಕೋರಿಕೊಂಡಿದ್ದೆ ಈಗ ನನ್ನ ಮಗನಿಗೆ ಒಂದು ವರ್ಷ ತುಂಬಿದೆ ಆರೋಗ್ಯದಿಂದ ಇದ್ದಾನೆ ಅದ್ದ–ರಿಂದ ಅವನನ್ನು ಕರೆದುಕೊಂಡು ದಂಪತಿ ಸಹಿತ ಶ್ರೀ ಸ್ವಾಮಿ ದರ್ಶನಕ್ಕೆ ಮಗುವಿನೊಂದಿಗೆ ಪಾದಯಾತ್ರೆ ಮೂಲಕ ಬಂದಿದ್ದೇವೆ. ಅಜ್ಜನನ್ನು ನಂಬಿದ್ದೇವೆ ನಮ್ಮನ್ನು ಕೈಬಿಟ್ಟಿಲ್ಲ ಕಷ್ಟಗಳನ್ನು ನಿವಾರಿಸುವ ಪವಾಡ ಪುರುಷ ಶ್ರೀಗುರು ಕೊಟ್ಟೂರೇಶ್ವರ ಸ್ವಾಮಿ ಎಂದು ಮನದಾಳದ ಭಕ್ತಿಯ ಮಾತುಗಳನ್ನು ಹಂಚಿಕೊಂಡರು. ಹಾಗು ಭಕ್ತರು ತಮ್ಮ ತಮ್ಮ ಗ್ರಾಮದಿಂದ ನೆಡೆದುಕೊಂಡು ಪಾದಯಾತ್ರೆ ಮೂಲಕ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ಮಹಾರಥೋತ್ಸವಕ್ಕೆ ಬರುವ ಹಲವಾರು ಭಕ್ತರಿಗೆ ಪಾದಗಳ ಉಪಸಮನ ಸೇವೆಯನ್ನು ಕೆಲ ಭಕ್ತರು ಮಾಡಿ ಶ್ರೀ ಗುರುಕೊಟ್ಟೂರೇಶ್ವರ ಸ್ವಾಮಿಯ ಕೃಪೆಗೆ ಪಾತ್ರರಾಗಿ ತಮ್ಮ ದೈವಭಕ್ತಿ ಸಮರ್ಪಿಸಿ ವಿಭಿನ್ನ ರೀತಿಯಲ್ಲಿ ಪಾದಯಾತ್ರೆ ಭಕ್ತರ ಸೇವೆ ಮಾಡಿದರು.

# 13ಕ್ಕೆ ನೇರ ಫೋನ್ ಇನ್ ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:**

ಬೆಂಗಳೂರು ಜಲಮಂಡಳಿಯ ಅಧ್ಯಕ್ಷರಾದ ಡಾ.ವಿ.ರಾಮ್ ಪ್ರಸಾತ್ ಮನೋಹರ್ ಅಧ್ಯಕ್ಷತೆಯಲ್ಲಿ ಫೆಬ್ರವರಿ 13 ರಂದು ಶುಕ್ರವಾರ ಬೆಳಿಗ್ಗೆ 09:30 ರಿಂದ 10:30 ರವರೆಗೆ ನೇರ ಫೋನ್–ಇನ್ ಕಾರ್ಯಕ್ರಮ ಆಯೋಜಿಸಲಾಗಿದೆ. ಸಾರ್ವಜನಿಕರು ತಮ್ಮ ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ/ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು–ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ಸಾರ್ವಜನಿಕರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆ; 080–22945119 ಮತ್ತು 080–22229639. ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆಯನ್ನು ತಿಳಿಸಿ ದೂರನ್ನು ನೀಡಬಹುದು. ಸಾರ್ವಜನಿಕರು ಈ ನೇರ ಫೋನ್–ಇನ್ ಕಾರ್ಯಕ್ರಮದ ಸದುಪಯೋಗಪಡಿಸಿಕೊಳ್ಳುವಂತೆ ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕುಕನೂರ: ತಾಲೂಕ ಪಂಚಾಯತಿ ಕಾರ್ಯಾಲಯದಲ್ಲಿ ಕಾಯಕ ಶರಣರ ಜಯಂತಿಯನ್ನು ಆಚರಿಸಲಾಯಿತು. ಮಾನ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕಾಯಕ ಶರಣರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪೂಜೆ ನೆರವೇರಿಸಿದರು. ಕಾರ್ಯಾಕ್ರಮದಲ್ಲಿ ತಾಪಂ ಸಿಬ್ಬಂದಿಗಳು ಹಾಜರಿದ್ದರು.

## ಮೋದಿ ವಿರುದ್ಧ ರಾಗ ಗುಡುಗು



ನವದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಬಜೆಟ್ ಚರ್ಚೆಯಲ್ಲಿ ಭಾಗವಹಿಸಿದ್ದ ಮೋದಿ ಸರ್ಕಾರದ ವಿರುದ್ಧ ಹರಿ ಹಾಯ್ದಿದ್ದಾರೆ. ಬಜೆಟ್ ಮೇಲಿನ ಚರ್ಚೆಯ ಸಂದರ್ಭದಲ್ಲಿ ಲೋಕಸಭೆಯಲ್ಲಿ ಮಾತನಾಡಿದ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಭಾರತ-ಅಮೆರಿಕಾ ವ್ಯಾಪಾರ ಒಪ್ಪಂದದ ಬಗ್ಗೆ ಅವರು ವಿವರವಾಗಿ ಚರ್ಚಿಸಿದರು. ಒಪ್ಪಂದವು ಸಂಪೂರ್ಣವಾಗಿ ಏಕಪಕ್ಷೀಯವಾಗಿದ್ದು, ಕೇಂದ್ರ ಸರ್ಕಾರ ಭಾರತವನ್ನು ಮಾರಾಟ ಮಾಡಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.

ನಾವು ಸ್ಥಿರತೆಯ ಪ್ರಪಂಚದಿಂದ ಅಸ್ಥಿರತೆಯ ಜಗತ್ತಿಗೆ ಚಲಿಸುತ್ತಿದ್ದೇವೆ, ಯುದ್ಧದ ಯುಗ ಮುಗಿದಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ ಆದರೆ, ನಾವು ಯುದ್ಧದ ಯುಗಕ್ಕೆ ಚಲಿಸುತ್ತಿದ್ದೇವೆ ಎಂದು ಅವರು ಹೇಳಿದರು. ಅಪಾಯಕಾರಿ ಜಗತ್ತಿಗೆ ಚಲಿಸುವಾಗ, ನಾವು ನಮ್ಮ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳಬೇಕು ಎಂದು ರಾಹುಲ್ ಗಾಂಧಿ ಗುಡುಗಿದ್ದಾರೆ.

ನಮ್ಮ ಜನರು, ಡೇಟಾ, ಆಹಾರ ಸರಬರಾಜು ಮತ್ತು ಇಂಧನ ವ್ಯವಸ್ಥೆಗಳನ್ನು ನಾವು ರಕ್ಷಿಸಬೇಕು. ನಾವು ಅಪಾಯಕಾರಿ ಪ್ರಪಂಚದತ್ತ ಸಾಗುತ್ತಿದ್ದೇವೆ ಮತ್ತು ನಮ್ಮ ಸಾಮರ್ಥ್ಯಗಳನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂದಿದ್ದಾರೆ.

## ಉತ್ತಮ ಅಂಕದ ಡಂಗೂರ ಭಾಗ್ಯ ದೂರ..!

**ಎಸೆಸೆಲ್ಸಿ ಪಿಯುಸಿ ಪರೀಕ್ಷೆ: ಮೊಬೈಲ್, ಟಿವಿ ಸ್ವಿಚ್ ಮಾಡಿ ಹಳ್ಳಿಗಳಲ್ಲಿ ಡಂಗುರ ಇಲ್ಲ..!**

• ಮಲ್ಲಮ್ಮ ನುಡಿ ವಾರ್ತೆ ವೀರೇಶ್ ಹೊಸಳ್ಳಿ, ಸಿಂಧನೂರು

ಎಸೆಸೆಲ್ಸಿ-ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶ ಬರಬೇಕು ಎಂಬ ಉದ್ದೇಶದಿಂದ ಸರ್ಕಾರ, ವಿದ್ಯಾರ್ಥಿಗಳು ಓದುವುದಕ್ಕೆ ತಂದೆ-ತಾಯಂದಿರು ತಮ್ಮ ಮನೆಗಳಲ್ಲಿ ಸಂಜೆ 7 ಗಂಟೆ ಯಿಂದ ರಾತ್ರಿ10 ಗಂಟೆ ವರೆಗೆ ಫೋನ್ ಹಾಗೂ ಟಿವಿ ಸ್ವಿಚ್ ಆಫ್ ಮಾಡಬೇಕು ಎಂದು ಪೋಷಕರು ಜಾಗೃತಿಗಾಗಿ ಶಿಕ್ಷಣ ಇಲಾಖೆಗೆ ಒಂದು ಸುತ್ತೋಲೆ ಹೊರಡಿಸಿದೆ.



ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಸಿಂಧನೂರು. ಜಿ.ರಾಯಚೂರು

ದಿನಾಂಕ : 4.2.2026

ಈಗಾಗಲೇ ತಾಲೂಕು ಶಿಕ್ಷಣಾಧಿಕಾರಿ ಬಸಲಿಂಗಪ್ಪ ಅವರು ಎಸೆಸೆಲ್ಸಿ-ಪಿಯುಸಿ ಪರೀಕ್ಷೆಗಳು ಮಾರ್ಚ್ ತಿಂಗಳಲ್ಲಿ ನಡೆಯುತಿ-ದ್ದು. ಈ ಹಿನ್ನೆಲೆಯಲ್ಲಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ-ನಿಮ್ಮ ವ್ಯಾಪ್ತಿಯ ಗ್ರಾ. ಪಂ, ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಪೋಷಕರು ಗಮನಕ್ಕೆ ತಮ್ಮ ಮನೆಯಲ್ಲಿ ಮಕ್ಕಳು ಟಿವಿ ಮೊಬೈಲ್ ಸ್ವಿಚ್ ಮಾಡಿ ಮಕ್ಕಳಿಗೆ ಓದುವುದಕ್ಕೆ ಅವಕಾಶ ನೀಡಬೇಕು ಎಂದು ಡಂಗುರ ಸಾರಲು ಮನವಿ ಪತ್ರ ಸಲ್ಲಿಸಿದ್ದರು. ಆದರೆ ಯಾವುದೇ ಪಿಡಿಒ ಅಧಿಕಾರಿಗಳು ತಮ್ಮ ಕಸವಿಲೇವಾರಿ ವಾಹನಗಳ ಮತ್ತು ಡಂಗುರ ಸಾರುವ ಕೆಲಸ ಮಾಡಿಲ್ಲ ಎನ್ನುವುದು ಜನರ ದೂರಾಗಿದೆ.

### ಕಾಯಂ ಉಪನ್ಯಾಸಕರೇ ಇಲ್ಲ..!

**ಗ್ರಾಮೀಣ, ನಗರ ಪ್ರದೇಶಗಳ ಯಾವ ಮಕ್ಕಳ ಸಹ ಶಿಕ್ಷಣದಿಂದ ವಂಚಿತರಾಗಬಾರದಂಬ ಕಾರಣಕ್ಕೆ ಸರ್ಕಾರ ಕೋಟ್ಯಂತರ ಹಣವನ್ನು ಖರ್ಚು ಮಾಡುತ್ತಿದೆ. ಆದರೂ ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳು ಫಲಿತಾಂಶ ಅಷ್ಟಕ್ಕಷ್ಟೆ. ಕಾರಣ ಶಾಲಾ ಕಾಲೇಜುಗಳಲ್ಲಿ ಪರ್ಮನೆಂಟ್ ಶಿಕ್ಷಕರು ಉಪನ್ಯಾಸಕರು ಇಲ್ಲದಿರುವುದು..! ಅಧಿಕಾರಿಗಳು ಕಾರ್ಯ ಸರಿಯಾಗಿ ನಿಭಾಯಿಸಿದೇ ಇರುವುದು ಮೂಲ ಕಾರಣ ಎಂದು ತಿಳಿದುಬಂದಿದೆ.**

ಒಂದು ವೇಳೆ ಲೀಟರ್ ಮೂಲಕ ಆದೇಶ ಬಂದರೆ ನಮ್ಮ ಕಸವಿಲೇವಾರಿ ವಾಹನಗಳ ಗ್ರಾಮೀಣ ವ್ಯಾಪ್ತಿಯ ಹಳ್ಳಿಗಳಲ್ಲಿ ಡಂಗುರ ಸಾರುವ ಮೂಲಕ ಜಾಗ್ರತೆ ಮೂಡಿಸುತ್ತವೆ. ಆದರೆ ಅದೇ ಬಂದಿಲ್ಲ.

-ಹೆಸರು ಹೇಳದ ಗ್ರಾಮ ಪಂ ಪಿಡಿಒ

ಹಳ್ಳಿಗಳಲ್ಲಿ ಡಂಗುರ ಸಾರುವ ಕೆಲಸ ಗ್ರಾಪಂ ಅಧಿಕಾರಿಗಳು ಮಾಡಿಲ್ಲ ಹಾಗಾಗಿ ಶಾಲಾ ಶಿಕ್ಷಕರು ಹಾಗೂ ಗ್ರಾಮ ಗ್ರಾಮ ಲೆಕ್ಕಾಧಿಕಾರಿ ಹಳ್ಳಿಗಳಲ್ಲಿ ಗ್ರಾಮ ಸಭೆ ಮಾಡಿ ಜಾಗ್ರತೆ ಮೂಡಿಸುವ ಕೆಲಸ ಯಾಗಬೇಕು. ಅದು ಬಿಟ್ಟು ಇಲ್ಲಿ ಬಿಒ ಲೀಟರ್ ಗೆ ಯಾವುದೇ ಕಿಮ್ಮತ್ತು ಇಲ್ಲ.

-ದಂಡೂರಪ್ಪ, ಸಿಂಧನೂರು

### ಮಾಹಿತಿಯೇ ಇಲ್ಲ ಎನ್ನುವ ಅಧಿಕಾರಿ..!

ಎಸೆಸೆಲ್ಸಿ ಪಿಯುಸಿ ಪರೀಕ್ಷೆಗಳು ಹಿನ್ನೆಯಲ್ಲಿ ಗ್ರಾ.ಪಂ. ವ್ಯಾಪ್ತಿಯ ಗ್ರಾಮಗಳಲ್ಲಿ ಡಂಗೂರ ಸಾರಿಸಲು ಕೋರಿ ಶಿಕ್ಷಣಾಧಿಕಾರಿ ಬಸಲಿಂಗಪ್ಪ ಅವರು ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿ. 4-2-2026 ರಂದು ಮನವಿ ಪತ್ರ ಸಲ್ಲಿಸಿದ್ದಾರೆ. ಆದರೆ ಇದುವರೆಗೂ ತಾಲೂಕು ಇಒ ಅಧಿಕಾರಿಗಳಿಂದ ಯಾವುದೇ ಲೀಟರ್ ಅಥವಾ ಮಾಹಿತಿ ಮಾಹಿತಿ ನಮ್ಮ ಗ್ರಾ.ಪಂ.ಗಳಿಗೆ ಲೆಟರ್ ಮಾಹಿತಿ ಬಂದಿರುವುದಿಲ್ಲ ಎನ್ನುತ್ತಿದ್ದಾರೆ ಹೆಸರು ಹೇಳಲಿಚ್ಛಿಸದ ಅಧಿಕಾರಿ.

## ರೈತರ ಅನಿರ್ದಿಷ್ಟಾವಧಿ ಧರಣಿ ಡಿಸಿ, ಎಸ್ ಪಿ ಮತ್ತು ಸಿಇಒ ಭೇಟಿ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ





ತಹಸೀಲ್ದಾರ್ ಕಚೇರಿಯ ಆವರಣದಲ್ಲಿ ಪ್ರಾರಂಭಗೊಂಡಿರುವ 63ನೇ ಬಲ್ಡೋಟ (ಬಿಎಸ್‌ಪಿಎಲ್) ಸ್ಥಾಪಿಸಿ ಇಲ್ಲವೇ ಸರ್ಕಾರಿ ನೌಕರಿ ಕೊಡಿ ಎಂಬ ರೈತರ ಅನಿರ್ದಿಷ್ಟಾವಧಿ ಧರಣಿಗೆ ಇಂದು ಕೊಪ್ಪಳ ಜಿಲ್ಲಾಧಿಕಾರಿ ಎಸ್ ಪಿ ಮತ್ತು ಸಿಇಒ ಭೇಟಿ ನೀಡಿ ಮುಖ್ಯಮಂತ್ರಿಗಳಿಗೆ ನಿಮ್ಮ ಬೇಡಿಕೆಯನ್ನು ಸಲ್ಲಿಸಿ ಸಕರಾತ್ಮಕವಾಗಿ ಸ್ಪಂದಿಸುವದಾಗಿ ಭರವಸೆ ನೀಡಿದರು.

20 ವರ್ಷಗಳ ಹಿಂದೆ ಕೆಐಎಡಿಬಿ ಮುಖಾಂತರ ರಾಜ್ಯ ಸರ್ಕಾರವು ಹಾಲವರ್ತಿ, ಬಸಾಪುರ ಕೊಪ್ಪಳ ಕಿಡದಾಳ ಗ್ರಾಮಗಳ ರೈತರ ಜಮೀನನ್ನು ಕಾರ್ಖಾನೆ ಸ್ಥಾಪಿಸುವ ಉದ್ದೇಶದಿಂದ ಭೂಸ್ವಾಧೀನ ಪಡಿಸಿಕೊಂಡಿದ್ದು ಇರುತ್ತದೆ ಆದರೆ ಇನ್ನೂವರಿಗೆ ಕಾರ್ಖಾನೆ ಸ್ಥಾಪನೆಯಾಗಿಲ್ಲ ಕಾರಣ 1034 ಎಕರೆ ಭೂಮಿ ಕಳೆದುಕೊಂಡ 359 ರೈತರ ಸ್ಥಿತಿ ಅತಂತ್ರವಾಗಿದೆ. ಕಾರ್ಖಾನೆ ಬಲ್ಡೋಟ ಸ್ಥಾಪಿಸಿ ಇಲ್ಲವೇ ನಮ್ಮ ರೈತರ ಮಕ್ಕಳಿಗೆ ಸರ್ಕಾರಿ ನೌಕರಿ ಕೊಡಿ ಎಂದು ಪಟ್ಟು ಹಿಡಿದ 63ನೇ ದಿನದ ಧರಣಿ ನಿರತ ರೈತ ಹೋರಾಟಗಾರರಿಗೆ ಇಂದು ಮಾನ್ಯ ಜಿಲ್ಲಾಧಿಕಾರಿಗಳು ಆಗಮಿಸಿ ನಾವು ರೈತರ ಪರವಾಗಿ ನಿಲ್ಲುತ್ತೇವೆ ಮಾನ್ಯ ಮುಖ್ಯಮಂತ್ರಿಗಳಿಗೆ ನಿಮ್ಮ ಬೇಡಿಕೆಯ ಬಗ್ಗೆ ಮಾಹಿತಿಯನ್ನು ರವಾನಿಸುತ್ತೇವೆ. ಹಾಗೂ ರೈತರ ಮಕ್ಕಳಿಗೆ ಅನ್ಯಾಯವಾಗಲು ಬಿಡುವುದಿಲ್ಲ ಎಂದು ಸಕಾರಾತ್ಮಕವಾಗಿ ಜಿಲ್ಲಾಧಿಕಾರಿಗಳಾದ ಸುರೇಶ್ ಹಿಟ್ನಾಳ್, ಎಸ್ ಪಿ ಡಾ. ರಾಮ್ ಎಲ್ ಅರಸಿದ್ದಿ ಮತ್ತು ಸಿಇಒ ವರ್ಣಿತ ನೇಗಿ ಸ್ಪಂದಿಸಿದರು.

ಈ ಸಂದರ್ಭದಲ್ಲಿ ರೈತ ಮುಖಂಡರಾದ ಹನುಮಂತಪ್ಪ ಕೌದಿ, ಮಲ್ಲಪ್ಪ ಚುಕನಕಲ್, ರಮೇಶ್ ಕಂಬಳಿ, ಹನುಮೇಶ್ ಹಾಲವರ್ತಿ ಮನೋಜ್ ಹಾಲವರ್ತಿ, ಸ್ವಾಮಿ ಹಾಲವರ್ತಿ, ಪ್ರಾಣೇಶ್ ಹಾಲವರ್ತಿ, ಮಾರುತಿ ಕುರುಗಡ್ಡಿ, ಯಮನೂರಪ್ಪ ಏಳ್ ಕುರಿ, ಈರಣ್ಣ ಶೆಟ್ಟರ್, ಪೀರಸಾ , ಮಲ್ಲೇಶ್ ಕುಟಗನಳ್ಳಿ, ಹುಲುಗಪ್ಪ ಕಂಬಳಿ, ನಾಗರಾಜ್ ಭೋವಿ ಇತರರು ಇದ್ದರು.

## ಕೈಗಾರಿಕಾ ನಿವೇಶನ ದರ ಕಡಿಮೆ: ಮನವಿ

• ಮಲ್ಲಮ್ಮ ನುಡಿ ವಾರ್ತೆ ಚಿತ್ತಾಪುರ

ಪಟ್ಟಣದ ಡಿಗ್ರಿ ಕಾಲೇಜ್ ಹತ್ತಿರ ಭಾಗೋಡಿ ರಸ್ತೆಯಲ್ಲಿ ನಿರ್ಮಾಣವಾದ ಕೆಎಡಿಸಿ ಕೈಗಾರಿಕಾ ನಿವೇಶನ ದರ ಕಡಿಮೆ ಮಾಡುವಂತೆ ಆಗ್ರಹಿಸಿ ಸಿಟಿಎಎ ತಾಲೂಕು ಅಧ್ಯಕ್ಷ ಸೈಯದ್ ನಿಜಾಮುದ್ದೀನ್ ಚಿಸ್ತಿ ಅವರು ಮಂಗಳವಾರ ಜಿಲ್ಲಾಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿದರು.

ತಾಲೂಕು ಸಣ್ಣ ಕೈಗಾರಿಕಾ ಸಂಘ (CTSSIA) ದ ತಂಡವು ಕಲಬುರಗಿ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರನ್ನು ಚಿತ್ತಾಪುರದ ನೂತನ KSSIDC ಕೈಗಾರಿಕಾ ಲೇಔಟ್‌ನಲ್ಲಿ ಭೇಟಿ ಮಾಡಿದ ಸಂದರ್ಭದಲ್ಲಿ ಮನವಿ ಪತ್ರವನ್ನು ಸಲ್ಲಿಸಿದ್ದರು.

KSSIDC ಕೈಗಾರಿಕಾ ಲೇಔಟ್‌ನಲ್ಲಿ ಜಾಗಗಳ ದರ ತುಂಬಾ ಹೆಚ್ಚಿರುವುದರಿಂದ, ಚಿತ್ತಾಪುರದಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (MSMEಗಳು) ಆರಂಭವಾಗಲು ಮತ್ತು ಬೆಳೆಯಲು ಕಷ್ಟವಾಗುತ್ತಿದೆ ಎಂದು ವಿವರಿಸಲಾಯಿತು.

ಚಿತ್ತಾಪುರ ಪ್ರದೇಶವು ಅತ್ಯಂತ ಹಿಂದುಳಿದ ಪ್ರದೇಶವಾಗಿದ್ದು, ಇಲ್ಲಿ MSMEಗಳ ಸಂಖ್ಯೆ ತುಂಬಾ ಕಡಿಮೆ ಇದೆ. ಆದ್ದರಿಂದ ಕೈಗಾರಿಕಾ ಜಾಗಗಳ ದರದಲ್ಲಿ 50% ಅನುದಾನ (ಸಬ್ಸಿಡಿ) ನೀಡುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವಂತೆ CTSSIA ಮನವಿ ಮಾಡಿದ್ದರು. ಜಿಲ್ಲಾಧಿಕಾರಿಗಳು ತುಂಬಾ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ, ಸಂಘದ ಮನವಿಗಳನ್ನು ಗಮನದಿಂದ ಆಲಿಸಿದರು. ಈ ವಿಷಯವನ್ನು ಅವರು ಅಲ್ಲಿದ್ದ KSSIDC ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಅವರು ಈ ವಿಷಯವನ್ನು ಸಿಂಗಲ್ ವಿಂಡೋ ಸಮಿತಿ ಸಭೆಯಲ್ಲಿ ಚರ್ಚಿಸಿ, ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸುವುದಾಗಿ ಹಾಗೂ ಚಿತ್ತಾಪುರದ ಸಣ್ಣ ಕೈಗಾರಿಕೆಗಳ ಅಭಿವೃದ್ಧಿಗಾಗಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.



## ಸಾಮೂಹಿಕ ಇಷ್ಟಲಿಂಗ ಪೂಜೆಯಲ್ಲಿ ಭಾಗವಹಿಸಿ



• ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ

ಫೆ.15ಕ್ಕೆ ಮಹಾಶಿವರಾತ್ರಿ ಅಂಗವಾಗಿ ಕುಂಬಾರ ಗುಂಡಯ್ಯ ಕಲ್ಯಾಣ ಮಂಟಪದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗಪಟ್ಟದ್ದೇವರು ಹೇಳಿದರು.

ಪಟ್ಟಣದ ಚನ್ನಬಸವಾಶ್ರಮ ಪರಿಸರದಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆಯ ಕರಪತ್ರ ಬಿಡುಗಡೆ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಶರಣರ ದೃಷ್ಟಿಯಲ್ಲಿ ಮಹಾಶಿವರಾತ್ರಿಯು ಕೇವಲ ವರ್ಷಕ್ಕೊಮ್ಮೆ ಬರುವ ಹಬ್ಬವಲ್ಲ ಬದಲಾಗಿ ಲಿಂಗಾರ್ಚನೆ ಮತ್ತು ಶಿವಧ್ಯಾನದ ಮೂಲಕ ಪ್ರತಿನಿತ್ಯ ಆಚರಿಸುವ ಅಂತರಂಗದ ಜಾಗರಣೆಯಾಗಿದೆ.

ಹಾಗಾಗಿ ಅಂದು ಮಧ್ಯಾಹ್ನ 1 ಗಂಟೆಗೆ ನಡೆಯಲಿರುವ ಸಾಮೂಹಿಕ ಇಷ್ಟಲಿಂಗ ಪೂಜೆ ಕಾರ್ಯಕ್ರಮದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಳ್ಳಬೇಕು ಎಂದರು. ಇಷ್ಟಲಿಂಗ ಪೂಜೆ ಆತ್ಮಾನುಭೂತಿ, ಏಕಾಗ್ರತೆ ಮತ್ತು ಮನೋಬಲ ಹೆಚ್ಚಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ತಾಲೂಕು ಕಸಾಪ ಅಧ್ಯಕ್ಷ ನಾಗಭೂಷಣ ಮಾಮಡಿ, ತಾಲೂಕು ಜಾಗತಿಕ ಲಿಂಗಾಯತ ಮಹಾಸಭೆಯ ಅಧ್ಯಕ್ಷ ಬಸವರಾಜ ಮರೆ, ನಿವೃತ್ತ ಎಂಜಿನಿಯರ್ ಶರಣಪ್ಪ ಬಿರಾದಾರ್, ಶಿವಾನಂದ ಗುಂದಗೆ, ರೇಖಾಬಾಯಿ ಅಷ್ಟೂರೆ, ರೇಖಾ ಮಹಾಜನ ಸೇರಿದಂತೆ ಹಲವರು ಇದ್ದರು.

## ಸೌಲಭ್ಯಗಳ ಬೇಡಿಕೆ ಈಡೇರಿಕೆಗಾಗಿ ಆಗ್ರಹ

• ಮಲ್ಲಮ್ಮ ನುಡಿ ವಾರ್ತೆ ಹುಣಸೂರು



ಕರ್ನಾಟಕ 26-27ನೆಯ ಸಾಲಿನ ಆಯಾ ಆಯವ್ಯ ಕ್ರೈಸ್ತ ಸಮುದಾಯದ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯ ಸರ್ಕಾರಿ ಯೋಜನೆಗಳ ಅನುಷ್ಠಾನ ಸೇರಿದಂತೆ ವಿವಿಧ ಸೌಲಭ್ಯಗಳ ಬೇಡಿಕೆಗಳನ್ನು ಈಡೇರಿಕೆಗಿ ಆಗ್ರಹಿಸಿ ಕರ್ನಾಟಕ ರಾಜ್ಯದ ಅಲ್ಪಸಂಖ್ಯಾತರ ಮತ್ತು ವಕ್ ಬೋರ್ಡ್ ಇಲಾಖೆಯ ಸಚಿವರಾದ ಬಿ ಜೆಡ್ ಜಮೀರ್ ಅಹ್ಮದ್ ಖಾನ್ ರವರಿಗೆ ಮನವಿ ಪತ್ರ ಸಲ್ಲಿಸಿದ್ದೇವೇ ಎಂದು ಅಲ್ಪಸಂಖ್ಯಾತರ ಕ್ರೈಸ್ತ ಹಿತ ರಕ್ಷಣಾ ಸಮಿತಿಯ ಅಧ್ಯಕ್ಷರಾದ ಕೂಡ್ಲೂರು ಎಂ ಜಾರ್ಜ್ ತಿಳಿಸಿದ್ದಾರೆ.

ನಂತರ ಪತ್ರಿಕಾ ಹೇಳಿಕೆ ನೀಡಿ ರಾಜ್ಯದ ಕ್ರೈಸ್ತ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ಪ್ರೊ ಜೋ ಪಟ್ ರವರ ಅಧ್ಯಕ್ಷತೆಯಲ್ಲಿ ಇತ್ತೀಚಿಗೆ ನಡೆದ ಸಚಿವರಾದ ಜಮೀರ್ ಅಹ್ಮದ್ ಖಾನ್ ಅವರನ್ನು ಸಮುದಾಯದ ಮುಖಂಡರು ಸಮಿತಿಯ ಸದಸ್ಯರುಗಳು ಪಾಸ್ಟರ್ ಫಾದರ್‌ಗಳು ಸರ್ಕಾರದಿಂದ ಸಹಾಯಧನವನ್ನು ಮನವಿ ಅಲ್ಲದೆ ಕ್ರೈಸ್ತ ಕಾಲೋನಿಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸುವುದು ಸ್ಮಶಾನಕ್ಕೆ ಇಲ್ಲದ ಊರುಗಳು ಸ್ಮಶಾನದ ಅಭಿವೃದ್ಧಿ ಬಡ ಕುಟುಂಬಗಳಿಗೆ ವಸತಿ ಸೌಲಭ್ಯಗಳು ಹಾಡು ಕುರಿ ಹಸು ಸಾಗಣಿಕೆಗೆ ಆರ್ಥಿಕ ನೆರವು ಹಾಗೂ ವಾಹನ ಖರೀದಿ ಗಂಗಾ ಕಲ್ಯಾಣ ಯೋಜನೆ ಸವಲತ್ತುಗಳನ್ನು ನೀಡಲು ಮನವಿ ಸಲ್ಲಿಸಲಾಗಿದೆ. ಸಚಿವರು ಮನವಿ ಸ್ವೀಕರಿಸಿ ಸಚಿವರಾದ ಬಿ ಝೆಡ್ ಝುಮೀರ್ ಅಹ್ಮದ್ ಖಾನ್ ಮಾತನಾಡಿ ನಾನು 700 ಕೋಟಿ ಬೇಡಿಕೆಯನ್ನು ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಅನುದಾನವನ್ನು ಕೊಡಲು ಮೀಸಲಿಗಾಗಿ ಇಡಲು ನಾನು ಒತ್ತಾಯಿಸುವುದಕ್ಕೆ ಭರವಸೆ ನೀಡಿದರು ಎಂದು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸಚಿವರಾದ ರಹೀಮ್ ಖಾನ್, ತಾಲೂಕಿನ ನೋಹೆನ್ ಸಹಕಾರ ಸಂಘದ ಅಧ್ಯಕ್ಷ ಚಿ ಜಾರ್ಜ್ ಜೋಸೆಫ್ ಹಂಟ್, ಸದಸ್ಯರಾದ ಗೀತಾ, ಮಾಜಿ ಅಧ್ಯಕ್ಷರಾದ ಬಲ್ಲವೇಂದ್ರನ್, ಕಾರ್ಯದರ್ಶಿ ದೇವ ಮತ್ತು ಡೊನಾಲ್ಡ್ ಪ್ರಕಾಶ್, ರಾಜಪ್ಪ ಜಾನ್ ಕಿಶೋರ್, ಪ್ರಿಯಾಂಕಾ ಇದ್ದರು.

## ದತ್ತಾತ್ರೇಯ ದೇಗುಲ ನೀಲನಕ್ಷೆ ವೀಕ್ಷಿದ ಸಚಿವ

• ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ



500 ವರ್ಷಗಳ ಪರಂಪರೆ ಹೊಂದಿರುವ ಜಿಲ್ಲೆಯ ಅಫಜಲಪುರದ ತಾಲೂಕಿನ ಶ್ರೀ ಕ್ಷೇತ್ರ ಗಾಣಗಾಪುರದ ದತ್ತಾತ್ರೇಯ ದೇವಾಲಯವು ಪ್ರಸಿದ್ಧ ಧಾರ್ಮಿಕ ಶ್ರದ್ದಾಕೇಂದ್ರದ ಅಭಿವೃದ್ಧಿ ಕುರಿತು ಮುಜರಾಯಿ ಇಲಾಖೆ, ಪ್ರವಾಸೋದ್ಯಮ ಇಲಾಖೆ, ಗ್ರಾಮೀಣಾಭಿವೃದ್ಧಿ ಇಲಾಖೆಗಳ ಸಹಯೋಗದಲ್ಲಿ ರೂಪುರೇಷೆ ಸಿದ್ಧಪಡಿಸಲಾಗುತ್ತಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಮತ್ತು ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಮಲ್ಲಮ್ಮ ನುಡಿ ಜೊತೆ ಮಾತನಾಡಿದ ಅವರು, ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಕಾರ್ಯಯೋಜನೆ ರೂಪಿಸಲಾಗುತ್ತಿದೆ ಎಂದಿದ್ದು, ಈ ನಿಟ್ಟಿನಲ್ಲಿ ಅಫಜಲಪುರ ಕ್ಷೇತ್ರದ ಶಾಸಕ ಎಂ.ವೈ ಪಾಟೀಲ್ ಅವರೊಂದಿಗೆ ಸಭೆ ನಡೆಸಿ, ತಜ್ಞರು ರೂಪಿಸಿರುವ ನೀಲನಕ್ಷೆಯನ್ನು ಅವಲೋಕಿಸಿದ್ದಾರೆ.

ದೇಶದ ವಿವಿಧ ಭಾಗಗಳಿಂದ ಅನೇಕ ಭಕ್ತಾದಿಗಳು ಗಣಗಾಪುರಕ್ಕೆ ಆಗಮಿಸುತ್ತಾರೆ. ಭೀಮಾ ಮತ್ತು ಅಮರ್ಜಾ ನದಿಯ ಸಂಗಮವು ಇಲ್ಲಿನ ಧಾರ್ಮಿಕ ಶ್ರೇಷ್ಠತೆಯನ್ನು ಇನ್ನಷ್ಟು ಹೆಚ್ಚಿಸಿದೆ. ಹಾಗೂ ಅಫಜಲಪುರ ತಾಲೂಕಿನ ಇನ್ನೊಂದು ಪ್ರಸಿದ್ಧ ಧಾರ್ಮಿಕ ಶ್ರದ್ಧಾ ಕೇಂದ್ರವಾದ ಘತ್ತರಗಿ ಭಾಗಮ್ಮ ದೇವಾಲಯ ಕೂಡ ಹೆಚ್ಚಿನ ಭಕ್ತ ಸಮೂಹವನ್ನು ಹೊಂದಿದೆ. ಈ ಕಾರಣಕ್ಕಾಗಿ ಎರಡು ಕ್ಷೇತ್ರಗಳ ಅಭಿವೃದ್ಧಿ ಮಾಡಲಾಗುತ್ತಿದೆ.

## ಲಕ್‌ಪತಿ ದೀದಿ ತರಬೇತಿ ಕಾರ್ಯಾಗಾರ

• ಮಲ್ಲಮ್ಮ ನುಡಿ ವಾರ್ತೆ ಕೊಪ್ಪಳ



ಇಂದು ತಾಲೂಕ ಪಂಚಾಯತ್ ಸಭಾಂಗಣದಲ್ಲಿ ಕೊಪ್ಪಳ ತಾಲೂಕಿನ ಸಂಜೀವಿನಿ ಯೋಜನೆಯ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಕೃಷಿ ಸಖಿ, ಪಶುಸಖಿ, ಬಿಸಿ ಸಖಿ, ಸಿ.ಆರ್.ಪಿ-ಇ.ಪಿ ರವರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ನರೇಗಾ ಯೋಜನೆಯ ಮಾನ್ಯ ಸಹಾಯಕ ನಿರ್ದೇಶಕರಾದ ಶ್ರೀಮತಿ ಸೌಮ್ಯ ಕೆ. ರವರು ಸಸಿಗೆ ನೀರು ಹಾಕುವ ಮೂಲಕ ಚಾಲನೆ ನೀಡಿದರು.

ಸದರಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ, ಗ್ರಾಮೀಣ ಭಾಗದ ಸ್ವ-ಸಹಾಯ ಗುಂಪುಗಳ ಸದಸ್ಯರುಗಳಿಗೆ ಲಕ್‌ಪತಿ ದೀದಿ ಕಾರ್ಯಕ್ರಮದ ಗುರಿ ಮತ್ತು ಉದ್ದೇಶಗಳೊಂದಿಗೆ ಕೈಗೊಳ್ಳಬಹುದಾದ ವಿವಿಧ ಜೀವನೋಪಾಯ ಚಟುವಟಿಕೆ ಕುರಿತು ಅರಿವು ಮೂಡಿಸುವ ಸಲುವಾಗಿ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಕೃಷಿ ಸಖಿ, ಪಶುಸಖಿ, ಬಿಸಿ ಸಖಿ, ಸಿ.ಆರ್.ಪಿ-ಇ.ಪಿ ರವರಿಗೆ ಒಂದು ದಿನದ ತರಬೇತಿ ಕಾರ್ಯಕ್ರಮವನ್ನು ಆಯೋಜಿಸಿ ಮಹಿಳಾ ಸ್ವ-ಸಹಾಯ ಗುಂಪುಗಳ ಲಕ್‌ಪತಿ ದೀದಿ ರವರುಗಳ ಆರ್ಥಿಕ ಬಲವರ್ಧನೆಗೆ ಸಹಕಾರಿಯಾಗಿದೆ ಎಂದು ಹೇಳಿದರು.

ತದನಂತರ, ಸದರಿ ಕಾರ್ಯಕ್ರಮದ ತರಬೇತಿದಾರರಾದ ಸಾಬಣ್ಣ, ತಾಲೂಕ ಕಾರ್ಯಕ್ರಮ ವ್ಯವಸ್ಥಾಪಕರು ಪ್ರಸ್ತಾವಿಕವಾಗಿ ಮಾತನಾಡುತ್ತಾ, 2025-26ನೇ ಸಾಲಿನ ಅನುಮೋದಿತ ವಾರ್ಷಿಕ ಕ್ರಿಯಾ ಯೋಜನೆಯನ್ವಯ ರಾಜ್ಯದಲ್ಲಿ ಇದುವರೆಗೆ ಒಟ್ಟು 12,75,138 ಸ್ವಸಹಾಯ ಗುಂಪುಗಳ ಸದಸ್ಯರನ್ನು ಲಕ್‌ಪತಿ ದೀದಿಗಳನ್ನಾಗಿ ಗುರುತಿಸಲಾಗಿದ್ದು, ಅದರಲ್ಲಿ 5,37,469 ಸದಸ್ಯರು ಯೋಜನೆಯಡಿ ವಿವಿಧ ಜೀವನೋಪಾಯ ಚಟುವಟಿಕೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಈಗಾಗಲೇ ಲಕ್‌ಪತಿ ದೀದಿ ಸ್ಥಾನವನ್ನು ಪಡೆದಿರುತ್ತಾರೆ. ಉಳಿದ 7,42,945 ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ಲಕ್‌ಪತಿ ದೀದಿ ಕಾರ್ಯಕ್ರಮದ ಗುರಿ, ಉದ್ದೇಶಗಳು ಹಾಗೂ ಕೈಗೊಳ್ಳಬಹುದಾದ ವಿವಿಧ ಜೀವನೋಪಾಯ ಚಟುವಟಿಕೆ ಕುರಿತು ಅರಿವು ಮೂಡಿಸುವುದರೊಂದಿಗೆ ಸ್ಥಳೀಯ ಭೌಗೋಳಿಕ ಅವಕಾಶಗಳಿಗೆ ಅನುಗುಣವಾಗಿ ಜೀವನೋಪಾಯ ಚಟುವಟಿಕೆಗಳು, ಇತರೆ ಇಲಾಖೆಗಳೊಂದಿಗೆ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿರವರೊಂದಿಗೆ ಮತ್ತು ಬ್ಯಾಂಕರ್ಸ್ ರವರೊಂದಿಗೆ ಒಗ್ಗೂಡಿಸುವಿಕೆ ಲಭ್ಯತೆಗೆ ಅನುಗುಣವಾಗಿ ಹಣಕಾಸು ವ್ಯವಸ್ಥೆಗಳ ಕುರಿತ ಲಕ್‌ಪತಿಗಳನ್ನಾಗಿ ರೂಪಿಸುವ ಉದ್ದೇಶದಿಂದ ವಿಶೇಷ ತರಬೇತಿಯನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಜೀವಿನಿ ಯೋಜನೆಯ ತಾಲೂಕ ಅಭಿಯಾನ ನಿರ್ವಹಣಾ ಘಟಕದ ವಲಯ ಮೇಲ್ವಿಚಾಕ ವೆಂಕಟೇಶ, ವಿದ್ಯಾಲಕ್ಷ್ಮೀ, ವೀರೇಶ, ಕೃಷಿಯುವ ವೃತ್ತಿಪರರಾದ ಮಂಜುನಾಥ, ಕೃಷಿಯೇತರ ತಾಲೂಕ ವ್ಯವಸ್ಥಾಪಕರಾದ ಕೊಟ್ರೇಶ್, ಬಿಆರ್‌ಪಿ ಇಪಿ ರವರಾದ ಸಿದ್ಧಮ್ಮ, ಗಣಕಯಂತ್ರ ನಿರ್ವಹಕಾರದ ನವೀನ ಹಾಗೂ ಸಂಜೀವಿನಿ ಒಕ್ಕೂಟಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಬಿರಾರ್ಥಿಗಳಾದ ಸಮುದಾಯ ಸಂಪನ್ಮೂಲ ವ್ಯಕ್ತಿಗಳಾದ ಕೃಷಿ ಸಖಿ, ಪಶುಸಖಿ, ಬಿಸಿ ಸಖಿ, ಸಿ.ಆರ್.ಪಿ-ಇ.ಪಿ ರವರು ಉಪಸ್ಥಿತರಿದ್ದರು.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)